SRI H. V. KOJALGI : The prayer was for attachment of moveables and recovery of money.

ಶ್ರೀ ಬೋಳ ರಘುರಾಮಶೆಟ್ಟಿ : ಡಿಕ್ರಿ ಯಾವಾಗ ಆಯಿತು? ಡಿಕ್ರಿ ಯಾದನಂತರ ಇಷ್ಟು ಸಣ್ಣ ಮೊಬಲಗನ್ನು ಇನ್ನೂ ಕೂಡದೇ ಇರಲು ಕಾರಣವೇನು?

SRI H. V. KOUJALGI : I think the decree was passed on 31st January 1969.

ಶ್ರೀ ಎಂ. ನಾಗಪ್ಪ : ೧೯೬೯ನೇ ಜನವರಿಯಲಿ ಡಿಕ್ರಿಯಾದರೂ ಸಹ ಒಂದು ವರ್ಷದವರೆಗೂ ಹಣ ಕೂಡದೆ ಹಾಗೆಯೇ ಬಿಟ್ಟಿರುವುದಕ್ಕೆ ಕಾರಣವೇನು? ೨೨ನೇ ಜನವರಿ ೧೯೭೦ಕ್ಕೆ ಅಟ್ಯಾಚ್‌ಮೆಂಟ್ ಮಾಡಿ ಎಂದು ಸಿವಿಲ್ ಜಡ್ಜ್ ಆರ್ಡರ್ ಪಾಸ್ ಮಾಡಿದ್ದು ನಿಜವೇ?

SRI H. V. KOUJALGI : From the records I find that there was only a prayer and the orders were not yet passed.

ಶ್ರೀ ಬಿ. ಭಾಸ್ಕರಶೆಟ್ಟಿ : ೨೨ನೇ ಜನವರಿ ೧೯೭೦ಕ್ಕೆ ಜಪ್ತಿ ಮಾಡಿದ್ದು ನಿಜವೇ? ಅವಲ್ ಜಾರಿ ಯಾಗಿದೆಯೆಂದು ಹೇಳಿದ್ದೀರಿ. ೫೦೯-೯೪ ರೂಪಾಯಿಗಳನ್ನು ವಸೂಲು ಮಾಡಿಕೊಳ್ಳುವುದಕ್ಕೆ ಅಮಲ್ ಜಾರಿ ಬಂದಿದೆಯೆಂದರೆ, ಇಷ್ಟು ದೊಡ್ಡ ಸಿಂಡಿಕೇಟ್ ಸರ್ಕಾರಕ್ಕೆ ನಾಚಿಕೆಯಲ್ಲವೇ?

SRI H. V. KOUJALGI : When there is a claim and the Government did not admit it, they went on an appeal. It was dismissed. They wanted to go in revision but the legal opinion was that it was not necessary. In the meanwhile there was delay in taking action.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ : ವಾರಂಟ್ ಹೋಗಿದ್ದು ನಿಜವೋ ಇಲ್ಲವೊ?

ಶ್ರೀ ಎಚ್. ವಿ. ಕೌಜಲಗಿ : ಇಲ್ಲ.

ಶ್ರೀ ಎನ್.ಲೋಕಯ್ಯನಾಯಕ್: ಆ ರೀತಿ ಜಪ್ತಿ ಮಾಡಿದಂತಹವರಿಗೆ ''ಪದ್ಮಶ್ರೀ ಭೂಷಣ'' ಎಂಬ ಪದವಿ ಕೊಡುತ್ತೀರಾ?

MR. SPEAKER : It need not be replied. Now we go to call attention Notice. The Hon. Member who has given notice of it is not present. Now we will take up Financial Business. Sri Amalorpavam will speak on the Demands.

BUDGET ESTIMATES FOR 1970-71 DEMANDS FOR GRANTS

[(*Demands Nos. 10, 12 & 13 Debate Contd*)]

Sri M. A. AMALORPAVAM:—(Bharatinagar) Mr. Speaker, I rise with your permission to support Demands Nos. 10, 12 and 13 pertainig to the General Admnistration, Jails and Police. I must confess that we are all very happy that ever since Sri Veerendra Patil took over as Chief

Minister he has certainly tried his best to tone up the general administration. I do not say that all our expectations have been fulfilled but by and large the endeavour of Sri Veerendra Patil has certainly had a very beneficial effect on the tenor of administrattion. Redtapism has become such a common feature that the general public were very much dissatisfied with the way the representatives of the public were disposed of. But after Sri Veerendra Patil became the Chief Minister he has been making honest and earnest efforts to cut down this redtapism and tried to see that to the maximum extent the files are disposed of as promptly and expeditiously as possible. Inspite of all that, we feel that he has not been able to receive co-operation that he is expected to receive, that he is entiled to receive from some of the top officers who are at the helm of affairs. It is rather unfortunate that inspite of the fact that we are living in a new set up, a different set up, a democratic set up, some officers are still in the ivory tower and they continue to have the same bureaucratic approach and outlook that they had during the Britsh Imperialistic regime. They seem to imagine that they have no responsibility towards the people and they can affort to treat them as our former rules were treating them. It is high time that some of the officers, I do not say all the officers are doing it; I must congratulate many of the officers who have changed in tune with thechanged circumstance and changes their outlook.

But even to-day there are a few Officers who have no patience to treat courtously the representatives of the public when they approach with genuine problems. Very often even when they come with very ordinay requests, those requests are not complied with and even the Ministers are not trying their best to see that the representations of the members of the Assembly are attended to. I am sorry to say that some of the Ministers are not taking due interest in the representations and some representations remained in cold storage for months together. We will have to run umpteen number of times to these officers, beg of them, beseach them, implore them, cajole them and make them feeling they are doing very great service to them. This is the attitude of the officers in is 20th Century. I can just remember the days of Britishers when we were all treated as servants. That kind of attitude is still there among the officers. Though I stand to support the demands, I am making a request to the Chief Minister and the other Ministers to direct their officers to see that a fairly good administration is given in respect of their offices. I have made it very clear how the officers are behaving. It must be accepted without any clarification or mental reservation that the officers are not listening to the complaints and they are not caring to study the problems which they ought to. Nearly Rs. 15 crores and odd have been demanded for the General Administration, Jails and Police and the people of Mysore are not in any way hesitent to support the demands without any reservation provided they are assured that the administration is sincerely interested in Solving the problems of the common man. Sir, sometimes we feel the

(Sri M. AMALORPAVAM)

stand of the enlightened Opposition of Mysore is very severe on the Treasury Bench. Sometimes I cannot but agree with the enlightened Opposition that their criticism is reasonable maintainable and it has also some substance. We find some members attack very severely because their legitimate claims and requests are not complied with on some flimsy grounds. Even the genuine requests on behalf of the teaming millions are being turned out or their requests will go uncared for though deserve proper deal. With all humility and conviction at my command I request the Chief Minister and other Ministers kindly to see that the officers are given a direction in this regard. As I told you all the officers are not bad. Some of the officers are very good. But certain officers, I am afraid, are very adament and are not changing their attiude. Unless they are made to realise their position and responsiblity and unless they are made to place in a proper place, I am afraid, the representations made by the reprsesntatives of Public like us will go unheeded. Sir, with reagard to transfer, I really fail to understand why some officer think that transfer are sacro-sanct and under no circumstances be violated. For example, a First Division Clerk of Shimoga District has suffered at the hands of the Deputy Commissioner for this very reason. He was a Tuberculosis patiet and he was in the Hospital for treatment. After two or three months treatment in the Hospital he was discharged and adviced to look after his health very corefully for some months during the convalescene period and he should be checked up and given treatment. His wife is also a Government servant. She is a staff Nurse in the Macgan Hospital at Shimoga. This poor Government servant who was suffering from T.B. saw the Deputy Commissioner, and requested him that the transfer which was ordered in the month of October be stayed till the end of March by which time he might be alright and his childrens school period might be over. A representation was also made through the Revenue Minister who recommended his case to the Deputy Commissioner for condsideration. But the Deputy Commissioner was so inhuman and has turned down his request and asked him to report for duty immediately. I can understand the administration cannot be efficient if the M. L. As and M. L. Cs interfere in smal lmatters like transfers etc. But this case is a pitiable one and it deserved humnt consideration. The Deputy Commissioner should not have told tha under no circumstances the transfer orders be altered. After persistent request and after intervention of the Revenue Secretary, the Deputy Commissioner with the greatest difficulty conceded the most reasonable demand. This is the attitude of the Administrators. They should consider compassionately such pitiable and heart rendering request without any reservation. I am afraid such attitude was not prevailing even in the time of I.C.S. officers under British regime who treated us as slaves. Even after 20 years of independence, the same attitude is

being followed by some officers. Such tendency should be curbed and we definitely deserve better treatment and more human consideration from the Officers. Where the administration ought to be strict, and where the administration ought to be efficient, it is inefficient, where it is ought to be honest it is corrupt and where it is ought to be prompt it is delaying. The administration connot be so strict with regard to the legitimate grievances of the public. There is a general feeling in the minds of the public that after indepedence they are not able to get human treatment at the hands of the officers. Therefore, I strongly urge the officers in charge of the administration to be sympathetic, and human. There is a feeling among the officers that the M. L. As and M. L. Cs are interfering in the day to day administration and they are trying to tamper with the transfers and other things. Let the officers realise that M. L. As and M. L. Cs need not go to them and beg them and beseach them for such very ordinary things, There is a general feeling that the officers have become adepts in the art of building up files. It so far as representations are concerned, which can be looked into and investigated, I do not know what extraordinary pleasure they derive by unnecessarily delayng and always trying to look into those papers with some mental reservation and trying to sort out such reasons which are not aimed at giving favourable decision.

So, the file will be tossed on from the case-worker to the Section Officer, from there to the Under Secretary, from there to the Deputy Secretary and then to the Secretary, and by the time the file sees the sun of the day, the poor man who has gone there with a representation would come to the definite club that unless he goes and catches M.L.A., or top officer or some influential person his request would not be complied with and that his representation would not be attended to. That is our experience.

2-30 P. M.

Every time for ordinary transfers and minor things we M.L.A.s will have to rush to the ministers, unnecessarily trouble them and embarrass them who have a very heavy responsibility of running the administration of the entire State. Every now and then we will have to go to the Ministers to represent that files are pending in the concerned departments for months. Let not the officers feel that we are helping the people. It is mainly the duty of the officials to see that maximum co-operation is extended to the public. In independent India they cannot afford to cultivate the kind of attitude they were cultivating 30 or 40 years ago. unless the outlook is changed, unless the I.C.S. attitude is changed, I am afraid any number of speeches on the floor of this House, any criticism by the Opposition or the public, is not going to change the administration methods. Therefore, Sir,

(SRI M. A. MALORPAVAM)

with all humility, I beg of the officers through you that they should definitely change their outlook and try to see that the common man in India, who are 80 to 85 per cent of the people, will not run to the M L.A.s and other influential persons and seek their aid in order to see that their problems are solved. We know many officers are courteous and honest. But on account of the treatment meted out by some officers we feel, 'let those problems remain unsolved rather than going to such officers who treat us with scant respect. I don't deny that. There are wonderful officers, very highly cultured officers, very helpful officers. Still there are certain officers whose attitude or behaviour is really reprehensible and definitely deserves to be condemned in an unequivocal manner.

Coming to Police Department, I know it is a very unavoidable task that the police force is performing. Whether Congress party is in power or any other party, law and order has to be maintained. When the police force does its duty properly, unfortunatly there is none to compliment them. Whenever they commit certain mistakes, without any mercy the public as well as the responsible representatives of the people like us unhesitatingly run them down. I know the police have got very grave responsibilities and it labours under various handicaps. But that cannot justify the manner in which some of the police officers are performing their duties. Yesterday, Smt. Nagarathnamma brought to the notice of the House the behaviour of a few police officers during the Torch Light Parade. That is not the single instance. There are instances galore in the State of Mysore when our police officers have managed to hushup very serious crimes and managed to magnify very ordinary mistakes because it suits their convenience. I have always been upholding the Police Department on the Flour of this House because it is a tribe which deserves our sympathy and support. At the same time the Police Department very often acquits itself in such a manner we begin to imagine whether we are right in supporting them because more often than not it has been discharging its duty in such a manner that it leaves much to be desired. A matter which could be settled without unnecessary furrore is aggrevated in such a manner that the public incidentally fall on the Ruling party. Whatever the officers do, whatever the policemen do, the bread is to be borne by the Ministers and the members of the Ruling party. Just because the officers are behaving in an irresponsible manner, those who are really innocent will have to pay the price for it. Since the police are the custodians of law and order and have the discretionary power, I would appeal to them to cure the disease, and I expect them to extend their co-operation to the public in such a manner that the public is there to appreciate their performance and the public is also their to extend their maximum co-operation to the Police Department.

Sir, as I have already brought to your kind notice, on vital issues like general administration, police and jails, atleast half an hour is required for any person who want to bring about the salient features. But, unfortunatly the time is limited. Therefore, I cannot blame the Speaker, who was kind enough to extend my time by a few more minutes. But the trouble is I am not in a positoin to say what I wanted to say. I appeal to the officers of the Administration that they would certainly understand the times in which they are moving and try to see that the troubles faced by the common man are attended to promptly, and many of the difficulties faced by the public could be solved if the officers were to make a humane approach to their problems With these few remarks I thank the Chair.

SRI C. K. RAJAIAH SETTY:—Sir, some of the Police department steno-typists are taking down the proceedings in the Officers' gallery. Is it permitted?

MR. SPEAKER:—I think they are Officials from the concerned Departments. I shall find out the position.

‡ಶ್ರೀ ಭೋಳ ರಘುರಾಮಶೆಟ್ಟಿ (ಕಾರ್ಕಳ):—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯ ಮಂತ್ರಿಗಳು ತಂದಂಥ ಜನರಲ್ ಅಡ್ಮಿನಿಸ್ಟ್ರೇಷನ್, ಪೋಲೀಸು ಮತ್ತು ಜೈಲು ಇಲಾಖೆಗಳ ಬೇಡಿಕೆಗಳನ್ನು ಕೆಲವು ಕಾರಣಗಳಿಂದ ವಿರೋಧಿಸುತ್ತೇನೆ. ಸಾಮಾನ್ಯವಾಗಿ ಎಲ್ಲರು ಬಯಸುವುದು ಒಳ್ಳೆಯ ಆಡಳಿತ ಮತ್ತು ಒಳ್ಳೆಯ ರೀತಿಯಲ್ಲಿ ಸುವ್ಯವಸ್ಥೆಮಾಡುವ ಮತ್ತು ನ್ಯಾಯವನ್ನು ಕೊಡುವಂಥ ಪೋಲೀಸು ಖಾತೆಯವರು ಅಲ್ಲಿಯ ನ್ಯಾಯವನ್ನು ಕಾಪಾಡುವುದರಲ್ಲಿ ಸಾಮಾನ್ಯ ಜನರ ಸ್ನೇಹಿತರು ಕೂಡ ಆಗಿದ್ದಾರೆ ನಮ್ಮ ದೇಶದಲ್ಲೂ ಕೂಡ ಆ ರೀತಿಯಿಂದ ಪೋಲೀಸರು ವರ್ತಿಸಿದರೆ ಇಲಾಖೆಗೆ ಕೂಡ ಒಳ್ಳೆಯ ಗೌರವ ಬರುತ್ತದೆ ಮತ್ತು ಸಾಮಾನ್ಯ ಜನರಿಗೂ ಕೂಡ ಅವರ ಕೆಲಸದಲ್ಲಿ ವಿಶ್ವಾಸ ಬರುತ್ತದೆ. ನಾವು ಕಣ್ಣುಮುಂತೆ ಕಾನೂನಿನ ನಿರ್ವಹಣೆಯಲ್ಲಿ ಪೋಲೀಸಿನವರು ಜವಾಬ್ದಾರಿ ಬಹಳವಾಗಿರುತ್ತದೆ. ಪೋಲೀಸರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದರೆ ನಮ್ಮ ರಾಜ್ಯದಲ್ಲಿ ಈಗ ಕಾಣುವಂಥ ಕೊಲೆ ದರೋಡೆ ಕಳ್ಳತನ ಮುಂತಾದ ಆಕೃತ್ಯಗಳು ಬಹಳವಾಗಿ ಕಡಮೆಯಾಗುತ್ತವೆ ಎಂದು ಹೇಳಿದರೆ ತಪ್ಪಲ್ಲ. ಮೇಲಾಗಿ ಗ್ರಾಮಾಂತರಗಳಿಂದ ಯಾರಾದರೂ ಪೋಲೀಸು ಇಲಾಖೆಗೆ ಹೋಗಿ ಏನಾದರೂ ತಕ್ಸೀರು ಹೇಳಿದರೆ ಅದನ್ನು ತೆಗೆದುಕೊಂಡು ತನಿಖೆಮಾಡಲು ಕೂಡ ಬಹಳ ವಿಳಂಬ ಮಾಡುತ್ತಿದ್ದಾರೆ. ಅನೇಕ ವೇಳೆ ಅಂಥ ತಕ್ಸೀರುಗಳ ದಾಖಲೆ ಕೂಡ ಮಾಡುವುದಿಲ್ಲ. ಒಂದುವೇಳೆ ಕೋರ್ಟಿಗೆ ಹೋಗುವುದಾದರೆ ದಾಖಲೆ ಮಾಡಿ ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುವರು. ಜನರು ಕೊಡ ಸರಿಯಾದ ವಿಷಯ ತಿಳಿಸುವುದಿಲ್ಲ, ಅವರು ಹೇಳುವ ಮತ್ತು ಕೊಡುವ ಕೇಸುಗಳಲ್ಲಿ ಅನೇಕ ನಿಜವಲ್ಲದ ಸಂಗತಿಗಳಿರುತ್ತವೆ ಎಂದು ಅನೇಕವೇಳೆ ಪೋಲೀಸರು ಹೇಳುವುದುಂಟು. ಆದರೆ ಒಂದು ವಿಷಯ, ಸತ್ಯವಲ್ಲದ ಪರದಿಮಾಡಿದರೆ, ಫಿರ್ಯಾದು ಕೊಟ್ಟರೆ ಅಂಥ ಸಂದರ್ಭಗಳಲ್ಲಿ ತನಿಖೆಮಾಡಿ ನಿಜವಾದ ಸಂಗತಿಯಲ್ಲದಿದ್ದರೆ ಫಿರ್ಯಾದು ಕೊಟ್ಟವರ ಮೇಲೆ ಕೂಡ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳ ಬಹುದು. ಹಾಗೆ ಮಾಡಿದರೆ ಮುಂದೆ ನಿಜವಲ್ಲದ ಫಿರ್ಯಾದು ಬರುವುದಿಲ್ಲ ಅನೇಕವೇಳೆ ಫಿರ್ಯಾದು ಕೊಟ್ಟವರು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಮೇಲಿನ ಅಧಿಕಾರಿಗಳಾದ ಎಸ್‌ಪಿ, ಡಿ.ಐ, ಮುಂತಾದವರಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ದೂರಿನ ಕಾಪಿಯನ್ನು ಕಳಿಸುವರು. ಹಾಗೆ ಮಾಡಿದರೆ ಮಾತ್ರ ಕ್ರಮ ತೆಗೆದುಕೊಳ್ಳುವರು. ಕಂಪ್ಲೈಂಟ್ ಕೊಟ್ಟರೆ ವಿಚಾರಮಾಡುವುದಿಲ್ಲವೆಂದು ಹಾಗೆ ಮಾಡುವರು. ಇನ್ನು ಪೋಲೀಸರು ಕೂಡ ತಕ್ಸೀರಾದನಂತರ ವಿಚಾರಣೆ ಮಾಡಿದ್ದರೆ ಸ್ಥಾಳಕ್ಕೆ ಹೋಗುವುದಕ್ಕೆ ಮೊದಲೇ ಆ ವಿಚಾರದಲ್ಲಿ ವರದಿ ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುವುದಿಲ್ಲ. ತೆಗೆದುಕೊಂಡರೆ ರಾಜ್ಯ ದಲ್ಲಾಗುವ ಎಷ್ಟೋ ಕೃತ್ಯಗಳು ಮರ್ಡರ್ ಮುಂತಾದ್ದು ಬಹಳವಾಗಿ ಕಡಿಮೆಯಾಗುವದು. ಪ್ರಿವೆನ್‌ಷನ್ ಮಾಡುವುದು ಬಹಳ ಪ್ರಾಮುಖ್ಯವಾದ ಕಾರ್ಯ, ಅದನ್ನು ಸರಿಯಾದ ಸಮಯದಲ್ಲಿ ಮಾಡಬೇಕಾದರೆ ಪೋಲೀಸರಿಗೆ ಬಹಳ ಅಗತ್ಯವಾದ ಸಲಕರಣೆಗಳು ಮತ್ತು ಅನುಕೂಲತೆಗಳನ್ನು

(ಶ್ರೀ ಭೋಳೆ ರಘುರಾಮಶೆಟ್ಟಿ)

ಕೊಡಬೇಕಾಗಿದೆ. ಈಗ ತಕ್ಸೀರು ಮಾಡುವವರು ಬಹಳ ಬುದ್ಧಿವಂತರು. ಆದುದರಿಂದ ಅವರು ಮಾಡಿದರೂ ಯಾವ ತೊಂದರೆಗೂ ಒಳಗಾಗದಂತೆ ಜಾಗೃತರಾಗಿರುವರು. ಅಂಥ ಸಂದರ್ಭಗಳಲ್ಲಿ ಶೀಘ್ರವಾಗಿ ಕಂಡುಹಿಡಿಯಲು ಮತ್ತು ತಪ್ಪಿತಸ್ಥರನ್ನು ಅರೆಸ್ಟ್ ಮಾಡಲು ಕ್ರಮ ತೆಗೆದುಕೊಳ್ಳುವುದು ಅಗತ್ಯ. ಅದಕ್ಕೆ ತಾಲ್ಲೂಕು ಮಟ್ಟದಲ್ಲಿರುವ ಪೋಲೀಸರಿಗೆ, ಕೂಡ ಸಲಕರಣೆಕೊಡಬೇಕು. ಕೆಲವು ಪೋಲೀಸರು ಬಾಡಿಗೆ ಕಾರುಗಳಲ್ಲಿ ಹೋಗುವರು, ಅನೇಕ ವೇಳೆ ಬಾಡಿಗೆ ಕೂಡ ಕೊಡುವುದಿಲ್ಲ ಎಂಬ ಭಾವನೆ ಇದೆ. ಹೀಗಾಗಿ ಕಾರಿರುವವರು ಅದು ಎಂಗೇಜ್ ಆಗಿದೆ ಎಂದು ಹೇಳಿ ತಪ್ಪಿಸಿಕೊಳ್ಳುವುದುಂಟು. ಆದುದರಿಂದ ಪೋಲೀಸರು ದಕ್ಷತೆಯಿಂದ ಕೆಲಸಮಾಡಬೇಕಾದರೆ ತಾಲ್ಲೂಕು ಮಟ್ಟದಲ್ಲಿ ಸಂಪೂರ್ಣ ಸೌಕರ್ಯ ಕೊಡಬೇಕು. ಹಾಗೆ ಮಾಡಿದರೆ ಆಗ ಫಲಕಾರಿಯಾಗಬಹುದು, ಪತ್ತೆಮಾಡಬಹದು, ತಕ್ಸೀರಾಗುವುದನ್ನು ಹೆಚ್ಚಿನ ರೀತಿಯಲ್ಲಿ ನಿಲ್ಲಿಸಬಹುದು. ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಹೇಳುವುದಾರೆ ಜನರಲ್ಲಿರುವ ಅಭಿಪ್ರಾಯದಂತೆ ಇಂದು ಮಾತನಾಡಿದವರು ತಿಳಿಸಿದಂತೆ ಆಳುವ ಪಕ್ಷದ ಪ್ರತಿನಿಧಿಗಳು ಮತ್ತಿತರ ಸದಸ್ಯರು ಹೇಳಿದಂತೆ ಕೊಟ್ಟ ಅರ್ಜಿ ಸೂಕ್ತ ಸಮಯದಲ್ಲಿ ತೀರ್ಮಾನವಾಗುವುದಿಲ್ಲ ಕೊಟ್ಟ ದೂರುಗಳಿಗೆ ಸಕಾಲದಲ್ಲಿ ಗಮನಕೊಡುವುದಿಲ್ಲ. ಎಲ್ಲಾ ಆಫೀಸುಗಳಲ್ಲೂ ಕೂಡ ಸಿಬ್ಬಂದಿ ಹತ್ತು ವರ್ಷಗಳ ಹಿಂದಿದ್ದ ಸಿಬ್ಬಂದಿಗಿಂತ ನಾಲ್ಕು ಪಾಲು ಹೆಚ್ಚಾಗಿದೆ, ಅದಕ್ಕೆ ಸರಕಾರದಿಂದ ಹೆಚ್ಚು ಖರ್ಚಿದೆ. ಕೇವಲ ಸೇಡ ಎರಡರಷ್ಟಿರುವ ನೌಕರರಿಗೆ ರಾಜ್ಯದ ಬೊಕ್ಕಸದಿಂದ ಶೇಕಡ ೫೮ಕ್ಕಿಂತ ಹೆಚ್ಚು ಹಣ ಖರ್ಚಾಗುತ್ತದೆ. ಆದರೆ ಜನಸಾಮಾನ್ಯರಿಗೆ ಅವರಸೇವೆ ಸಾಕಾದಷ್ಟು ದೊರೆಯುವುದಿಲ್ಲ. ಮೊದಲಾಗುತ್ತಿದ್ದ ಅನುಕೂಲತೆಯಲ್ಲಿ ಕಾಲು ಭಾಗ ಕೂಡ ಈಗ ಆಗುವುದಿಲ್ಲ, ಯಾವ ಕೆಲಸವೂ ಬೇಗ ಆಗುವುದಿಲ್ಲ. ಯಾವುದಾದರೂ ಕೆಲಸ ಬೇಗ ಆಗಬೇಕಾದರೆ ಯಂಥಾದರೂ ಮೇಲ್ಪಟ್ಟಿರುವವರಿಂದ ಫೋನ್ ಕಾಲ್ ಬರಬೇಕು ಅಥವ ಪ್ರಭಾವ ಬೀರಬೇಕು. ಪ್ರಜಾಪ್ರಭುತ್ವದಲ್ಲಿ ಅದೂ ಇಪ್ಪತ್ತನೆಯ ಶತಮಾನದಲ್ಲಿ ಸಾಮಾನ್ಯ ಜನರಿಗೆ ಸರಕಾರದಲ್ಲಿ ವಿಶಾಸ ದೊರಕಬೇಕಾದರೆ ಅದು ತಪ್ಪಬೇಕು. ಬೊಕ್ಕಸವನ್ನು ಕೆರಿಗೆಯ ರೂಪದಲ್ಲಿ ತುಂಬಿಸುವ ಜನತೆಗೆ ಅದಕ್ಕೆ ತಕ್ಕಂತ ನ್ಯಾಯವಾದ ಪ್ರತಿಫಲ ದೊರೆಯಬೇಕು ನೌಕರರಿಗೆ ಸರಿಯಾದ ಸಂಬಳ ಕೊಡಬೇಕು ಕೊಟ್ಟಮೇಲೆ ಅವರಿಂದ ಸರಿಯಾದ ಸೇವೆಯನ್ನು ಪಡೆಯುವುದು ನ್ಯಾಯವಾದುದು. ಆ ದೃಷ್ಟಿಯಿಂದ ತುಕೋಳ್ ಕಮಿಟಿಯ ಶಿಪಾರಸನ್ನು ಸರಕಾರ ಬಹಳಮಟ್ಟಿಗೆ ಒಪ್ಪಿ ಅದರ ಪ್ರಕಾರ ಬೊಕ್ಕಸದಿಂದ ಹತ್ತ ಕೋಟಿ ಹೆಚ್ಚಿಗೆ ಖರ್ಚುಮಾಡುತ್ತಿದೆ. ಇದನ್ನು ನೌಕರರು ತಿಳಿದುಕೊಂಡು ಅವರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕು. ಸೆಕ್ರೆಟೇರಿಟ್ ಮತ್ತು ಗ್ರಾಮಗಳ ಮಟ್ಟದಲ್ಲಿ ಆಗುವ ಎಲ್ಲ ಕೆಲಸಗಳೂ ಸಕಾಲದಲ್ಲಿ ಆಗಿ ಜನತೆಗೆ ಅನುಕೂಲವಾಗಬೇಕು. ಇಂದು ವಿಳಂಬಕ್ಕೆ ಕಾರಣವೆನೆಂದು ಯೋಚನೆಮಾಡುವುದಾದರೆ ರಾಜ್ಯದಲ್ಲಿ ಅಗತ್ಯಕ್ಕಿಂತ ಹೆಚ್ಚು ಮಂತ್ರಿಗಳಿದ್ದಾರೆ. ಇರಲಿ ಮಾಡಬೇಕಾದ ಕೆಲಸ ಸರಿಯಾಗಿ ಮಾಡಬೇಕು, ಮಂತ್ರಿಗಳು ಸೆಕ್ರೆಟೇಗಿಯಟ್ಟಿನಲ್ಲಿ ಕುಳಿತು ತಮ್ಮ ಇಲಾಖೆ ಕೆಲಸವನ್ನು ಸರಿಯಾಗಿ ಶೀಘ್ರವಾಗಿ ಮಾಡಿದರೆ ಅವರ ಕೈಕೆಳಗಿರುವ ಅಧಿಕಾರಿಗಳು ಕೆಲಸಮಾಡಲೇಬೇಕಾಗುವುದು. ಅವರು ಮಾಡಿದವೇಲೆ ಗ್ರಾಮಾಂತರಗಳಲ್ಲಿರುವವರೂ ಕೂಡ ಮಾಡಬೇಕಾಗುವುದು, ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿರುವವರೂ ಮಾಡುವರು. ಯಾವುದಾದರೂ ಫೈಲು ಸೆಕ್ರೆಟೇರಿಯಟ್ಟಿನಲ್ಲಿ ಒಂದು ವರ್ಷದಿಂದ ಇತ್ಯರ್ಥವಾಗದೆ ಇದ್ದರೆ ಕೆಳಗಿರುವವರಿಗೆ ಮೇಲಿನವರೇ ಸರಿಯಾಗಿ ಕೆಲಸಮಾಡದಿರುವಾಗ ತಾವೇಕೆ ಮಾಡಬೇಕು, ಮಾಡಿದರೆ ಪ್ರಯೋಜನವೇನು ಎಂಬ ಅಭಿಪ್ರಾಯ ಬರುವುದು. ಈ ರೀತಿಯ ಮನೋಭಾವ ಬೆಳೆದಿದೆ. ನೆರೆ ರಾಜ್ಯದಲ್ಲಿ, ಮದ್ರಾಸಿನಲ್ಲಿ ಜನತೆಗೆ ಸರಕಾರದಲ್ಲಿರುವ ಭಾವನೆ ನಮ್ಮಲ್ಲಿರುವ ಭಾವನೆ ನೋಡಿದರೆ ವೆತ್ಯಾಸ ಗೊತ್ತಾಗುವುದು ಅನೇಕರು ನಮ್ಮಲ್ಲಿ ಸರಕಾರವುಂಟೇ, ಇಲ್ಲವೇ ಎಂದು ಹೇಳುವುದು ಕೂಡ ಕಷ್ಟ ಎಂದು ಹೇಳುವರು. ಕೆಲವು ಕಡೆ ಈ ಪರಿಸ್ಥಿತಿ ಇದೆ. ಸರಕಾರ ಮುಂಜೆ ಅನಾಹುತವಾಗ ಬಹುದಾದ ಸಂದರ್ಭಗಳಲ್ಲಿ ಕ್ರಮ ತೆಗೆದುಕೊಳ್ಳುವುದಿಲ್ಲ, ತೊಂದರೆಯಾದ ನಂತರ ಕೈಹಾಕುವುದು. ಜನರು ಎಚ್ಚರಿಕೆಯಿಂದ ರದಿದ್ದರೆ ಸರಕಾರ ಎಷ್ಟು ಕಿರುಕುಳ ಕೊಡುವುದೋ ತಿಳಿಯದು. ರೈತರು ನೀರಿನ ತೆರಿಗೆ ಕೊಡದಿದದ್ದರೆ ಸರಕಾರ ಉಗ್ರ ತೆಗೆದುಕೊಳು ವುದು, ಸರಕಾರ ನಡೆಯಬೇಕಾದರೆ ಹಾಗೆ ಮಾಡುವುದು ನ್ಯಾಯ.

ಸರ್ಕಾರದವರು ತಮ್ಮ ಕಾರ್ಯ ನಿರ್ವಹಣೆಯಲ್ಲಿ ಸಾಮಾನ್ಯ ಜನರಿಗೆ ಮಾರ್ಗದರ್ಶನವಾಗಿ ಇರಬೇಕು. ಸರ್ಕಾರದ ನೀತಿಯಂತೆ ಸಾಮಾನ್ಯ ಜನರೂ ಕೂಡು ಅವರು ಕೊಡತಕ್ಕ ತೀರ್ವೆಯನ್ನು ಸರ್ಕಾರಕ್ಕೆ ಒಂದು ವರ್ಷದ ನಂತರ ಕೊಡುವುದಾದರೆ ಸರ್ಕಾರ ನಡೆಸುವುದು ಹೇಗೆ ಎಂದು ಕೇಳಬೇಕಾಗಿದೆ. ಅಷ್ಟು ಮಾತ್ರವಲ್ಲದೆ ಸರ್ಕಾರಿ ನೌಕರರಲ್ಲಿ ಕೂಡ ಸರ್ಕಾರ ತಮಗೆ ಅನ್ಯಾಯ ಮಾಡುತ್ತಿದೆ ಎನ್ನುವ ಭಾವನೆ ಬಂದಿದೆ. ಅನೇಕ ಸರ್ಕಾರಿ ನೌಕರರು ತಮಗೆ ಟ್ರಾನ್ಸ್‌ಫರೆನಲ್ಲಿ ಅನ್ಯಾಯ

ಮಾಡಿದ್ದಾರೆ, ಪ್ರಮೋಷನ್‌ನಲ್ಲಿ ಅನ್ಯಾಯ ಮಾಡಿದ್ದಾರೆ ಎಂದು ದೂರಿದ್ದಾರೆ. ಅನೇಕ ವೇಳೆ ಅದು ನ್ಯಾಯ ಎಂದು ತಿಳಿದು ಬಂದಿದೆ. ಸಂಬಂಧ ಪಟ್ಟವರಲ್ಲಿ ವಿಷಯದಲ್ಲಿ ಏನಾದರೂ ಹೆಚ್ಚಿನ ಮಾಹಿತಿಯನ್ನು ಪಡೆದುಕೊಂಡರೆ ಅವರು ಹೇಳುವುದು ಸರಿ ಎಂದು ಕಾಣುತ್ತದೆ. ಯಾರಿಗೆ ಅನ್ಯಾಯವಾಗುತ್ತದೆ ಅಂಥವರ ವಿಚಾರದಲ್ಲಿ ನ್ಯಾಯ ಮಾಡದೆ ಇದ್ದರೆ, ನ್ಯಾಯ ರೀತಿಯಿಂದ ವರ್ತಿಸದೆ ಇದ್ದರೆ ಸರಿಯಾಗಿ ವರ್ತಿಸುವುದಕ್ಕೆ ಅವರ ಮನಸ್ಸೂ ಸಹ ಒಪ್ಪುತ್ತದೆಯೇ ಎನ್ನುವುದನ್ನು ಆಲೋಚನೆ ಮಾಡಬೇಕು. ಆದುದರಿಂದ ಈ ಪ್ರೊಟ್ಟು ಸಾಮಾನ್ಯ ಆಡಳಿತ ಮತ್ತು ಪೋಲೀಸ್ ಆಡಳಿತ ಸಾಮಾನ್ಯ ನಾಗರಿಕರಿಗೆ ಬಹಳ ಸಂಬಂಧಪಟ್ಟ ಇಲಾಖೆಗಳು. ಈ ಇಲಾಖೆಗಳವರು ಒಳ್ಳೆಯ ರೀತಿಯಿಂದ, ನ್ಯಾಯ ರೀತಿಯಿಂದನಡೆದರೆ ನಮ್ಮ ಸಾಮಾನ್ಯ ಜನರಿಗೆ ಕೂಡ ಸರ್ಕಾರದ ಮೇಲೆ, ಪ್ರಜಾಪ್ರಭುತ್ವದ ಮೇಲೆ ವಿಶ್ವಾಸ ಬರಬಹುದು ಎಂದು ಹೇಳಿ, ಆ ರೀತಿ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಪಡಿಸಿ ನನ್ನ ಮಾತನ್ನು ಮಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ) :—ಮಾನ್ಯ ಅಧ್ಯಕ್ಷರೇ ಆಡಳಿತ ಪಕ್ಷದಲ್ಲಿರತಕ್ಕ ಸದಸ್ಯರ ಸಂಖ್ಯೆಯನ್ನು ನೋಡಿದರೆ ಅವರಿಗೆ ಎದುರು ಪಕ್ಷದಿಂದ ಬರತಕ್ಕ ಟೀಕೆಗಳ ವಿಷಯದಲ್ಲಾಗಲಿ, ಅಥವಾ ಜನಗಳ ಕಷ್ಟ ಸುಖಗಳನ್ನು ಅರಿತುಕೊಳ್ಳುವ ವಿಷಯದಲ್ಲಾಗಲೀ, ಎಷ್ಟು ಆಸಕ್ತಿ ಇದೇ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ರೀತಿ ಅವರ ನಿರ್ಲಕ್ಷ್ಯ ಮನೋಭಾವವಿದ್ದರೆ ಅವರಿಗೆ ನಾವು ಏನು ಟೀಕೆ ಮಾಡಿದರೂ ಪ್ರಯೋಜನವಿಲ್ಲ ಅಥವಾ ಅವರಿಗೆ ನಾವು ಏನು ಅಪದನೆಗಳನ್ನು ಹೊರಿಸಿದರೂ ಪ್ರಯೋಜನವಿಲ್ಲ. ಅವರನ್ನು ಅಧಿಕಾರದಿಂದ ಕಿತ್ತು ಹಾಕುವುದು ಒಂದೇ ಮಾರ್ಗವಲ್ಲದೆ ಬೇರೆ ಯಾವ ಮಾರ್ಗವೂ ಇಲ್ಲ ಎನ್ನುವುದು ನನ್ನ ಮನಸ್ಸಿಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ :— ಯಾವತ್ತಿಗೂ ಅದನ್ನೇ ಹೇಳುತ್ತೀರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಅದಕ್ಕಿಂತ ಲಾಯಕ್ ಆದ ಪದ ನಿಮ್ಮ ವಿಷಯದಲ್ಲಿ ಉಪಯೋಗಿಸುವುದಕ್ಕೆ ಸಾಧ್ಯವೇ ಇಲ್ಲ.

ಆಧಿಕಾರಿಗಳನ್ನು ಈ ದಿವಸ ನೌಕರ ವರ್ಗವನ್ನು ನನ್ನ ಅಭಿಪ್ರಾಯದಲ್ಲಿ ಎರಡು ಪಂಗಡವಾಗಿ ವಿಂಗಡಿಸಬಹುದು. ಜಿಲ್ಲಾ ಮಟ್ಟದಿಂದ ಕೆಳಗೆ ಇರತಕ್ಕ ಅಧಿಕಾರಿಗಳು, ಜಿಲ್ಲಾ ಮಟ್ಟದಿಂದ ಮೇಲೆ ಇರತಕ್ಕ ಅಧಿಕಾರಿಗಳು. ಜಿಲ್ಲಾ ಮಟ್ಟದಿಂದ ಕೆಳಕಡೆ ಇರತಕ್ಕ ಅಧಿಕಾರಿಗಳು, ಸರ್ಕಾರವೆಂದರೆ ಮೇಲೆ ಆಡಳಿತ ಪಕ್ಷದಲ್ಲಿರತಕ್ಕ ಶಾಸನಸಭಾ ಸದಸ್ಯರು, ಮಂತ್ರಿಗಳು, ಅವರ ಅಭಿಪ್ರಾಯ ಹೇಗಿದೆಯೋ ಅದರಂತೆ ನಡೆಯಬೇಕು, ಅದರ ಜೊತೆಗೆ ಸಾಧ್ಯವಾದಷ್ಟು ಎಲ್ಲ ಸಂದರ್ಭಗಳನ್ನೂ ಉಪಯೋಗಿಸಿಕೊಂಡು ಲಂಚ ಪಡೆಯಬೇಕು ಎನ್ನುವಂಥ ಎರಡು ಗುಣಗಳು ಜಿಲ್ಲಾಮಟ್ಟದಿಂದ ಕೆಳಕಡೆ ಇರತಕ್ಕೆ ಅಧಿಕಾರಿಗಳಿಗೆ ಇದೆ. ಜಿಲ್ಲಾ ಮಟ್ಟದಿಂದ ಮೇಲೆ ಇರತಕ್ಕ ಅಧಿಕಾರಿಗಳಿಗೆ ಮಂತ್ರಿಗಳ ಅಭಿಪ್ರಾಯ ಹೇಗಿದೆ, ಅವರ ಇಂಗಿತ ಹೇಳಬೇಕಾದ್ದೇ ಇಲ್ಲ, ಯಾರು ಆಡಳಿತ ಪಕ್ಷದಲ್ಲಿರುವರು, ಯಾರು ಮಂತ್ರಿಗಳಿಗೆ ಬೇಕಾದವರು, ಅವರು ಏನು ಹೇಳುತ್ತಾರೆ, ಅವರ ಮನಸ್ಸು ಹೇಗಿದೆ ಅದನ್ನು ತಿಳಿದುಕೊಂಡು ಅಧಿಕಾರ ನಡೆಸುತ್ತಾರೆ. ಈ ರೀತಿ ಇರುವುದು ಸ್ಪಷ್ಟವಾಗಿ ಕಾಣುತ್ತದೆ. ಆಡಳಿತದಲ್ಲಿ ಅದರಲ್ಲಿಯು ಪೋಲೀಸ್ ಇಲಾಖೆಯಲ್ಲಿ, ಸಹಕಾರ ಇಲಾಖೆ ತೆಗೆದುಕೊಂಡರೆ ಹಗಲಿನಲ್ಲಿ ಸೂರ್ಯನ ಬೆಳಕು ಇದ್ದ ಹಾಗೆ ಕಾಣುತ್ತದೆ. ತಮ್ಮ ಪಕ್ಷದ ನಿಲುವಿಗೆ ವಿರೋಧವಾಗಿರುವವರು, ಎದುರು ಪಕ್ಷದಲ್ಲಿರುವವರು, ಯಾರು ಯಾರು ಅವರ ಮೇಲೆ ಪೈಪೋಟಿ ಮಾಡುತ್ತಿದ್ದಾರೆ ಅಂಥವರನ್ನು ಗಮನಿಸುವ ಕೆಲಸ ಪೋಲೀಸ್ ಇಲಾಖೆಯಿಂದ ನಡೆಯುತ್ತಿರುವುದು ನಿರ್ದಿಷ್ಟವಾಗಿ ಕಾಣುತ್ತಿದೆ. ಪೋಲೀಸ್ ಅಧಿಕಾರಿಗಳನ್ನು ಅದಕ್ಕಾಗಿ ಪೂರ್ಣವಾಗಿ ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಲಂಚದ ಆಪಾದನೆ ಎಷ್ಟಿದೆ ಎನ್ನುವುದು ಹಳ್ಳಿ ಗಾಡಿನಲ್ಲಿ, ತಾಲ್ಲೂಕು ಮಟ್ಟದಲ್ಲಿ ನೋಡಿದರೆ ಗೊತ್ತಾಗುತ್ತದೆ. ನಿಜವಾದ ಕೇಸು ಹಾಕಿದರೂ ಕೂಡ, ಖೂನಿ ಆಗಿರುವ ಬಹಳ ಬಲವಾದ ಆಪಾದನೆಗಳನ್ನು ಮಾಡಿ ಅರ್ಜಿ ಬರೆದರೂ ಕೂಡ ಲಂಚ ಕೊಟ್ಟ ಹೊರತು ಕೇಸು ರಿಜಿಸ್ಟರ್ ಆಗುವುದಿಲ್ಲ. ಇದನ್ನು ನಾವು ಬಹಳ ಸ್ಪಷ್ಟವಾಗಿ ನೋಡಬಹುದು. ಯಾರಾದರೂ ಮೇಲ್ಪಟ್ಟ ಪೋಲೀಸ್ ಅಧಿಕಾರಿಗಳು ಅನೀರಿಕ್ಷಿತವಾಗಿ, ಭೇಟಿಕೊಟ್ಟು ಯಾವಾಗ ಅರ್ಜಿಬಂದಿದೆ, ರಿಜಿಸ್ಟರ್ ಮಾಡಿದೆಯೇ ಇಲ್ಲವೇ, ಏತಕ್ಕೋಸ್ಕರ ಎಫ್ .ಐ.ಆರ್. ಕಳುಹಿಸಲಿಲ್ಲ ಎನ್ನುವುದನ್ನೆಲ್ಲ ತನಿಖೆ ಮಾಡುವ ಪದ್ಧತಿ ಇಲ್ಲ. ತಾಲ್ಲೂಕು ಆಫೀಸುಗಳಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಮೇಲ್ಪಟ್ಟ ಅಧಿಕಾರಿಗಳಾಗಲೀ ಮಂತ್ರಿಗಳಾಗಲೀ ವಿಚಾರ ಮಾಡುವ ಹಾಗೆಯೇ ಇಲ್ಲ. ಸಹಕಾರ ಇಲಾಖೆಯನ್ನು ತೆಗೆದುಕೊಂಡರೆ, ಅವರ ಆಡಳಿತಕ್ಕೆ ಸಹಾಯಕರಾಗಿರುವವರು

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಏನೇ ಮಾಡಲಿ ಮಾತನಾಡಿಸುವುದಿಲ್ಲ, ಅವರಿಗೆ ಸಂಬಂಧಪಟ್ಟ ಸೊಸೈಟಿಗಳ ಆಡಿಟ್ ಆಗಿದೆಯೇ ಇಲ್ಲವೇ ಎಂದುಕೂಡ ಕೇಳುವ ಹಾಗಿಲ್ಲ. ಆಡಿಟಿನಲ್ಲಿ ಆಕ್ಷೇಪಣೆಗಳು ಬಂದರೆ ಅಂಥವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ಹೀಗಾದರೆ ಇಲಾಖೆಯಲ್ಲಿನ ಲೋಪ ದೋಷಗಳನ್ನು ಸರಿ ಪಡಿಸುವುದು ಹೇಗೆ ? ಶ್ರೀ ಮಾನ್ ಅಮಲೋರ್ಪವಂ ಅವರು ಹೇಳುತ್ತಿದ್ದರು, ಆಡಳಿತ ಈ ಮಟ್ಟಕ್ಕೆ ಇಳಿದು ಹೋಗಿರುವಾಗ ಅದನ್ನು ಸರಿ ಪಡಿಸುವುದು ಅಸಾಧ್ಯ ಎಂದು ಅದನ್ನು ಯಾವರೀತಿ ಸರಿ ಪಡಿಸಬೇಕು ಎಂದು ನನಗೆ ದಿಕ್ಕು ತೋಚದ ಹಾಗೆ ಆಗಿದೆ. ಆಡಳಿತ ಅಂಥ ಕೆಳಮಟ್ಟಕ್ಕೆ ಬಂದಿದೆ. ಈ ವಿಷಯದಲ್ಲಿ ನಾವೇನಾದರೂ ಮಂತ್ರಿಗಳಿಗೆ ಹೇಳಿದರೆ ಅಥವಾ ಅರ್ಜಿಗಳನ್ನು ಜನ—ಸಾಮಾನ್ಯರು ಕೊಡುವುದಿರಲಿ, ಜನ ಸಾಮಾನ್ಯರು ಕೊಡುವ ಅರ್ಜಿಗಳನ್ನು ಲಕ್ಷ್ಯಕ್ಕೇ ಇಡುವುದಿಲ್ಲ—ಶಾಸನ ಸಭಾ ಸದಸ್ಯರೇನಾದರೂ ಅರ್ಜಿಗಳನ್ನು ಕೊಟ್ಟರೆ ಅದಕ್ಕಾಗಿ ಒಂದು ಫೈಲ್ ಇಟ್ಟು ಕೊಂಡಿದ್ದಾರೆ ಅದರಲ್ಲಿ ಹಾಕುತ್ತಾರೆ ಇವರ ಅರ್ಜಿ ಬಂದಿದೆ, ಇಂಥವರನ್ನು ನೋಡಿ, ಏನಾಗಿದೆ ಏನ್ನುವುದನ್ನು ಹೇಳುತ್ತಾರೆ ಎನ್ನುವ ಮಟ್ಟಕ್ಕೆ ಹೋಗಿದೆ, ಉಳಿದ ಯಾವ ಜನಗಳಿಂದ ಅರ್ಜಿ ಬಂದರೂ, ಏನೇ ತೊಂದರೆಗಳು ಆವರಿಗೆ ಇರಲಿ, ಅದನ್ನೆಲ್ಲ ಲಂಚ ಕೊಟ್ಟು ಸರಿ ಪಡಿಸಿಕೊಳ್ಳಬೇಕೇ ಹೊರತು ನ್ಯಾಯ ದೊರೆಯುತ್ತದೆ ಎನ್ನುವ ನಂಬಿಕೆ ಸಂಪೂರ್ಣವಾಗಿ ಹೋಗಿ ಬಿಟ್ಟಿದೆ.

ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಶಿವಮೊಗ್ಗ ಡಿಸ್ಟ್ರಿಕ್ಟ್‌ನ ಅಧಿಕಾರಿಗಳ ಸಭೆಯನ್ನು ಕರೆದು ಆಡಳಿತದ ವಿಷಯದಲ್ಲಿ ನಿಮ್ಮ ಅಭಿಪ್ರಾಯವನ್ನು ಮನಬಿಚ್ಚಿ ನನ್ನ ಗಮನಕ್ಕೆ ಬರುವ ಹಾಗೆ ಹೇಳಬೇಕು ಎಂದರು. ಆಗ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ 'ಸ್ವಾಮಿ' ಲಂಚದ ಆಪಾದನೆ ಮೇಲ್ಮಟ್ಟದಲ್ಲಿ ಮಂತ್ರಿಗಳ ಮಟ್ಟದಲ್ಲಿ ಇದೆ ಎನ್ನುವ ದೂರಿದೆ, ಕೆಳಮಟ್ಟದಲ್ಲಿ ಲಂಚ ಇಲ್ಲ ಎಂದು ಹೇಳುವ ಹಾಗೆ ಇಲ್ಲ ಎಂದು ಹೇಳಿದ. 'ಏನ್ರಿ' ನೀವು ಬಹಳ ಧೈರ್ಯವಾಗಿ ಬಾಯಿಗೆ ಬಂದಹಾಗೆ ಹರಟುತ್ತೀರಿ ಎಂದು ಹೇಳಿದರು. ಆಲ್ಲಿಗೆ ಸಭೆ' ಬರಖಾಸ್ತಾಯಿತು. ಅಸಿಸ್ಟೆಂಟ್ ಇಂಜಿನಿಯರು ಇಂದಿಗೂ ಅಧಿಕಾರದಲ್ಲಿ ಇದ್ದಾರೆ. ಮೇಲ್ಮಟ್ಟದಲ್ಲಿ, ಮಂತ್ರಿಗಳ ಮೇಲೆ, ಮುಖ್ಯ ಮಂತ್ರಿಗಳ ಮೇಲೆ ಲಂಚದ ಆಪಾದನೆ ಸ್ಪಷ್ಟವಾಗಿ ಕಾಣುತ್ತಿದೆ. ಹಿಂದೆ ಇದ್ದ ಮುಂಖ್ಯ ಮಂತ್ರಿಗಳ ಮೇಲೆ ಎದುರು ಪಕ್ಷದವರಲ್ಲದೆ, ಕಾಂಗ್ರೆಸ್ ಪಕ್ಷದಲ್ಲಿನ ಒಳಗುಂಪು ಅನೇಕ ಆಪಾದನೆಗಳನ್ನು ಮಾಡಿತ್ತು. ಈ ಪೊತ್ತು ಕೂಡ ಆಪಾದನೆಗಳಿವೆ. ಹೀಗಿರುವಾಗ ಕೆಳಮಟ್ಟದಲ್ಲಿ ಲಂಚ ತಪ್ಪಿಸುತ್ತೇವೆ ಎನ್ನುವಷ್ಟು ಧೈರ್ಯ ಮಾಡುವವರು ಯಾರಿದ್ದಾರೆ ? ಶಾಸ್ತ್ರಕ್ಕೆ ಒಂದು ವಿಜಿಲೆನ್ಸ್ ಕಮಿಷನ್ ಇದೆ. ಆವರಿಂದ ತನಿಖೆ ಮಾಡಿದ ಶಾಸ್ತ್ರವಾಗುತ್ತದೆ. ನಾನು ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಟೆಕ್ನಿಕಲ್ ಆಡಿಟ್ ಸೆಲ್ ವಿಧಾನ ಸೌಧದಿಂದ ವಿಜಿಲೆನ್ಸ್ ಕಮಿಷನ್ನಿಗೆ ಹೋಗಿ ಒಂದೂವರೆ, ಎರಡು ವರ್ಷವಾಗಿದೆ. ಈ ಅವಧಿಯೊಳಗೆ ನಾಲ್ಕು ಆರ್ಜಿ ತನಿಖೆಯಾಗಿದೆ ಎಂದು ಉತ್ತರ ಬಂದಿದೆ. ಹೀಗೆ ಎಷ್ಟೋ ಆಕ್ಷೇಪಣೆಗಳಿದ್ದಾಗ್ಯೂ, ಆಧಾರ ಸಹಿತವಾಗಿ ಇದ್ದಾಗ್ಯೂ, ಆವುಗಳನ್ನು ವಿಚಾರಣೆ ಮಾಡಿ ಸೂಕ್ತವಾದ ಶಿಕ್ಷೆ ಕೊಟ್ಟು ಅದನ್ನು ಸರಿಪಡಿಸತಕ್ಕ ಧೈರ್ಯ ಇಲ್ಲವಾಗಿದೆ. ಅದನ್ನು ಕಣ್ಣಾರೆ ಕಂಡಿದ್ದೇವೆ. ನಾನೇ ಕೆಲವಾರು ಅರ್ಜಿಗಳನ್ನು ನನ್ನ ಹೆಸರಿನಲ್ಲೇ ಬರೆದು ಕೊಟ್ಟಿದ್ದೇನೆ. ಹಾಗಿದ್ದೂ ವಿಚಾರಣೆಯಾಗಿಲ್ಲ, ಇಲ್ಲಿಯವರೆಗೂ ಏನೊಂದು ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಈ ರೀತಿ ಇರುವಾಗ ಲಂಚದ ಆಪಾದನೆ ಮಾಡಿ ಅದನ್ನು ತಪ್ಪಿಸುವುದು ಹೇಗೆ ? ನಾನು ಒಂದು ಸಲಹೆ ಮಾಡುತ್ತೇನೆ. ಮಂತ್ರಿಗಳು ಅಧಿಕಾರದ ಸ್ಥಾನಕ್ಕೆ ಬರುತ್ತಾರೆ. ಅಧಿಕಾರಕ್ಕೆ ಬಂದಾಗ್ಗ ಅವರ ಆಸ್ತಿ ಪಾಸ್ತಿ ಎಷ್ಟು, ಇತ್ತು, ಮುಂದೆ ವರ್ಷೇ ವರ್ಷೇ ಎಷ್ಟು ಬಿದ್ದಿತು, ಅಧಿಕಾರ ಬಿಡುವಾಗ ಆಸ್ತಿ ಎಷ್ಟು ಆಗಿತ್ತು, ಇದನ್ನು ತನಿಖೆ ಮಾಡಬೇಕು ಇದು ಒಂದು ಸಲಹೆ. ಸರಕಾರಿ ನೌಕರರಲ್ಲಿ ಲಂಚದ ಆಪಾದನೆ ಇರುವುದು ಇರಲಿ. ಜನತೆಯ ಪ್ರತಿನಿಧಿಗಳಾಗಿ ಇಲ್ಲಿ ಕೂಡುವವರ ಮೇಲೆ ಲಂಚದ ಆಪಾದನೆ ಇದೆ. ಕೇಂದ್ರದಲ್ಲಿ ಲೋಕಪಾಲ ಎನ್ನುವ ಒಂದು ಸಂಸ್ಥೆ ತನಿಖೆ ಮಾಡಲು ಪ್ರಾಡಿದ್ದಾರೆ. ಇಲ್ಲಿಯೂ ಕೂಡ ಅದೇ ರೀತಿ ಮಾಡಬೇಕು ಎಂದು ಹೇಳಿದಾಗ ಮೈಸೂರು ಸರಕಾರ ಅದಕ್ಕೆ ಒಪ್ಪಲಿಲ್ಲ. ಇವರು ಮುಚ್ಚಿಕೊಂಡು ಹಾಗೆ ಉಳಿದರೆ ಅದರಿಂದ ಏನು ಪ್ರಯೋಜನ ? ಈ ಆಪಾದನೆಗಳ ಹೊರೆ ತಮ್ಮ ಮೇಲೆ ಬೀಳುತ್ತದೆ ಎಂದು ಅವರಿಗೆ ಹೆದರಿಕೆ ಇದೆ. ಆದುದರಿಂದ ಇಷ್ಟಪಡಲಿಲ್ಲ. ಶ್ರೀಮಾನ್ ನಂಜೇಗೌಡರು ಪಬ್ಲಿಕ್ ಮನ್ ಇನ್‌ಕ್ವಾಯರಿ ಬಿಲ್ ಎಂದು ಒಂದು ಮಸೂದೆಯನ್ನು ತಂದಿದ್ದರು. ಇಂಥ ಗುರುತರವಾದ ಆಪಾದನೆಗಳು ಮಂತ್ರಿಮಂಡಳದ ಮೇಲೆ ಇರುವಾಗ ಆವುಗಳನ್ನು ದೂರ ಮಾಡುವುದಕ್ಕೆ ಯೋಚನೆ ಬರಬೇಕು ಅಲ್ಲವೇ? ಎದುರು ಪಕ್ಷದವರು ಹೇಳಿರುವ ಆಪಾದನೆಗಳನ್ನು ಶ್ರೀ ಅಮಲೋರ್ಪವಂ ಅವರು ಕೂಡ ಬಹು ಕಟುವಾಗಿ ಹೇಳಿದರು. ಅದರ ಕಟುತ್ವ ಮಂತ್ರಿಗಳಿಗೆ ಅರ್ಥವಾಗುವುದಿಲ್ಲ ಎಂದು ಅನಿಸುತ್ತದೆ. ಇವರ ಮೇಲಿನ ನೇರವಾದ ಆಪಾದನೆಗಳನ್ನು ತಪ್ಪಿಸಲು ಶ್ರೀಮಾನ್ ವೀರೇಂದ್ರ ಪಾಟೀಲರು ಅಗ್ನಿ ಪರೀಕ್ಷೆಗೆ ಒಳಗಾಗಬೇಕು ಮತ್ತು ಅಂಥ ಕಾನೂನುತರಲು ಒಪ್ಪಿಕೊಳ್ಳಬೇಕು, ನಮ್ಮ ರಾಮಾಯಣ

ದಲ್ಲಿ ಸೀತಾ ಮಾತೆಯ ಮೇಲೆ ಆಪಾದನೆ ಬಂದಾಗ್ಗೆ ಅಗ್ನಿಪ್ರವೇಶಮಾಡಿ ಪರಿಶುದ್ಧವಾಗಿ ಹೊರಗೆಬಂದ ಉದಾಹರಣೆ ನಮ್ಮ ಮುಂದೆ ಇದೆ. ಆದರೆ ನಾವು ಇಂದು ಕಲಿಯುಗದಲ್ಲಿ ಇದ್ದೇವೆ.

3-00 P. M.

ಸ್ವಾಮಿ, ಮಂತ್ರಿಗಳು ಪ್ರವಾಸ ಮಾಡುತ್ತಾರೆ. ಏತಕ್ಕೆ ಪ್ರವಾಸ ಮಾಡುತ್ತಾರೆ ತಿಳಿಯದು. ಪ್ರತಿ ಶುಕ್ರವಾರ ಒಬ್ಬ ಮಂತ್ರಿಯವರು ಮಂಡ್ಯದಲ್ಲಿ ಇರುತ್ತಾರೆ. ಇನ್ನೊಬ್ಬರು ಪ್ರತಿ ಶನಿವಾರ ಭಾನುವಾರ ಮೈಸೂರಿನಲ್ಲಿ ಇರುತ್ತಾರೆ ಮತ್ತೊಬ್ಬ ಮಂತ್ರಿಯು ವಾರದ ಕೊನೆಗೆ ಕುಣಿಗಲ್‌ನಲ್ಲಿ ಇರುತ್ತಾರೆ. ಇವರಿಗೆ ಸಂಬಂಧಪಟ್ಟ ಸ್ಥಾನಮಾನದ ವಿಚಾರದಲ್ಲಿ ತಮ್ಮ ಕ್ಷೇತ್ರದಲ್ಲಿ ರಾಜಕೀಯ ಮಾಡುವುದು ಇದೇ ಕೆಲಸವಾಗಿದೆಯೇ ಹೊರತು ಇವರು ಇಡಿ ರಾಜ್ಯದ ಮಂತ್ರಿಗಳು ಆಗಿದ್ದಾರೆ ಎನ್ನುವುದನ್ನು ಆನೇಕ ಜನ ಭಾವಿಸುವುದಿಲ್ಲ ತರಲೆ ಮಾಡತಕ್ಕಂಥ ಮಂತ್ರಿಗಳು ಇದನ್ನು ಆಲೋಚಿಸಿ ಮಾಡ ಬೇಕಾಗಿದೆ. ಹತ್ತಿರದಲ್ಲಿ ಇರತಕ್ಕಂಥವರಿಗೆ ಬೇರೆ ಕೆಲಸವೇ ಇಲ್ಲ. ಜನರ ಬಗ್ಗೆ ಯಾವ ವಿಚಾರಣೆ ಮಾಡುವುದಿಲ್ಲ. ಕೆಲಸ ಏನು ನಡೆಯುತ್ತಿದೆ, ಜನರಿಗೆ ತೊಂದರೆ ಏನು ಇದೆ, ಅದನ್ನು ನಿವಾರಣೆಮಾಡಲು ಕ್ರಮವೇನು ಮಾಡಬೇಕು ಎನ್ನುವುದನ್ನು ಇವರು ನೋಡುವುದಿಲ್ಲ. ಬರೀ ಅನುಪಯುಕ್ತ ಪ್ರವಾಸಮಾಡಿ ರಾಜ್ಯದ ಬೊಕ್ಕಸದ ಹಣ ವ್ಯರ್ಥವಾಗಿ ಖರ್ಚಾಗುತ್ತಿದೆ. ಆದುದರಿಂದ ಇಂಥ ಪ್ರವಾಸ ಮಾಡುವುದನ್ನು ಮಂತ್ರಿಗಳು ನಿಲ್ಲಿಸಬೇಕು ಎಂದು ಹೇಳುತ್ತೇನೆ.

ಸ್ವಾಮಿ, ಇಂದು ಪ್ರಜಾಪ್ರಭುತ್ವದಲ್ಲಿ ಎರಡೂ ಹೊತ್ತೂ ಪೈಪೋಟಿಯಿಂದ ನಾನು ಪ್ರಜಾ ಪ್ರಭುತ್ವದ ರಕ್ಷಕ ಎಂದು ಹೇಳುವುದು ಮಾತ್ರ ನಡೆಯುತ್ತಿದೆ. ಪ್ರಜಾಪ್ರಭುತ್ವದಲ್ಲಿ ಜನತೆಯ ಪ್ರತಿ ನಿಧಿಗಳ ಯೋಗ್ಯತೆ ಸ್ಥಾನಮಾನ ಗೌರವ ಇದನ್ನು ಕಾಪಾಡಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯ. ಸರಕಾರ ಕೂಡ ಈ ಬಗ್ಗೆ ಜಾಗ್ರತೆಯಿಂದ ಇರಬೇಕು ನಮ್ಮ ಕ್ಷೇತ್ರದಲ್ಲಿ ಮಂತ್ರಿಗಳು ಪ್ರವಾಸ ಮಾಡಿದರೆ, ಮಂತ್ರಿಗಳು ಬಂದರೆ ಆ ಕ್ಷೇತ್ರದ ಪ್ರತಿನಿಧಿಗೆ ಗೌರವ ಕೊಡಬೇಕು ಅಲ್ಲಿಯ ಪ್ರತಿನಿಧಿಗಳ ಮುಖಾಂತರ, ಅಲ್ಲಿಯ ವಿಷಯ ತಿಳಿದುಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು. ಆದರೆ ಅವಕ್ಕೆ ತದ್ವಿರುದ್ಧವಾಗಿ ಎಲ್ಲವೂ ನಡೆಯುತ್ತಿದೆ. ತಮ್ಮ ಪಕ್ಷದ ಪ್ರತಿನಿಧಿಗಳನ್ನು ಕೇಳುವುದು, ತಮ್ಮ ಪಕ್ಷದ ರಾಜಕಾರಣಿಗಳ ಸಲಹೆ ಕೇಳುವುದು ಎಂದು ಅಧಿಕಾರಿಗಳಿಗೆ ತಿಳುವಳಿಕೆ ಕೊಟ್ಟಿದ್ದಾರೆ. ಈ ರೀತಿ ಕೆಲಸ ನಡೆಯುತ್ತಿದೆ. ಅಧಿಕಾರಿ ಗಳು ಎಲ್ಲಿಯವರೆಗೆ ಹೋಗಿದ್ದಾರೆ ಅಂದರೆ ಆ ಕ್ಷೇತ್ರದ ಮಂತ್ರಿಗಳ ವಿರೋಧವಾಗಿ ಇದ್ದವರಿಗೆ ಮಾನ ಗೌರವ ಕೊಡುವುದಿಲ್ಲ. ನನಗೆ ಗೌರವ ಕೊಡದೇ ಇದ್ದರೂ ಪರವಾ ಇಲ್ಲ. ನಾವು ಪ್ರಜಾಪ್ರಭುತ್ವ ಮಾರ್ಗ ಉಳಿಸಿಕೊಂಡು ಹೋಗಬೇಕಾದುದು ಹೌದೋ ಅಲ್ಲವೋ ? ತುಮಕೂರು ಎಗ್ಜಿಕ್ಯೂಟಿವ್ ಇಂಜಿನಿಯರರ ವಿಚಾರದಲ್ಲಿ ಮಂತ್ರಿಗಳಿಗೆ ನೇರವಾಗಿ ನಾನು ಕಾಗದ ಬರೆದಿದ್ದರೂ ಕೂಡ ಅದಕ್ಕೆ ಉತ್ತರ ಇಲ್ಲ. ಅದಕ್ಕೆ ಆಕ್ನಾಲೆಜ್‌ಮೆಂಟ್ ಕೂಡ ಇಲ್ಲ, ಇದನ್ನು ಹೇಗೆ ಸಹಿಸುವುದು ಅವರ ಕಡೆಯ ಕಾಂಗ್ರೆಸ್ ಪಕ್ಷದವರು ಕಾಗದ ಮಂತ್ರಿಗಳಿಗೆ ಬರೆದರೆ ಉತ್ತರ ಬರೆಯುತ್ತಾರೆ. ನನ್ನ ಕಾಗದಕ್ಕೆ ಉತ್ತರ ಬರೆಯ ವುದಿಲ್ಲ. ಇಂಥ ತಾರತಮ್ಯ ಇಲ್ಲದಂತೆ ಮಾಡಬೇಕು. ಇದಕ್ಕಾಗಿ ಯಾವ ಕಾರ್ಯಕ್ರಮ ತೆಗೆದು ಕೊಳ್ಳಲಿಲ್ಲ. ಲಂಚದ ಆಪಾದನೆ ಮಾಡಿದರೆ ಅದನ್ನು ವಿಜಿಲೆನ್ಸ್ ಕಮಿಷನ್ನಿಗೆ ಕೊಡಿ ಎಂದು ಹೇಳುತ್ತಾರೆ ಆದರೆ ವಿಜಿಲೆನ್ಸ್ ಕಮಿಷನ್ನು ಆಕ್ಷೆನ್ ತೆಗೆದುಕೊಳ್ಳುವುದಿಲ್ಲ ವಿರೋಧ ಪಕ್ಷದವರಾದ ಹುಚ್ಚು ಮಾಸ್ತಿ ಗೌಡರು ಹೇಳುವುದಕ್ಕೆ ಯಾವ ಗೌರವ ಇದೇ ? ಮೊನ್ನೆ ಅಹಮದಾಬಾದ ಕಾಂಗ್ರೆಸ್ಸಿಗೆ ಹೋಗುವುದಕ್ಕಾಗಿ ಕುಣಿಗಲ್ಲಿನ ಒಬ್ಬ ಎ. ಐ. ಸಿ ಸಿ. ಸದಸ್ಯರನ್ನು ಕರೆದುಕೊಂಡು ಹೋಗಬೇಕು ಎಂದು ಎಗ್ಜಿಕ್ಯೂಟಿವ್ ಇಂಜಿನಿಯರರು ಬಂದು ಅವರನ್ನು ಕರೆದುಕೊಂಡು ಹೋಗುತ್ತಿದ್ದರು, ಇದು ಸರಿಯಾದ ಆಡಳಿತವೇ ? ನಾನು ಅದೇ ಹಾದಿಯಲ್ಲಿ ನಿಂತುಕೊಂಡಿದ್ದೆ. ನನಗೂ ಹೋಗಬೇಕಾಗಿತ್ತು, ಟೂರ್ ಪ್ರೋಗ್ರಾಂ ನನಗೂ ಕಳಿಸಿದ್ದರು. ಮುಖ್ಯ ಮಂತ್ರಿಗಳು ಬರುವವರು ಇದ್ದರು. ಆ ದಿವಸ ಅವರ ಜೊತೆಯಲ್ಲಿ ನಾನು ಹೋದೆ. ಆದರೆ ತುಮಕೂರು ಎಗ್ಜಿಕ್ಯೂಟಿವ್ ಇಂಜಿನಿಯರರು ನನ್ನನ್ನು ತಮ್ಮ ಜೀಪಿನಲ್ಲಿ ಕೂಡಿಸಲು ಇಷ್ಟಪಡಲಿಲ್ಲ. ಐದು ನಿಮಿಷಗಳ ನಂತರ ಅವರು ಎ. ಐ. ಸಿ. ಸಿ. ಮೆಂಬರರನ್ನು ಅದೇ ಜೀಪಿನಲ್ಲಿ ತುಮಕೂರಿಗೆ ಕರೆದುಕೊಂಡು ಹೋದರು. ಅಧಿಕಾರವನ್ನು ಈ ರೀತಿ ಉಪಯೋಗಿಸಿಕೊಳ್ಳುವಂಥ ಕಾಲ ಬಂದಿದೆ. ಆಡಳಿತ ಸರಿಯಾಗಿ ನಡೆದಿದೆಯೇ ? ಇದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅಧಿಕಾರಿಗಳಿಗೆ ಧೈರ್ಯ ಹೇಗೆ ಬರಬೇಕು ? ಸರಕಾರ ಸರಿಯಾಗಿ ನಡಿಸಿಕೊಂಡು ಗೌರವ ಕೊಟ್ಟರೆ, ಅಧಿಕಾರಿಗಳಿಗೆ ಈ ರೀತಿ ಮಾಡಲು ಧೈರ್ಯ ಬರುವುದಿಲ್ಲ. ಇದನ್ನು ಬದಲಾವಣೆ ಮಾಡಬೇಕು. ಯಾಕೆಂದರೆ ಆಡಳಿತವನ್ನು ಕೆಡಿಸಿ ಬಿಟ್ಟಿದ್ದಾರೆ. ಮುಖ್ಯ ಮಂತ್ರಿಗಳಿಗೆ ಇದು ವಿದಿತವಾಗಿದೆ. ಇದನ್ನು ಮನಗಾಣಬೇಕು.

ಇನ್ನು ಲಂಚದ ಆಪಾದನೆ ಹೇಳುತ್ತೇನೆ. ಮಂತ್ರಿಗಳು ಈಗ ಕೈಗಾರಿಕಾ ಉದ್ಯಮಗಳಲ್ಲಿ ಭಾಗಿ ಗಳಾಗಲು ತೊಡಗಿದ್ದಾರೆ. ಮಂಗಳೂರಿನಲ್ಲಿ ಇರತಕ್ಕಂಥ ಮಂಗಳೂರು ಫರ್ಟಿಲೈಜರ್ಸ್ ಕೆಮಿಕಲ್ಸ್‌ನಲ್ಲಿ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಹಣಕಾಸಿನ ಮಂತ್ರಿಗಳ ಭಾಗ ಸೇರಿದೆ, ಮತ್ತು ಅವರಿಗೆ ಅದರಲ್ಲಿ ಸ್ವಂತ ಆಸಕ್ತಿ ಇದೆ ಎಂದು ನಾನು ಕೇಳುತ್ತೇನೆ. ಎಷ್ಟರಮಟ್ಟಿಗೆ ಇದರಲ್ಲಿ ನಿಜ ಇದೆ ಎನ್ನುವುದನ್ನು ಪೂರ್ಣವಾಗಿ ನಾನು ಹೇಳುವ ಸ್ಥಿತಿಯಲ್ಲಿ ಇಲ್ಲ. ಮಂಗಳೂರು ಫರ್ಟಿಲೈಜರ್ಸ್ ಫ್ಯಾಕ್ಟರಿಗೆ ೨೮೫ ಎಕರೆ ಜಮೀನು ತೆಗೆದುಕೊಂಡಿದ್ದಾರೆ. ಈ ಫ್ಯಾಕ್ಟರಿಯ ಅಧಿಕೃತ ಬಂಡವಾಳ ೧೪ ಕೋಟಿ ರೂಪಾಯಿ ಇದೆ. ಇದರಲ್ಲಿ ಅವರದು ಬಹುಮಟ್ಟಿಗೆ ಆಸಕ್ತಿ ಇದೆ ಎಂದು ಕೇಳಿದ್ದೇನೆ. ಇದುತನಿಖೆ ಮಾಡುವುದಕ್ಕೆ ಲಾಯಖ್ ಆದ ಪ್ರಶ್ನೆ. ಮುಖ್ಯಮಂತ್ರಿಗಳು ಪೂನಾದಲ್ಲಿರುವ ಮೂರುವರೆಕೋಟಿ ಬಂಡವಾಳ ಇರುವ ಒಂದು ದೊಡ್ಡ ಉದ್ಯಮದಲ್ಲಿ ಭಾಗಿಗಳಾಗಿದ್ದಾರೆ. ಇಷ್ಟೊಂದು ಹಣ ಇಂಥ ದೊಡ್ಡ ದೊಡ್ಡ ಉದ್ಯಮದಲ್ಲಿ ಹಾಕಿ ಭಾಗವಹಿಸಲಿಕ್ಕೆ ಅವರಿಗೆ ಎಲ್ಲಿಂದ ಬಂತು ? ಇವರ ಉತ್ಪತ್ತಿ ಎಷ್ಟು ? ವರ್ಷೇ ವರ್ಷೇ ತಮ್ಮ ಸ್ವಂತ ಆಸ್ತಿಯಲ್ಲಿ ಸೇರತಕ್ಕಂಥಾದ್ದು ಎಷ್ಟು ? ಮಂತ್ರಿ ಪದವಿಗೆ ಬಂದ ಮೇಲೆ ಹಣ ಖರ್ಚಾಗುವುದು ಎಷ್ಟು, ಹಣ ಉಳಿಯುವುದು ಎಷ್ಟು ? ಇಷ್ಟು ಬಂಡವಾಳ ಹೇಗೆ ಬರುತ್ತದೆ ?ಇದನ್ನು ತಿಳಿಯುವುದು ಅಗತ್ಯ. ಇಂಥ ಗುರುತರ ಆಕ್ಷೇಪಣೆಯನ್ನು ತನಿಖೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ನಮ್ಮ ಮಂತ್ರಿಮಂಡಳದಲ್ಲಿರುವ ಒಬ್ಬ ಉಪ–ಮಂತ್ರಿಗಳು ಒಂದು ಸೊಸೈಟಿಯಲ್ಲಿ ೩,೪೦೦ ರೂಪಾಯಿ ಹಣ ದುರುಪಯೋಗ ಮಾಡಿದ್ದಾರೆ ಎಂದು ಸ್ಪಷ್ಟವಾಗಿ ನಾನು ಹೇಳಿದ್ದೇನೆ. ಆ ಸೊಸೈಟಿಯ ಆಡಿಟರ್ ರಿಪೋರ್ಟನ್ನು ಮುಖ್ಯ ಮಂತ್ರಿಗಳಿಗೆ ನಾನು ತೋರಿಸಿದ್ದೇನೆ. ಆಡಿಟ್ ರಿಪೋರ್ಟ್ ಬದಲಾವಣೆ ಮಾಡುವಂಥ ಧೈರ್ಯ ಈ ಇಲಾಖೆಯವರಿಗೆ ಇರುತ್ತದೆಯೇ ಎನ್ನುವುದನ್ನು ಆಲೋಚನೆ ಮಾಡಿ. ಮೇಲಿನಿಂದ ತಿಳುವಳಿಕೆ ಕೊಟ್ಟು ಆಡಿಟ್ ರಿಪೋರ್ಟನ್ನೇ ಬದಲಾವಣೆ ಮಾಡಿದ್ದಾಗೆ. ಅವರು ಮುಖ್ಯ ಮಂತ್ರಿಗಳೇ ಇರಲಿ, ಅವರು ಯಾರೇ ಇರಲಿ. ಅವರು ಯಾರು ಎನ್ನುವುದು ನನಗೆ ಗೊತ್ತು. ಅವರು ಎಷ್ಟು ಬಂಡವಾಳ ಮಾಡಿದ್ದಾರೆ ಎಂಬುದನ್ನು ವಿಚಾರಣೆ ಮಾಡಿದರೆ ಗೊತ್ತಾಗುತ್ತದೆ. ಅಂಥವರ ವಿಚಾರಣೆ ಆಗಲೇಬೇಕು. ಅಧಿಕಾರ ಸ್ಥಾನದಲ್ಲಿ ಇದ್ದಾರೆಂದು ದಾಕ್ಷಿಣ್ಯ ಇಟ್ಟುಕೊಳ್ಳಬಾರದು. ಇಂಥ ಆಕ್ಷೇಪಣೆ ಇದೆ. ಅವರು ಯಾರೇ ಇದ್ದರೂ. ಮುಖ್ಯ ಮಂತ್ರಿಗಳೇ ಇದ್ದರೂ ಅವರು ಶಿಕ್ಷೆಗೆ ಅರ್ಹರಾಗುತ್ತಾರೆ ಎಂದು ಆಪಾದನೆ ಮಾಡುತ್ತೇನೆ. ನಮ್ಮ ತಾಲ್ಲೂಕಿನಲ್ಲೆಲ್ಲಾ ಈ ವಿಷಯ ಗೊತ್ತಾಗಿದೆ. ಇಂಥ ಆಪಾದನೆಗಳು ಇವೆ. ಇಂಥ ಆಪಾದನೆಗಳನ್ನು ಹೊಂದಿರತಕ್ಕಂಥ ಸರ್ಕಾರಕ್ಕೆ ಅವರು ಕೇಳಿರತ್ತಕ್ಕಂಥ ಬೇಡಿಕೆಯಲ್ಲಿಯ ಹಣ ಖಂಡಿತವಾಗಿ ಕೊಡ ಕೂಡದು, ಅಧಿಕಾರದಲ್ಲಿ ಇರತಕ್ಕಂಥವರನ್ನು ಕಿತ್ತು ಹಾಕಬೇಕು, ಸರ್ವರ ಪ್ರಶಂಸೆಗೆ ಪಾತ್ರರಾಗಬೇಕಲ್ಲದೆ ಬೇರೆ ಮಾರ್ಗವೇ ಇಲ್ಲ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಐ. ಸೋಮಶೇಖರಪ್ಪ (ಹೊಸನಗರ):—ಮಾನ್ಯ ಅಧ್ಯಕ್ಷರೇ ನಮ್ಮ ಮುಂದೆ ಮಂಡಿಸಿರತಕ್ಕಂಥ ಸಾಮಾನ್ಯ ಆಡಳಿತ, ಪೋಲೀಸ್ ಮತ್ತು ಜೈಲು ಈ ಡಿಮ್ಯಾಂಡುಗಳಲ್ಲಿ ನಾನು ಸಾಮಾನ್ಯ ಆಡಳಿತ ಮತ್ತು ಪೋಲೀಸ್ ಬೇಡಿಕೆಗಳ ಬಗ್ಗೆ ಒಂದರೆಡು ಮಾತುಗಳನ್ನು ಆಡಬಯಸುತ್ತೇನೆ; ಮತ್ತು ನಾನು ಈ ಡಿಮ್ಯಾಂಡುಗಳನ್ನು ಸ್ವಾಗತಮಾಡುತ್ತೆನೆ

MR. CHAIRMAN (SRI D. M. SIDDIAH) *in the Chair.*

ಯಾವುದಾದರೊಂದು ರಾಜ್ಯದ ಆಡಳಿತವಾಗಲೀ ಅಥವಾ ರಾಷ್ಟ್ರದ ಆಡಳಿತವಾಗಲೀ ಆದು ಒಂದು ಸುಲಲಿತವಾಗಿ ನಡಯಬೇಕಾಗಿದ್ದರೆ ಅದಕ್ಕೆ ಕಾರಣ, ಆಲ್ಲಿರತಕ್ಕ ಸಿವಿಲ್ ಸರ್ವೀಸ್ ನೌಕರಿವರ್ಗದವರೇ ಕಾರಣ, ಈ ವಿಷಯ ಅವರನ್ನು ಅವಲಂಬಿಸಿರುತ್ತದೆ. ಯಾವ ರಾಜ್ಯದಲ್ಲಿ ದಕ್ಷ ಅಧಿಕಾರಿಗಳು, ರಾಷ್ಟ್ರಾಭಿಮಾನವುಳ್ಳ ಅಧಿಕಾರಿಗಳು ಮತ್ತು ಸೇವಾಮನೋಭಾವವುಳ್ಳ ಅಧಿಕಾರಿಗಳಿರುತ್ತಾರೋ ಅಂಥ ಕಡೆಯಲ್ಲಿ ಅಂತರಾಜ್ಯದಲ್ಲಿ ಉತ್ತಮ ಆಡಳಿತವಿರುತ್ತದೆ. ಈ ಒಂದು ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಆಡಳಿತ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ನೋಡಿದರೆ ಈ ದಿವಸ ನಮ್ಮ ರಾಜ್ಯದಲ್ಲಿರತಕ್ಕ ಅಧಿಕಾರಿಗಳೇನಿದ್ದಾರೆ ಅವರು ೧೯೫೬ಕ್ಕೆ ಹಿಂದೆ ವಿವಿಧವಾಗಿ ಐದು ರಾಜ್ಯಗಳಲ್ಲಿ ಹಂಚಿಹೋಗಿದ್ದರು. ಕೆಲವರು ಬೊಂಬಾಯಿ ಕರ್ನಾಟಕದಲ್ಲಿ ಇನ್ನು ಕೆಲವರು ಮದಾಸ್ ಕರ್ನಾಟಕದಲ್ಲಿ, ಮತ್ತೆ ಕೆಲವರು ಹೈದ್ರಾಬಾದ್ ಕರ್ನಾಟಕದಲ್ಲಿ ಇನ್ನು ಕೆಲವರು ಕೊಡಗಿನಲ್ಲಿ ಹೀಗೆ ಹಂಚಿ ಹೋಗಿದ್ದರು. ಅಲ್ಲಿಯ ಆಡಳಿತ ಒಂದೊಂದು ಕಡೆ ಒಂದೊಂದು ವಿಧವಾಗಿ ನಡೆಯುತ್ತಿತ್ತು. ಅವರ ಮನೋಭಾವನೆಗಳೂ ಕೂಡ ಒಂದೊಂದು ರೀತಿಯಾಗಿದ್ದವು. ಆದರೆ ಅವರೆಲ್ಲರೂ ೧೯೫೬ ನಂತರ ರಾಜ್ಯಗಳ ಪುನರ್ನಿರ್ಮಾಣದಿಯಾದ ಬಳಿಕ ಇಲ್ಲಿ ಒಂದು ಕಡೆ ಬಂದು ಹೊಸ ಮೈಸೂರು ರಾಜ್ಯದಲ್ಲಿ ಸೇರಿದರು. ಈ ಐದುಕಡೆಗಳಿಂದ ಬಂದವರ ಸೀನಿಯಾರ್ಟಿ ಮತ್ತು ಅವರ ಭಡ್ತಿ

ಇತ್ಯಾದಿ ವಿಚಾರಗಳಲ್ಲಿ ಅನೇಕ ವಾದವಿವಾದಗಳಿವೆ. ಈ ವಿಚಾರದಲ್ಲಿ ನಮ್ಮ ಅಧಿಕಾರಿಗಳಿಗೆ ಅನೇಕರಿಗೆ ಕೆಲಸ ಮಾಡುವುದರಲ್ಲಿ ಯಾವ ಸಂತೋಷವೂ ಇದ್ದಂತೆ ಕಾಣುವುದಿಲ್ಲ ಉದಾಹರಣೆಗೆ ಹೇಳುವುದಾದರೆ ವ್ಯವಸಾಯದ ಇಲಾಖೆಯಲ್ಲಿ, ಆರೋಗ್ಯ ಇಲಾಖೆಯಲ್ಲಿ, ಅರಣ್ಯ ಇಲಾಖೆಯಲ್ಲಿ ಮತ್ತು ಯೂನಿವರ್ಸಿಟಿ ಇಲಾಖೆಗಳಲ್ಲಿ ಅನೇಕರು ಜಿಗುಪ್ಸೆಗೊಂಡಿದ್ದಾರೆ ಕೆಲವು ಇಲಾಖೆಗಳಲ್ಲಿ ಕೆಳಗಿನ ದರ್ಜೆಯಲ್ಲಿದ್ದವರು ಮೇಲಕ್ಕೆರಿದ್ದಾರೆ. ಯಾವನು ವಿದ್ಯಾರ್ಥಿಯಾಗಿ ಒಬ್ಬ ಲೆಕ್ಚರರ ಕೈಕೆಳಗೆ ವಿದ್ಯೆ ಕಲಿತನೋ ಅಂಥವನು ಈ ದಿವಸ ಆ ಲೆಕ್ಚರರ್ ಮೇಲೆ ಅಧಿಕಾರಿಯಾಗಿ ಬಂದಿದ್ದಾನೆ ಹೀಗಾಗಿ ಅಧಿಕಾರವರ್ಗದಲ್ಲಿ ಎಲ್ಲಿನೋಡಿದರೂ ಅಸೂಯೆ ಮೂಡಿದೆ. ಇಂಥ ಸನ್ನಿವೇಶದಲ್ಲಿ ದಕ್ಷತೆಯಿಂದ ಆಸಕ್ತಿಯಿಂದ ಕೆಲಸಮಾಡಿ ಎಂದರೆ ಹೇಗೆ ಮಾಡುತ್ತಾರೆ ? ಈ ಸನ್ನಿವೇಶವನ್ನು ತಪ್ಪಿಸುವುದಕ್ಕಾಗಿ ನಮ್ಮ ಸರ್ಕಾರದವರು ಸಾಕಷ್ಟು ಪ್ರಯತ್ನ ಮಾಡುತ್ತಾರೆ. ಅವರೆ ಆದರ ಪ್ರೆಖರಿ ಬೇರೆ ದಿನಾಂಕ ೨ನೇ ಜುಲೈ ೧೯೬೫ ಮತ್ತು ೮ನೇ ಮಾರ್ಚ್ ೧೯೬೬ ರಲ್ಲಿ ಎರಡು ಸರ್ಕಾರಿ ಆಜ್ಞೆಗಳು ಹೊರಟವು. ಆಗ ಈ ಸರ್ಕಾರಿ ನೌಕರಿಯಲ್ಲಿ ಯಾರ್ಯಾರಿಗೆ ಜಿಗುಪ್ಸೆಯುಂಟಾಗಿದೆ ಅಂಥವರಿಗೆ ಪಾಲಂಟರಿಯಾಗಿ ರಿಟೈರಾಗುವುದಕ್ಕೆ ಅವಕಾಶ ಮಾಡಿದ್ದರು. ಆದರೆ ಈ ದಿವಸ ಅಂಥ ವಾಲಂಟರಿ ರಿಟೈರ್‌ಮೆಂಟಿಗೆ ಅವಕಾಶವಿಲ್ಲ. ಅನೇಕರು ಈ ದಿವಸ ಈ ಸೆಕ್ರೆಟರಿಯೆಟ್ ಲೆವಲ್‌ನಿಂದ ಅಂಥ ವಾಲಂಟರಿ ರಿಟೈರ್‌ಮೆಂಟಿಗೆ ಅವಕಾಶವಿಲ್ಲ. ಅನೇಕರು ಈ ದಿವಸ ಈ ಸೆಕ್ರೆಟರಿಯೆಟ್ ಲೆವಲ್‌ನಿಂದ ಹಿಡಿದು ಪ್ರೈಮರಿ ಶಾಲೆಗಳವರೆಗೂ ಜಿಗುಪ್ಸೆಹೊಂದಿದ ನೌಕರರಿದ್ದಾರೆ. ಅವರಿಗೆ ಕಂಪಲ್‌ಸರಿಯಾಗಿ ನಿವೃತ್ತಿ ಹೋಗುವುದಕ್ಕೆ ಸರ್ಕಾರ ಒಂದು ಅವಕಾಶವನ್ನು ಕಲ್ಪಿಸಬೇಕಾದುದು ಅಗತ್ಯ. ಅಂಥ ಒಂದು ಅವಕಾಶ ಮಾಡಿದರೆ ಮಾತ್ರ ಇಲ್ಲಿ ದಕ್ಷರಾದ ಮತ್ತು ಸೇವಾಮನೋಭಾವವುಳ್ಳ ಅಧಿಕಾರಿಗಳಿದ್ದು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದು ಮತ್ತು ಆಡಳಿತವೂ ಕೂಡ ಎಫಿಷಿಯೆಂಟಾಗಿರುತ್ತದೆ. ಆದ್ದರಿಂದ ನಿಜವಾಗಿಯೂ ಆಸಕ್ತಿಯಿಲ್ಲದಂಥ ನೌಕರರಿಗೆ ನಿವೃತ್ತಿ ಹೊಂದಲು ಅಂದರೆ ೧೦ ವರ್ಷ ಸರ್ವೀಸಾದವರಿಗೆ ಮೂರನೇ ಒಂದು ಭಾಗದ ಪೆನ್‌ಷನ್ ಕೊಡುವಂತೆಯೂ ಮತ್ತು ೧೫ ವರ್ಷ ಸರ್ವೀಸಾಗಿದ್ದವರಿಗೆ ಅರ್ಧ ಪೆನ್‌ಷನ್ ಸೆಕ್ಯುವಂತೆಯೂ ಮತ್ತು ೨೦ ವರ್ಷ ಸರ್ವೀಸಾಗಿದ್ದವರಿಗೆ ಮುಕ್ಕಾಲು ಪೆನ್‌ಷನ್ ಸಿಕ್ಕುವುದಕ್ಕೆ ಅವಕಾಶವಾಗುವಂತೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಆಡಳಿತದಲ್ಲಿಯೂ ಅನೇಕ ಲೋಪದೋಷಗಳಿವೆ. ಇದು ವರ್ಗವರ್ಗಿಯಲ್ಲಂತೂ ಅತಿರೇಕವಾಗಿದೆ. ಕೆಲವರು ಒಂದೇ ಕಡೆಯಲ್ಲಿ ೬ ವರ್ಷ ೧೦ ವರ್ಷಗಳ ಗಟ್ಟಲೆ ಇದ್ದರೆ ಇನ್ನು ಕೆಲವು ಕಡೆ ಆರಾರು ತಿಂಗಳಿಗೆ ಒಬ್ಬೊಬ್ಬರನ್ನು ವರ್ಗಮಾಡುತ್ತಿರುತ್ತಾರೆ. ಇದಕ್ಕೇನೂ ಒಂದು ನಿಯಾಮಾವಳಿ ಇಲ್ಲವೆ ಒಬ್ಬೊಬ್ಬ ನೌಕರನನ್ನು ಒಂದೇ ಕಡೆಯಲ್ಲಿ ೧೮-೧೫ ವರ್ಷ ಇಟ್ಟರೆ ಅವನಿಗೆ ಸರ್ಕಾರಿ ಕೆಲಸದಲ್ಲಿ ಯಾವ ಆಸಕ್ತಿಯೂ ಇರುವುದಿಲ್ಲ. ಅವನು ತನ್ನ ವ್ಯಾಪಾರ ಇಲ್ಲವೆ ವ್ಯವಸಾಯ ಇತ್ಯಾದಿ ಕಸುಬುಗಳಲ್ಲಿ ಕಾಲವನ್ನು ವಿನಿಯೋಗಿಸುತ್ತಾನೆ. ಕೆಲವರು ಇನ್‌ಷೂರೆನ್ಸ್ ಏಜಂಟರುಗಳಾಗಿ ಕೆಲಸ ಮಾಡುತ್ತಾರೆ. ಅವರಿಗೆ ಈ ಸರ್ಕಾರಿ ನೌಕರಿ ಒಂದು ಉಪಕಸುಬು ಮಾತ್ರ. ಉದಾಹರಣೆಗೆ ಒಬ್ಬ ಉಪಾಧ್ಯಾಯ ಒಂದೇ ಕಡೆ ೧೦ ವರ್ಷಗಳ ಕಾಲ ಇದ್ದಕಾರಣ ಆತನು ಅಲ್ಲಿಯ ಪಂಚಾಯಿತಿಯಲ್ಲಿ ತನ್ನ ಹೆಂಡತಿಯನ್ನು ಚುನಾವಣೆಗೆ ನಿಲ್ಲಿಸಿ ತಾನು ಸದಾ ರಾಜಕೀಯದಲ್ಲೇ ಆತ ಇರುತ್ತಾನೆ. ಅಂದಾಗ ಆ ಶಾಲೆಯ ಅಭಿವೃದ್ಧಿ ಏನಾಗಬೇಕು ? ಇದಕ್ಕಾಗೇ ನಾನು ಸರ್ಕಾರದವರನ್ನು ಒತ್ತಾಯಮಾಡುತ್ತಿರುವುದು ಯಾರನ್ನೂ ಕೂಡ ಒಂದು ಸ್ಥಳದಲ್ಲಿ ೩ ವರ್ಷಗಳಿಗೆ ಹೆಚ್ಚು ಇಡಬಾರದು ಎಂದು ಇದರ ಜೊತೆಗೆ ಆಯಾಯ ತಾಲ್ಲೂಕಿನಲ್ಲಿರ ತಕ್ಕ ಜನರನ್ನು ಆ ತಾಲ್ಲೂಕಿನಲ್ಲಿ ಕೆಲಸಕ್ಕೆ ನೇಮಕ ಮಾಡದೆ ಅವರನ್ನು ಬೇರೆ ತಾಲ್ಲೂಕಿಗೆ ಹಾಕಬೇಕೆಂದು ಒತ್ತಾಯ ಮಾಡುತ್ತೇನೆ. ಇಲ್ಲದೆ ಹೋದರೆ ಈ ನೌಕರರಲ್ಲಿ ದಕ್ಷತೆ ಎಂದಿಗೂ ಬರುವುದಿಲ್ಲ. ಇನ್ನು ನಮ್ಮ ಜಿಲ್ಲೆಯಲ್ಲಿ ಒಬ್ಬ ಉಪ-ಮಂತ್ರಿಗಳ ಸಹಕಾರದಿಂದ ಒಬ್ಬ ಲೋಕಲ್ ಕ್ಯಾಂಡಿಡೇಟ್ ಅದರಲ್ಲೂ ಸಕೆಂಡ್ ಡಿವಿಜನ್ ಗುಮಾಸ್ತನನ್ನು ಶಿವಮೊಗ್ಗದಿಂದ ಮೈಸೂರು ಡಿವಿಜನ್ನಿಗೆ ವರ್ಗಾಯಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದರಲ್ಲಿ ಕೈ ಹಾಕಿರತಕ್ಕವರು ಅಂದರೆ ಬಿ. ಡಿ. ಒ., ಡಿ. ಸಿ. ಡಿವಿಜನ್ ಕಮಿಷನರ್ ಇವರೆಲ್ಲಾ ಕೂಡಿ ಒಂದು ಸುಯೋ ಮೋಟೋವರ್ಗಡ ಆರ್ಡರನ್ನು ಹೊರಡಿಸಿದ್ದಾರೆ. ಆದರೆ ಅದನ್ನು ಬೆಂಗಳೂರು ಡಿವಿಜನ್ ಕಮಿಷನರ್ ತಡೆಹಿಡಿದರು. ಆದಕ್ಕೆ ಮತ್ತೆ ಸರ್ಕಾರ ಒಂದು ಸ್ಪೆಷಲ್ ಆರ್ಡರನ್ನು ಹೊರಡಿಸಿತು. ಹೀಗೆ ವರ್ಗಮಾಡುವುದು ಯಾವ ನಿಯಮಕ್ಕೆ ಸೇರಿದ್ದು ?

ಇದು ಕೇವಲ ಆರ್ಡಿಯ ಮೂಲಕ, ಕೆಲವೊಂದು ಶಿಫಾರಸ್ಸಿನ ಮೂಲಕ ಆಗತಕ್ಕಂಥಾದಲ್ಲ, ಆ ಸಕೆಂಡ್ ಡಿವಿಜನ್ ಕ್ಲರ್ಕ್‌ಗೆ ಲೋಕಲ್ ಕ್ಯಾಂಡಿಡೇಟ್ಸ್‌ಗೆ ಈ ಒಂದು ಸರ್ಕಾರವನ್ನೇ ಆಳತಕ್ಕಂಥ ಶಕ್ತಿ ಇರುವಾಗ ಇನ್ನು ಉಳಿದ ಅಧಿಕಾರಿಗೆ ಎಂತಹ ಶಕ್ತಿ ಇದೆ ಎಂದು ಯೋಚನೆ ಮಾಡಬೇಕು. ಆದುದರಿಂದ ನಾನು ಹೇಳುವುದು ಅನಿವಾರ್ಯವಾಗಿ ಅವಶ್ಯಕವಾದ ಸಂದರ್ಭ ಬಂದಾಗ ಅವನನ್ನು ವರ್ಗ ಮಾಡಬೇಕು; ಕೇವಲ ಸಣ್ಣ ಸಣ್ಣ ಅಧಿಕಾರಿಗಳನ್ನು ೬ ತಿಂಗಳಿಗೋ ೩ ತಿಂಗಳಿಗೋ ವರ್ಗ ಮಾಡುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

(ಶ್ರೀ ಐ. ಸೋಮಶೇಖರಪ್ಪ)

ಇನ್ನು ಪೋಲೀಸ್ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಸಿದ್ದವೀರಪ್ಪ ನವರು ಇದ್ದಿದ್ದರೆ ಚೆನ್ನಾಗಿತ್ತು ಎಂದು ಹೇಳುತ್ತೇನೆ. ಅವರು ಈವೊತ್ತಿನ ದಿವಸ ಅಜ್ಜಂಪುರದ ಪ್ರಕರಣ, ಮಂಡ್ಯದ ಪ್ರಕರಣ, ಗುಲ್ಬರ್ಗದ ಪ್ರಕರಣ ಇಂಥ ಪ್ರಕರಣಗಳನ್ನು ಮುಂದಿಟ್ಟಿದ್ದಾರೆ. ಮತ್ತು ರಾಜ್ಯದಲ್ಲಿ ಕೇಂದ್ರ ಹಸ್ತಕ್ಷೇಪ ಮಾಡುವ ಕಾಲ ಬಂದಿದೆ ಎಂದು ಎಚ್ಚರಿಕೆ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಶ್ರೀಮಾನ್ ಸಿದ್ದವೀರಪ್ಪನವರ ಗಮನವನ್ನು ಸೆಳೆಯುತ್ತೇನೆ. ನಮ್ಮ ರಾಜ್ಯದಲ್ಲಿರತಕ್ಕಂಥ ಪೋಲೀಸ್ ಆಡಳಿತವನ್ನು ಮತ್ತು ಪಕ್ಕದ ರಾಜ್ಯವಾದ ಕೇರಳ ಮತ್ತು ವೆಸ್ಟ್ ಬಂಗಾಳ ಇವುಗಳ ಆಡಳಿತವನ್ನು ಹೋಲಿಕೆ ಮಾಡಿದರೆ ನಮ್ಮ ರಾಜ್ಯದ ಪೋಲೀಸ್ ಆಡಳಿತ ಎಷ್ಟು ಉತ್ತಮ ಮಟ್ಟದಲ್ಲಿದೆ ಎಂದು ಗೊತ್ತಾಗುತ್ತದೆ. ಈವೊತ್ತು ಶ್ರೀಮಾನ್ ಸಿದ್ದವೀರಪ್ಪನವರೂ, ನಾವೂ, ನೀವೂ ವೆಸ್ಟ್ ಬಂಗಾಳದಲ್ಲಿ ರವೀಂದ್ರ ಸರೋವರದಲ್ಲಿ ನಡೆದಂಥ ಪ್ರಕರಣವನ್ನು ನೋಡಿದರೆ ಎಷ್ಟು ಜನ ಹೆಣ್ಣುಮಕ್ಕಳಿಗೆ ಅವಹೇಳನವಾಯಿತು, ವಸ್ತ್ರಾಪಹರಣ ನಡೆದು ಮಾನಭಂಗವಾಯಿತು ಎನ್ನುವುದನ್ನು ಜ್ಞಾಪಿಸಿ-ಕೊಳ್ಳೋಣ. ಮತ್ತು ಬಂಗಾಳದಲ್ಲಿ ಅಸೆಂಬ್ಲಿ ನಡೆಯುತ್ತಿದ್ದಾಗ ೩ ಸಾವಿರ ಜನ ಪೋಲೀಸರು ವಿಧಾನಸಭೆಗೆ ನುಗ್ಗಿ ಅಲ್ಲಿದ್ದಂಥ ಉಪಕರಣಗಳನ್ನು ಹಾಳು ಮಾಡಿದರು. ಅಲ್ಲಿದ್ದಂಥ ಮಂತ್ರಿಗಳು, ಸದಸ್ಯರು ತಮ್ಮ ಜೀವವನ್ನು ಉಳಿಸಿಕೊಳ್ಳುವುದಕ್ಕೆ ಕಷ್ಟವಾಯಿತು. ಇಂತಹ ಘಟನೆ ಮೈಸೂರು ರಾಜ್ಯದಲ್ಲಿ ನಡೆದಿದೆಯೇ ಎಂದು ಕೇಳುತ್ತೇನೆ. ಇದರ ಬಗ್ಗೆ ವಿರೋಧ ಪಕ್ಷದ ಸದಸ್ಯರು ನಮ್ಮ ಪೋಲೀಸ್ ಆಡಳಿತದ ಮಟ್ಟ ಎಷ್ಟುಚೆನ್ನಾಗಿದೆ ಅನ್ನುವುದನ್ನು ಅರಿತುಕೊಳ್ಳಬೇಕು. ಮೊನ್ನೆ ತಾನೆ ಬ್ಲಿಟ್ಸ್ ಪೇಪರ್‌ನಲ್ಲಿ ಬಂಗಾಳದಲ್ಲಿ ಕಳೆದ ವರ್ಷ ಪೊಲಿಟಿಕಲ್ ಮರ್ಡರ್ಸ್ ೬೦೦ ಆಗಿದೆ ಎನ್ನುವುದನ್ನು ನೋಡಿದೆ. ಅದು ರಿಪೋರ್ಟೆಡ್ ಕೇಸುಗಳು.

ಶ್ರೀ ಬಿ. ದೊಡ್ಡಬೋರೇಗೌಡ: ಮಾನ್ಯ ಸದಸ್ಯರು ಬಂಗಾಳದಲ್ಲಿ ವಿಧಾನಸಭೆಗೆ ೩ ಸಾವಿರ ಜನರು ಪೋಲೀಸಿನವರು ನುಗ್ಗಿದರು ಎಂದು ಹೇಳಿದರು. ಹಾಗಾದರೆ ಅದೇರೀತಿ ಇಲ್ಲೂ ನುಗ್ಗಬೇಕು ಅನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯವೇ ?

ಶ್ರೀ ಐ. ಸೋಮಶೇಖರಪ್ಪ:—ನಮ್ಮ ರಾಜ್ಯದಲ್ಲಿ ಆಡಳಿತದ ಬಗ್ಗೆ ಸರ್ಕಾರದವರು ಅಂಕಿ ಅಂಶ-ಗಳನ್ನು ಒದಗಿಸಿಕೊಟ್ಟಿದ್ದಾರೆ. ವಿರೋಧ ಪಕ್ಷದವರು ಅಂಕಿಅಂಶಗಳು ಸರಿಯಲ್ಲ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ನಡೆದಂಥ ದರೋಡೆ ಕೊಲೆ, ಮತ್ತು ಕಳುವುಗಳ ಬಗ್ಗೆ ೧೯೬೦ ರಿಂದಲೂ ಅಂಕಿಅಂಶಗಳನ್ನು ಕೊಟ್ಟಿದ್ದಾರೆ, ಅದನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಂ. ನಾಗಪ್ಪ.—ಹಪೆಡ್ ಆಫ್ ಮತ್ತು ಅನ್‌ರಿಪೋರ್ಟೆಡ್ ಕೇಸಸ್ ಎಷ್ಟು ಇವೆ ನೋಡಿ.

ಶ್ರೀ ಐ. ಸೋಮಶೇಖರಪ್ಪ:— ಈ ಅಂಕಿಅಂಶದ ಪ್ರಕಾರವೇ ನಮ್ಮ ರಾಜ್ಯದಲ್ಲಿ ಕೊಲೆಗಳ ಸಂಖ್ಯೆ, ದರೋಡೆ ಸಂಖ್ಯೆ ಪ್ರತಿವರ್ಷವೂ ಕಡಿಮೆಯಾಗುತ್ತದೆಯೇ, ಚಾಸ್ತಿಯಾಗುತ್ತದೆಯೇ ಎನ್ನುವುದನ್ನು ಅವರು ಯೋಚನೆ ಮಾಡಲಿ, ಹೀಗಿರುವಾಗ ಆಡಳಿತದಲ್ಲಿ ದಕ್ಷತೆ ಇದೆಯೋ ಇಲ್ಲವೋ ಎನ್ನುವುದನ್ನು ಯೋಚನೆ ಮಾಡಲಿ. ಸರ್ವಾಂಗಸುಂದರವಾದಂಥ ದಕ್ಷತೆ, ಪೋಲೀಸ್ ಆಡಳಿತದಲ್ಲಿದೆ ಎಂದು ಹೇಳುವುದಿಲ್ಲ. ಕೆಲವು ನ್ಯೂನತೆಗಳೂ ಇಲ್ಲ ಎಂದು ಹೇಳುವುದಿಲ್ಲ. ಕೆಲವು ದೋಷಗಳು ಇರಬಹುದು.

ಶ್ರೀ ಅಜೀಜ್‌ಸೇಟ್.—ಶಿವಮೊಗ್ಗ ಡಿಸ್ಟ್ರಿಕ್ಟ್‌ನಲ್ಲಿ ಎಷ್ಟು ಟಿಂಬರ್ ಕಳ್ಳ ಸಾಗಣಿಕೆಯಲ್ಲಿ ಹೋಗಿದೆ? ಎಷ್ಟು ಕೇಸು ಹಿಡಿದಿದ್ದೀರಿ? ಎಷ್ಟು ಕೇಸುಗಳನ್ನು ರಿಪೋರ್ಟ್ ಮಾಡಿದ್ದೀರಿ?

ಶ್ರೀ ಐ. ಸೋಮಶೇಖರಪ್ಪ:—ನಾನು ಒಂದು ವಿಷಯ ಮಾತ್ರ ಹೇಳುತ್ತೇನೆ. ಹಿಂದಿನ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ನಿಜಲಿಂಗಪ್ಪನವರು ಆನೇಕ ಬಾರಿ ಹೇಳಿದ್ದರು, ಅದು ಏನೆಂದರೆ ಒಬ್ಬರು ಜಿಲ್ಲಾಧಿಕಾರಿಗಳು ಕರಪ್ಟ್ ಆಗಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿದೆ, ಕಾನೂನು ಸಡಿಲ ಮಾಡಬೇಕೆಂಬ ಒಂದು ಸಲಹೆ ಕೊಟ್ಟಿದ್ದರು. ನಾನು ಹೇಳುವುದು ಏನೆಂದರೆ ಮೈಸೂರು ಸಿವಿಲ್ ಸರ್ವಿಸ್ ರೂಲ್ಸ್‌ನ ಪ್ರಕಾರ ರಾಜ್ಯಾಂಗ ೩೧೧ನೇ ಕಾಲಂ ಪ್ರಕಾರ ನೌಕರ ವರ್ಗದವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ತೊಂದರೆಯಾಗುತ್ತದೆ ಅನ್ನುವುದಾದರೆ ಈ ೩೧೧ನೇ ಕಾಲಂ

ಸರ್ಕಾರಕ್ಕೆ ತೊಂದರೆ ಆಗದ ರೀತಿಯಲ್ಲಿ ಬದಲಾವಣೆ ಮಾಡಿಕೊಳ್ಳೋಣ. ಇದರ ಬಗ್ಗೆ ಈ ಸಭೆಯ ಸರ್ವಾನುಮತ ತೀರ್ಮಾನ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಈ ನಿರ್ಣಯವನ್ನು ಕಳುಹಿಸಿಕೊಡೋಣ. ಇದನ್ನು ಮಾನ್ಯ ಮಂತ್ರಿಗಳೂ ಮತ್ತು ಮಂಡಲದವರೂ ಯೋಚನೆ ಮಾಡಿ ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಎಮ್. ಎಸ್. ಶಾಸ್ತ್ರಿ (ಚಿಕ್ಕಮಗಳೂರು):—

ಸನ್ಮಾನ್ಯ ಅಧ್ಯಕ್ಷರೇ, ಈಗ ಮೊಟ್ಟಮೊದಲನೆಯದಾಗಿ ಸಾಮಾನ್ಯ ಆಡಳಿತದ ಖರ್ಚಿಗೆ ೫ ಕೋಟಿ ೧೩ ಲಕ್ಷ ೧೦ ಸಾವಿರ ರೂಪಾಯಿಯನ್ನು ಬಹುಶಃ ಈ ದೊಡ್ಡ ಮೊತ್ತವನ್ನು ಇಟ್ಟುಕೊಂಡಿದ್ದಾರೆ. ಏತಕ್ಕಾಗಿ ಈ ದೊಡ್ಡ ಮೊತ್ತವನ್ನು ಇಟ್ಟುಕೊಂಡಿದ್ದಾರೋ ನನಗೆ ಅರ್ಥವಾಗುವುದಿಲ್ಲ. ಆದರೆಲ್ಲಿ ರಾಜ್ಯಪಾಲರಿಗೆ ಇರತಕ್ಕಂಥಾದ್ದು ೫ ಲಕ್ಷ ೯೪ ಸಾವಿರ ರೂಪಾಯಿ ಖರ್ಚು, ಈಗ ರಾಜಪ್ರಮುಖರಾಜರುಗಳು ಹೋದ ಮೇಲೆ ರಾಜ್ಯಪಾಲರುಗಳನ್ನು ಈ ಬಡದೇಶದಲ್ಲಿ ಏತಕ್ಕಾಗಿ ಇಟ್ಟುಕೊಂಡಿದ್ದಾರೆ ಎನ್ನುವುದನ್ನು ಪ್ರಶ್ನೆ ಮಾಡಬೇಕಾಗಿದೆ. ಅವರನ್ನು ಅದಷ್ಟು ಜಾಗ್ರತೆಯಾಗಿ ಬಡವನ ದೃಷ್ಟಿಯಿಂದ ರಾಜ್ಯಪಾಲರುಗಳನ್ನು ಕಿತ್ತು ಹಾಕಬೇಕು ಎಂದ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದೇರೀತಿಯಲ್ಲಿ ದೇಶದ ಆಡಳಿತವನ್ನು ಬಹಳ ದಕ್ಷತೆಯಿಂದ ನಡೆಸುತ್ತೇವೆ ಅನ್ನತಕ್ಕಂಥ ಈ ಮಂತ್ರಿಮಂಡಲ, ಮಂತ್ರಿಮಂಡಲ ಎಂದರೆ ಸರ್ಕಾರದ ಮಂತ್ರಿಮಂಡಲ. ೨೯ ಜನರಿಂದ ಕೂಡಿದಂಥ ಮಂತ್ರಿಮಂಡಲ, ಈ ಮಂತ್ರಿಮಂಡಲಕ್ಕೆ ಖರ್ಚಾಗತಕ್ಕಂಥಾದ್ದು ವರ್ಷಕ್ಕೆ ೨೯ ಲಕ್ಷ ರೂಪಾಯಿ. ಇದೂ ಕೂಡ ಬಹಳ ದೊಡ್ಡ ಮೊತ್ತ. ಇದನ್ನು ಖರ್ಚು ಮಾಡತಕ್ಕಂಥಾದ್ದು ಯೋಗ್ಯವಲ್ಲ. ಈ ಮಂತ್ರಿಗಳ ಸಂಖ್ಯೆಯನ್ನೂ ಕಡಿಮೆ ಮಾಡಬೇಕು ಎಂದು ಹೇಳುತ್ತೇನೆ. ಸ್ವರಾಜ್ಯ ಬರುವುದಕ್ಕೆ ಮುಂಚಿತವಾಗಿ ಈಗ ಇರತಕ್ಕಂಥ ಅನೇಕ ಮಂತ್ರಿಗಳು ನಮಗೇನಾದರೂ ಸ್ವರಾಜ್ಯ ಸಿಕ್ಕಿದರೆ ನಾವು ೫೦ ರೂಪಾಯಿ ಮೇಲೆ ಸಂಬಳ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾ ಇದ್ದರು ಇದರಲ್ಲಿ ಶ್ರಿಮಾನ್ ಕೌಜಲಗಿಯವರೂ ಇದ್ದಾರೆ. ಅವರನ್ನು ನೋಡಿ ಮಾತನಾಡುತ್ತಿದ್ದೇನೆ. ಈಗಲಾದರೂ ಕೂಡ ಅವರು ಗಮನವನ್ನು ಹಿಂದಕ್ಕೆ ಹರಿಸಿದರೆ ಉತ್ತಮ. ಇದರಿಂದ ಈ ಒಂದು ಬಡರಾಜ್ಯದಲ್ಲಿ ಬಡವ ಕಷ್ಟಪಡಬೇಕು. ಈಗ ಬಡವನ ಒಂದು ಶೋಷಣೆ ಮಾಡತಕ್ಕಂಥ ಕಾಲವಾಗಿದೆ.

ಶ್ರೀ ಎಂ. ನಾಗಪ್ಪ:—ಮಂತ್ರಿಗಳು ಸಂಬಳ ಎಷ್ಟಾದರೂ ತೆಗೆದುಕೊಳ್ಳಲಿ. ಅವರ ಟಿ ಎ. ಮತ್ತು ಹಾಸ್ಪಿಟಲ್ ಖರ್ಚು ಎಷ್ಟು ಅದನ್ನು ಕೇಳಿದರೆ ಗೊತ್ತಾಗುತ್ತದೆ.

3-30 P.M.

ಶ್ರೀ ಸಿ.ಎಂ.ಎಸ್. ಶಾಸ್ತ್ರಿ:—ಹೀಗೆ ಬಡವರನ್ನು ಶೋಷಣೆ ಮಾಡುವುದನ್ನು ತಪ್ಪಿಸಬೇಕು ಎಂದು ಇಲ್ಲಿ ಹೇಳುತ್ತೇನೆ. ನಮ್ಮ ಮಂತ್ರಿಮಂಡಲದಲ್ಲಿರುವ ಮಂತ್ರಿಗಳು ಸುಮಾರು ಮೂರು ವರ್ಷಕ್ಕೆ ೩೧ ಸಾವಿರದವರೆಗೆ ಮೆಡಿಕಲ್ ಚಾರ್ಜುಗಳಾಗಿ ವೆಚ್ಚ ಮಾಡಿದ್ದಾರೆ ಎಂದು ಈಚೆಗೆ ಪತ್ರಿಕೆಗಳಲ್ಲಿ ಓದಿದ್ದೆ. ಇದನ್ನು ಇನ್ನು ಮುಂದಾದರೂ ಕಡಿಮೆ ಮಾಡಬೇಕು. ನೀವು ಚುನಾವಣೆಯಾಗಿ ಇಲ್ಲಿಗೆ ಬರುವಾಗ ಜನತೆಗೆ ಏನು ಭರವಸೆ ಕೊಟ್ಟಿದ್ದೀರೋ ಅದನ್ನುಳಿಸಿಕೊಂಡು ಗೌರವವಾಗಿ ಬಾಳಬೇಕು ಎಂದು ಇಲ್ಲಿಹೇಳಲು ಇಚ್ಛಿಸುತ್ತೇನೆ ಇದೇ ಮಂತ್ರಿಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು. ವಿಜಿಲೆನ್ಸ್ ಕಮಿಷನ್ ಎಂದು ಮಾಡಿ ಯಾರಿಗೆ ಉದ್ಯೋಗಗಳನ್ನು ಒದಗಿಸಿಕೊಡಬೇಕೆಂದು ಮಾಡಿದ್ದೀರಿ ಎಂದು ಇಲ್ಲಿ ನಿಮ್ಮನ್ನು ಪ್ರಶ್ನೆ ಮಾಡುತ್ತೇನೆ. ಲಂಚವನ್ನು ಪೂರ್ಣವಾಗಿ ತೆಗೆದುಹಾಕಬೇಕೆಂದು ಉದ್ದೇಶ ಇರುವುದಾದರೂ ಅದನ್ನು ಪೂರ್ಣವಾಗಿತೆಗೆದು ಹಾಕಲು ಸಾಧ್ಯವಾಗಿಲ್ಲ. ಸುಮ್ಮನೆ ದುಡ್ಡು ಹೊಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಇಂತಹ ವಿಲೆಜಿನ್ಸ್ ಕಮಿಷನ್‌ನ್ನು ನೇಮಕ ಮಾಡಿಕೊಂಡು ನಿಮಗೆ ಬೇಕಾದವರನ್ನು ಇಲ್ಲಿ ನೇಮಿಸಿದರೆ ಇದರಿಂದೇನೂ ಪ್ರಯೋಜನವಾಗುವುದಿಲ್ಲ. ಇಂತಹ ವಿಜಿಲೆನ್ಸ್ ಕಮಿಷನ್ ಯಾರ ಉಪಕಾರಕ್ಕಾಗಿ ಇದೆಯೋ ಗೊತ್ತಿಲ್ಲ. ಇದನ್ನು ತೆಗೆಯಬೇಕು. ಇದರ ಜೊತೆಗೆ ಎಂಪ್ಲಾಯ್‌ಮೆಂಟು ಎಕ್ಸ್‌ಚೇಂಜುಗಳ ಮೂಲಕ ಮೊದಲು ಕೆಲವರನ್ನು ಕೆಲಸಕ್ಕೆ ತೆಗೆದುಕೊಂಡು ಅವರುಗಳು ಮೂರು ನಾಲ್ಕು ವರ್ಷಗಳ ಕಾಲ ಕೆಲಸಮಾಡಿರುತ್ತಾರೆ. ಆದರೆ ಪಿ. ಎಸ್. ಸಿ. ಲಿಸ್ಟ್‌ನಲ್ಲಿರುವವರನ್ನು ತೆಗೆದುಕೊಂಡು ಹಿಂದೆ ಎಂಪ್ಲಾಯಿಮೆಂಟು ಎಕ್ಸ್‌ಚೇಂಜಿನ ಮೂಲಕ ಬಂದವರನ್ನು ಟೆಂಪರರಿಯಾಗಿ ಬಂದರು ಎಂದು ತೆಗೆದುಬಿಟ್ಟರೆ ಅವರಿಗೆ ಕಷ್ಟವಾಗುವುದಿಲ್ಲವೇ? ಮೂರು ನಾಲ್ಕು ವರ್ಷಗಳು ಕೆಲಸ ಮಾಡಿದ ಮೇಲೆ ಅವರನ್ನು ಕೆಲಸದಿಂದ ತೆಗೆದು ಹಾಕಿದರೆ ಅವರು

ಜೀವನ ಮಾಡುವುದಾದರೂ ಹೇಗೆ? ೩-೪ ವರ್ಷಗಳ ಕಾಲ ಸರಕಾರದಲ್ಲಿ ಕೆಲಸ ಮಾಡಿ ಅನಂತರ ಅವರನ್ನು ಕೆಲಸದಿಂದ ತೆಗೆದರೆ ಅವರ ಸರ್ವಿಸ್ಸು ಹೋಗುವುದಿಲ್ಲವೇ? ಅವರುಗಳು ತಮ್ಮ ಸಂಸಾರವನ್ನು ನಡಸಿಕೊಂಡು ಹೋಗುವುದು ಹೇಗೆ? ಇವೊತ್ತಿನ ಪರಿಸ್ಥಿತಿಯಲ್ಲಿ ಲೋಕಲ್ ಕ್ಯಾಂಡಿಡೇಟರುಗಳು ಎಂದು ಇವರನ್ನು ಕೆಲಸದಿಂದ ತೆಗೆದರೆ ಇವರ ಹೆಂಡತಿ ಮಕ್ಕಳು ಬೀದಿ ಪಾಲಾಗುವುದಿಲ್ಲವೇ? ಇದನ್ನು ಸಹಾನುಭೂತಿಯಿಂದ ಸರಕಾರ ವಿಚಾರ ಮಾಡಬೇಕು. ಇದಕ್ಕಾಗಿ ಹೊಸದಾಗಿ ಕೆಲಸಕ್ಕೆ ತೆಗೆದು ಕೊಳ್ಳುವುದನು ನಿಲ್ಲಿಸಿ ಮೊದಲು ಲೋಕಲ್ ಕ್ಯಾಂಡಿಡೇಟರುಗಳಾಗಿದ್ದ ಯಾರನ್ನು ಕೆಲಸದಿಂದ ತೆಗೆದರೋ ಅವರನ್ನೇ ಮುಂದುವರಿಸಬೇಕು ಇದನ್ನು ಸರಕಾರ ಮಾನವೀಯತೆ ದೃಷ್ಟಿಯಿಂದ ನೋಡಬೇಕೆಂದು ಇಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಡಿವಿಜನಲ್ ಕಮಿಷನರುಗಳು ಎಂದು ಏಕೆ ಈ ಹುದ್ದೆಗಳಿರಬೇಕು? ಇದೇ ರೀತಿ ಸಬ್ ಡಿವಿಜನ್ ಆಫೀಸರು ಹಾಗೂ ಬಿ.ಡಿ.ಓ. ಗಳು ಎಂದೇಕೆ ಇರಬೇಕು? ಈ ಆಫೀಸರುಗಳನ್ನು ತೆಗೆದರೆ ಸರಕಾರಕ್ಕೆ ಲಕ್ಷಾಂತರ ರೂಪಾಯಿಗಳು ಖರ್ಚಾಗುವುದನ್ನು ಉಳಿಸಿಯಾ ಮಾಡಬಹುದು ಸುಮ್ಮನೆ ಅಧಿಕಾರಿಗಳನ್ನು ಜಾಸ್ತಿ ಮಾಡಿಕೊಂಡು ಹೋದರೆ ಸರಕಾರಕ್ಕೆ ಅದರಿಂದೇನು ಪ್ರಯೋಜನವಾಗುತ್ತದೆ ಎಂದು ಇಲ್ಲಿ ನಾನು ಕೇಳಬೇಕಾಗಿದೆ. ಇನ್ನು ನಮ್ಮ ರೈತರು ಸರಕಾರಕ್ಕೆ ಒಂದು ಅರ್ಜಿ ಬರೆದರೆ ಅವರಿಗೆ ಎರಡು ಮೂರು ವರ್ಷವಾದರೂ ಉತ್ತರವೇ ಬರುವುದಿಲ್ಲ. ಇದಕ್ಕಾಗಿ ಇಲಾಖೆಗಳನ್ನು ಕಡಿಮೆ ಮಾಡಬೇಕು. ಸುಮ್ಮನೆ ಎಲ್ಲ ಕಡೆಗಳಲ್ಲೂ ಹೆಚ್ಚು ಇಲಾಖೆಗಳು ಇರಬೇಕು ಎಂದು ಸರಕಾರ ಮಾಡುತ್ತಾ ಹೋದರೆ ಅದರಿಂದ ಜನಸಾಮಾನ್ಯರಿಗೇನೂ ಅನುಕೂಲವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಪೋಲೀಸು ಇಲಾಖೆಯ ಬಗ್ಗೆ ಹೇಳಬೇಕಾದರೆ ನಮ್ಮ ಈ ಬಡ್ಜೆಟ್ಟಿನಲ್ಲಿ ಪೋಲೀಸು ಬಾಬಿಗಾಗಿ ಸುಮಾರು ೯.೫೨ ಲಕ್ಷದಷ್ಟು ಖರ್ಚು ಮಾಡಬೇಕೆಂದು ಹಣ ಒದಗಿಸಿದ್ದೀರಿ. ಇದನು ನಾನು ವಿರೋಧ ಮಾಡುತ್ತೇನೆ. ಪೋಲೀಸು ಇಲಾಖೆಗಾಗಿ ಸುಮಾರು ಒಂಬತ್ತು ಕೋಟಿಯಷ್ಟು ಹಣ ಕೊಟ್ಟರೂ ಒಂಬತ್ತು ಪೈಸಾದಷ್ಟು ಒಳ್ಳೆಯ ಕೆಲಸವನ್ನು ಜನರಿಗಾಗಿ ಈ ಇಲಾಖೆ ಮಾಡುತ್ತಿಲ್ಲ. ಸಂಬಳವಿಲ್ಲದೆ ಬೇಕಾದರೂ ಇದು ಕೆಲಸ ಮಾಡತಕ್ಕ ಇಲಾಖೆಯಾಗಿದೆ. ಪೋಲೀಸು ಇಲಾಖೆಯಲ್ಲಿ ಒಬ್ಬರನ್ನು ಇನ್ಸ್‌ಪೆಕ್ಟರಾಗಿ ನೇಮಕ ಮಾಡಲು ಅವಕಾಶ ಕೊಟ್ಟರೆ ಅವರು ಸಂಬಳವಿಲ್ಲದೆ ಬೇಕಾದರೂ ಕೆಲಸ ಮಾಡುತ್ತೇವೆ ಎಂದು ಹೇಳುವ ಅಧಿಕಾರಿಗಳು ಇಂದೂ ಇದ್ದಾರೆ. ಇಂತಹ ಮಾತನ್ನು ಅಲ್ಲಲ್ಲಿ ನಾವು ಕೇಳುತ್ತಿದ್ದೇವೆ. ಪೋಲೀಸು ಇಲಾಖೆಯಲ್ಲಿ ಡಿಸ್ಟ್ರಿಕ್ಟ್ ಎಕ್ಸ್‌ಕ್ಯೂಟೀವ್ ಪೋರ್ಸ್‌ಗಾಗಿ ಸುಮಾರು ೭.೬೧ ಲಕ್ಷ ಕೊಟ್ಟು ಈ ವಿಭಾಗದಲ್ಲಿರುವ ಪೋಲೀಸಿನವರು ದಕ್ಷತೆಯಿಂದ ಕೆಲಸ ಮಾಡಬೇಕೆಂದು ಇಟ್ಟಿದ್ದಾರೆ: ದಕ್ಷತೆ ಎನ್ನುವುದು ಎಲ್ಲಿದೆ? ನಮ್ಮ ಜಿಲ್ಲೆಯ ಉದಾಹರಣೆಯನ್ನೇ ಇಲ್ಲಿ ಹೇಳುವುದಾದರೆ, ಸುಮಾರು ಎರಡು ವರ್ಷಗಳ ಹಿಂದೆ ನಮ್ಮ ಜಿಲ್ಲೆಯಲ್ಲಿ ಒಂದು ಗಲಾಟೆಯಾಯಿತು, ಇದು ಸುಮಾರು ೧೯೬೮ರಲ್ಲಿ ಆಯಿತು ಆ ನಂತರ ೬೯-೭೦ರಲ್ಲೂ ಆಯಿತು ಮತ್ತು ೧೯೭೧ರಲ್ಲಿನಮ್ಮ ಚಿಕ್ಕಮಂಗಳೂರು ಜಿಲ್ಲೆಯ ಒಂದು ಗಲಾಟೆ ಬಗ್ಗೆ ವಿಚಾರಣೆ ಮಾಡಿದೆ ಇರುವ ಬಗ್ಗೆ ಸಭೆಯ ಗಮನಕ್ಕೆ ತರಬೇಕು ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಹೋಟೇಲುಗಳಲ್ಲಿ ತಿಂಡಿ ದರಗಳನ್ನು ಇಳಿಸಬೇಕು ಎಂದು ಇಲ್ಲಿ ಜನರು ಬಹಳ ದೊಡ್ಡ ಚಳುವಳಿ ಮಾಡಿದರು. ಇದು ಸುಮಾರು ೧೦-೧೫ ದಿನಗಳು ನಡೆಯಿತು. ಇದನ್ನು ನಾವು ಪೋಲೀಸು ಇಲಾಖೆಯವರಿಗೆ ತಿಳಿಸಿ ಇದರ ಬಗ್ಗೆ ಮುಂಜಾಗರೂಕತೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೂ ಅವರು ತೆಗೆದುಕೊಳ್ಳಲಿಲ್ಲ. ಇದರ ಪರಿಣಾಮವಾಗಿ ೧೯೭೯ನೇ ಇಸವಿಯ ಡಿಸೆಂಬರ್ ೧೭-೧೮ನೇ ತಾರೀಖುಗಳಲ್ಲಿ ಚಿಕ್ಕಮಗಳೂರಿನಲ್ಲಿ ಸುಮಾರು ಏಳೆಂಟು ಹೋಟೆಲುಗಳು ಭಸ್ಮವಾದವು ಇದಕ್ಕಾಗಿ ಪೋಲೀಸರ ಅಧ್ಯಕ್ಷತೆ ಕಾರಣದಿಂದ ಇದು ನಡೆಯಿತೆಂದು. ಪೋಲೀಸರ ಮೇಲೆ ಇಲ್ಲಿ ಚಾರ್ಜು ಮಾಡುತ್ತೇನೆ. ಪೋಲೀಸಿನಲ್ಲಿ ಅಧ್ಯಕ್ಷತೆ ಹೆಚ್ಚಾಗಿದೆ ಎಂದು ಈ ಸಂದರ್ಭ ಸಷ್ಟಪಡಿಸುತ್ತೇದೆಂದು ಹೇಳಲು ಇಷ್ಟಪಡುತ್ತೇನೆ. ದೂರುಗಳನ್ನು ಕೊಟ್ಟು ಇಲ್ಲಿ ಈ ರೀತಿ ಅಸ್ತಿಪಾಸ್ತಿಗಳು ಹಾಳಾಗಿವೆ ಇದನ್ನು ಸರಿಯಾದ ರೀತಿಯಲ್ಲಿ ಪತ್ತೆ ಹಚ್ಚಬೇಕೆಂದು ಹೇಳಿದರೂ ಇದನ್ನು ಪತ್ತೆಹಚ್ಚಲು ಪೋಲೀಸಿನವರು ಅಸಹಾಯಕರಾಗಿದ್ದಾರೆ; ಅನೇಕರು ವಿದ್ಯಾರ್ಥಿಗಳೇ ಚಳುವಳಿಯಲ್ಲಿ ಹೆಚ್ಚಾಗಿದ್ದರು ಇಂತಹ ವಿದ್ಯಾರ್ಥಿಗಳನ್ನು ಲಾಠಿಗಳಿಂದ ಹೊಡೆದು ಪೋಲೀಸು ಸ್ಟೇಷನ್ನಿಗೆ ಎಳೆದು ಕೊಂಡು ಹೋಗಿ ಅವರ ಮೇಲೆ ಆಮಾನುಷಕೃತ್ಯವನ್ನು ಎಸಗಿದ್ದಾರೆ ಮತ್ತು ಕೆಲವು ಪೋಲೀಸರು ಇವರನ್ನು ಬೂಡ್ಸುಗಳಲ್ಲಿ ಹೊಡೆದಿದ್ದಾರೆ ಮತ್ತು ಇವರ ಮೇಲೆ ಬಹಳ ಹೇಯವಾದ ಕೆಲಸಗಳನ್ನು ಮಾಡಿದ್ದಾರೆ ಎಂದು ಹೇಳಲು ತುಂಬಾ ವಿಷಾದವಾಗುತ್ತದೆ. ಇದರಲ್ಲಿ ಎಂ. ಎಸ್. ಆರ್. ಟಿ. ಸಿ. ಮತ್ತು ಸರ್ಕಾರಿ ನೌಕರರು, ಅನೇಕ ಪತ್ರಿಕಾ ಕರ್ತರು ಹಾಗೂ ನಿರಪರಾಧಿ ಸಾರ್ವಜನಿಕರು ಇವರನ್ನೆಲ್ಲಾ ಪೋಲೀಸಿನವರು ಸಿಕ್ಕಾಪಟ್ಟೆ ಹೊಡೆದು ಅವಮಾನ ಮಾಡಿದ್ದಾರೆ. ಇದರ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಇಲ್ಲಿನ ಅಧಿಕಾರಿಗಳಿಗೆ ತಿಳಿಸಿದರೂ ಯಾರ ಮೇಲೂ ಇಲ್ಲಿನ ಅಧಿಕಾರಿಗಳು ತಕ್ಕ ಕ್ರಮ ತೆಗೆದುಕೊಳ್ಳಲೇ ಇಲ್ಲ ಹೀಗಾದರೆ ಈ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುತ್ತಾ ಇದೆಯೇ? ಮತ್ತು ಜನಸಾಮಾನ್ಯರಿಗೆ ಪ್ರೊಟೆಕ್ಷನ್ ಇದೆಯೇ ಎಂದು ಸರಕಾರವನ್ನು ಇಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಸಾರ್ವಜನಿಕರು ಪೋಲೀಸರ ಕ್ಷೇಮವನ್ನು ಯಾವ ರೀತಿ ನೋಡಿಕೊಳ್ಳುತ್ತಾರೆ ಎಂಬ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಪೋಲೀಸ್‌ನವರು ಒಂದು ಕ್ಷೇಮನಿಧಿಯನ್ನು ಕೂಡಿಸ ಬೇಕೆಂದು ಯೋಚನೆ ಇಟ್ಟುಕೊಂಡಾಗ ಸಾರ್ವಜನಿಕರೆಲ್ಲಾ ಸೇರಿ ಲಕ್ಷಾಂತರ ರೂಪಾಯಿಗಳನ್ನು ಕೂಡಿಸಿ ಕೊಟ್ಟಿದ್ದಾರೆ. ಕ್ಷೇಮನಿಧಿಗೆ ಹಣ ಕೊಟ್ಟವರನ್ನೇ ಲಾಕಪ್ಪಿನಲ್ಲಿ ಹಾಕಿ ಕಿರುಕುಳ ಕೊಟ್ಟಿದ್ದಾರೆ ಇದು ಮನುಷ್ಯತ್ವವೇ ಎಂದು ಕೇಳುತ್ತೇನೆ. ಇತ್ತೀಚೆಗೆ ಮೂಡಿಗೆರೆ ಹತ್ತಿರ ಇರುವ ಕಿರುಗುಂಡ ಎಂಬ ಹಳ್ಳಿಗೆ ಎಕ್ಸೈಜ್ ಇಲಾಖೆಯವರು ಪೋಲೀಸರನ್ನು ಕರೆದುಕೊಂಡು ಅಪ್ಪಿದ ಹರಿಜನರ ಕಾಲೋನಿಗೆ ಮಧ್ಯರಾತ್ರಿ ಯಲ್ಲಿ ಹೋಗಿ ಮನೆಯಲ್ಲಿದ್ದ ಹರಿಜನರನ್ನು ಮನಸೋ ಇಚ್ಛೆಯಾಗಿ ಹೊಡೆದಿದ್ದಾರೆ. ಚಿಕ್ಕಮಗಳೂರಿ ನಲ್ಲಿ ೬ನೇ ತಾರೀಖು ಒಂದು ಬಹಿರಂಗ ಸಭೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಆ ದಿನ ಪೋಲೀಸರ ಅವಶ್ಯಕತೆ ಇಲ್ಲದಿದ್ದರೂ ಕೂಡ ಅಲ್ಲಿನ ಪೋಲೀಸ್ ಅಧಿಕಾರಿಯವರು ಸಹಸ್ರಾರು ರೂಪಾಯಿಗಳನ್ನು ಖರ್ಚು ಮಾಡಿ ಹೊರಗಡೆಯಿಂದ ನೂರಾರು ಪೋಲೀಸರನ್ನು ಕರೆಸಿದ್ದರು. ಚಿಕ್ಕಮಗಳೂರಿನಲ್ಲಿ ಒಂದು ಜೀಪ್ ಆಕ್ಸಿಡೆಂಟ್ ಆದಾಗ ಒಬ್ಬ ಬಾಲಕ ಸತ್ತು ಹೋದ. ಇನ್ನೊಬ್ಬನಿಗೆ ಕಾಲು ಮುರಿಯಿತು. ರಾಜು ಎಂಬ ಸತ್ತ ಹುಡುಗನ ಫೋಟೋವನ್ನು ಮತ್ತು ಆತನ ತಂದೆಯ ಅರ್ಜಿಯನ್ನು ತಮಗೆ ಕಳಿಸಿಕೊಡುತ್ತೇನೆ ಅದನ್ನು ದಯವಿಟ್ಟು ತಾವು ಮುಖ್ಯಮಂತ್ರಿಗಳಿಗೆ ಕಳಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸತ್ತ ಯುವಕನ ಶವವನ್ನು ಪೋಲೀಸರು ಆತನ ತಂದೆಗೆ ಕೊಡಲಿಲ್ಲ. ಯಾರು ಜೀಪನ್ನು ಬಿಟ್ಟರೋ ಆತನಿಂದ ಪೋಲೀಸಿನವರು ಲಂಚ ಪಡೆದುಕೊಂಡು ಶವವನ್ನು ಹೂಳು ಹಾಕಿದರು. ಇದು ಪೋಲೀಸಿನವರು ಮಾಡುತ್ತಿರುವ ದೌರ್ಜನ್ಯ ಇತ್ತೀಚೆಗೆ ಮೈಸೂರು ರಾಜ್ಯದಲ್ಲಿ ಮಕ್ಕಳ ಕಳ್ಳತನ ನಡೆಯುತ್ತಿದೆ. ಮಕ್ಕಳನ್ನು ಕಳ್ಳತನದಿಂದ ತೆಗೆದುಕೊಂಡು ಹೋಗಿ ಸಾಕುತ್ತಾರೆ. ಮುಂದೆ ಹೆಣ್ಣುಮಕ್ಕಳಾದರೆ ವ್ಯಭಿಚಾರಕ್ಕೆ ತೊಡಗಿಸುತ್ತಾರೆ, ಗಂಡುಮಕ್ಕಳಾದರೆ ಕೈಕಾಲು ಕತ್ತರಿಸಿ ಭಿಕ್ಷುಕ ವೃತ್ತಿಗೆ ತೊಡಗಿಸುತ್ತಾರೆ. ಅಲ್ಲದೆ ಅವರನ್ನು ಕಳ್ಳತನ ವೃತ್ತಿಗೆ ಸೇರಿಸಿಕೊಳ್ಳುತ್ತಾರೆ. ಈ ಕಾರಣದಿಂದ ಮಕ್ಕಳ ಕಳ್ಳತನವಾಗುವುದನ್ನು ಪೋಲೀಸಿನವರು ತಡೆಗಟ್ಟಬೇಕು ಮತ್ತು ಆ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂದು ಹೇಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸೋಲೂರು ಸಿದ್ದಪ್ಪ (ಕುದೂರು):—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಮಂಡಿಸಿರತಕ್ಕಂಥ ಮೂರು ಡಿಮ್ಯಾಂಡ್‌ಗಳನ್ನು ಸಮರ್ಥನೆ ಮಾಡುತ್ತಾ ಕೆಲವು ವಿಚಾರಗಳನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಪೋಲೀಸ್ ಇಲಾಖೆಯ ವಿಚಾರದಲ್ಲಿ ಈಗಾಗಲೇ ಅನೇಕ ಮಾನ್ಯ ಸ್ನೇಹಿತರು ಮಾತನಾಡಿ ಅನೇಕ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಪೋಲೀಸ್ ಇಲಾಖೆಗೆ ನಾವು ಕೊಡುತ್ತಿರುವ ಉತ್ತೇಜನದಿಂದ ಒಳ್ಳೆಯ ಫಲ ಸಿಕ್ಕಿದೆ, ಮತ್ತು ಒಳ್ಳೆಯ ಕೆಲಸಗಳು ಆಗುತ್ತಿವೆ. ನಮ್ಮ ರಾಜ್ಯದಲ್ಲಿ ಸಾಧ್ಯವಾದ ಮಟ್ಟಿಗೂ ಪೋಲೀಸ್ ಇಲಾಖೆ ಉತ್ತಮ ಸ್ಥಿತಿಗೆ ಬಂದಿದೆ. ಶಾಸಕರಾದ ನಾವು ಆಗಾಗ್ಗೆ ಅಲ್ಲಿ ನಡೆಯುತ್ತಿರುವ ಕೆಲಸಗಳ ಬಗ್ಗೆ ಸರ್ಕಾರದ ಗಮನಕ್ಕೆ ತರುವುದು ಒಳ್ಳೆಯದು. ಪೋಲೀಸ್ ಇಲಾಖೆ ಗ್ರಾಮಾಂತರ ಪ್ರದೇಶಗಳಲ್ಲಿ ಚೆನ್ನಾಗಿ ಕೆಲಸ ಮಾಡುವಂತೆ ಸಂಬಂಧಪಟ್ಟ ಮಂತ್ರಿಗಳು ತಕ್ಕ ವ್ಯವಸ್ಥೆ ಮಾಡಬೇಕು. ಅಲ್ಲಿ ವಾಸ ಮಾಡತಕ್ಕಂಥ ಜನರ ರಕ್ಷಣೆ ಮಾಡುವುದು ಪೋಲೀಸರ ಕರ್ತವ್ಯ. ಆದರಂತೆ ಪೋಲೀಸಿನವರಿಗೂ ಕೂಡ ವಾಸ ಮಾಡುವುದಕ್ಕೆ ವಸತಿ ಸೌಕರ್ಯವನ್ನು ಒದಗಿಸಬೇಕು. ಕುಡಿಯುವ ನೀರಿನ ಸೌಕರ್ಯ ಒದಗಿಸಬೇಕು. ಅನೇಕ ಕಡೆಗಳಲ್ಲಿ ಪೋಲೀಸ್ ಸ್ಟೇಷನ್‌ಗಳಿಗೆ ಭದ್ರತೆ ಇರುವುದಿಲ್ಲ. ಆ ಬಗ್ಗೆ ಸರ್ಕಾರದವರು ತಕ್ಕ ವ್ಯವಸ್ಥೆ ಮಾಡಬೇಕು.

ವಿದ್ಯಾ ಇಲಾಖೆಯಲ್ಲಿ ಉಪಾಧ್ಯಾಯರ ವರ್ಗದ ವಿಚಾರದಲ್ಲಿ ಸರ್ಕಾರಕ್ಕೆ ನನ್ನ ಕೆಲವು ಸ್ನೇಹಿತರು ಹಿತೋಕ್ತಿಗಳನ್ನು ಹೇಳಿದ್ದಾರೆ. ಮಾನ್ಯ ವೆಂಕಟಪ್ಪನವರು ವಿದ್ಯಾ ಮಂತ್ರಿಗಳಾಗಿದ್ದಾಗ ಉಪಾಧ್ಯಾಯರು ಗಳನ್ನು ಅವರು ಹುಟ್ಟಿದ ತಾಲ್ಲೂಕ್‌ನಲ್ಲಿಯೇ ಇಡದೆ ಬೇರೆ ತಾಲ್ಲೂಕ್‌ಗಳಿಗೆ ವರ್ಗ ಮಾಡಬೇಕೆಂದು ಒಂದು ಆರ್ಡರ್ ಹೊರಡಿಸಿದ್ದರು. ಅದನ್ನು ಇನ್ನೂ ಜಾರಿಗೆ ಕೊಡದಿರುವುದರಿಂದ ಬಹಳ ತೊಂದರೆಯಾಗುತ್ತಿದೆ. ಇನ್ನು ಮುಂದೆ ಉಪಾಧ್ಯಾಯರುಗಳನ್ನು ಅವರ ತಾಲ್ಲೂಕ್‌ನಲ್ಲಿಯೇ ಇಡದೆ ಬೇರೆ ತಾಲ್ಲೂಕ್‌ಗಳಿಗೆ ವರ್ಗ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಹುಚ್ಚಮಾಸ್ತಿಗೌಡರು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುತ್ತಾ ಬಹಳ ಕಠಿನ ಶಬ್ದಗಳನ್ನು ಉಪಯೋಗಿಸಿದರು, ಜಾತಿಯ ವಿಚಾರದಲ್ಲಿ ಮಾತನಾಡಿದರು. ನನ್ನ ಜೊತೆಯಲ್ಲಿ ಅವರು ೨೨ ವರ್ಷದಿಂದ ಇದ್ದವರು. ಅವರು ಈ ಸಭೆಯ ಮೂಲಕ ಅವಹೇಳನ ಮಾಡುವ ಭರ್ಜರಿಯಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವರು ಒಳ್ಳೆಯ ಅನುಭವಿಗಳು, ವ್ಯವಹಾರ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅವರು ಸರ್ಕಾರದ ನ್ಯೂನ್ಯತೆಗಳನ್ನು ಹೇಳಬೇಕೇ ಹೊರತು, ಸರ್ಕಾರದವರು ತನ್ನ ಅಧಿಕಾರಿಗಳನ್ನು ತಮ್ಮ ಸ್ವಂತ ಕೆಲಸಗಳಿಗೆ ಉಪಯೋಗಿಸಿ ಕೊಳ್ಳುತ್ತಿದ್ದಾರೆ ಎಂದು ಹೇಳಿದ್ದು ಸರಿಯಲ್ಲ. ಅದನ್ನು ನಾನು ಒಪ್ಪುವುದಿಲ್ಲ. ಅಧಿಕಾರಿಗಳ ಭದ್ರತೆಗೆ

(ಶ್ರೀ ಸೋಲೂರು ಸಿದ್ದಪ್ಪ)

ಸರ್ಕಾರದವರು ತಕ್ಕ ವ್ಯವಸ್ಥೆ ಮಾಡಿರುವುದರಿಂದ ಇವತ್ತು ಅವರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ ಮತ್ತು ಕೋಟ್ಯಾಂತರ ರೂಪಾಯಿಗಳ ಕೆಲಸಗಳು ಬಹಳ ಚೆನ್ನಾಗಿ ನಡೆಯುತ್ತಿವೆ ಈ ರೀತಿ ಕೆಲಸಗಳು ಆಗುತ್ತಿರುವುದು ಶ್ರೀಮಾನ್ ಹುಚ್ಚಮಾಸ್ತಿಗೌಡರಿಗೂ ಗೊತ್ತಿದ್ದರೂ ಕೂಡ ಅವರು ಈ ಸಭೆಯಲ್ಲಿ ಅಧಿಕಾರಿಗಳ ಬಗೆ ಮತ್ತು ಜಾತಿಯ ಬಗ್ಗೆ ಮಾತನಾಡುವುದು ಸರಿಯಲ್ಲ. ಅವರು ಅನುಭವಿಗಳು ಮತ್ತು ತಿಳಿದವರಾಗಿದ್ದಾರೆ.

ಇನ್ನು ಬೆಂಗಳೂರಿನಲ್ಲಿರುವ ಸೆಂಟ್ರಲ್ ಜೈಲ್ ಪಟ್ಟಣದ ಮಧ್ಯೆ ಇದೆ. ಅದನ್ನು ಬೇರೆ ಸ್ಥಳಕ್ಕೆ ಸಾಗಿಸಬೇಕು ಎಂದು ಅನೇಕ ಸಲ ಹೇಳಿದ್ದೇನೆ, ಮತ್ತು ಸಂಬಂಧಪಟ್ಟ ಇಲಾಖೆಗೆ ಪತ್ರಗಳನ್ನು ಸಹ ಬರೆದಿದ್ದೇನೆ. ಈ ಸಭೆಯಲ್ಲಿ ಕೂಡ ಪ್ರಸ್ತಾಪ ಮಾಡಿದ್ದೇನೆ ಪಟ್ಟಣದ ಮಧ್ಯೆ ಇರುವುದರಿಂದ ಜನರಿಗೆ ತೊಂದರೆಯಾಗುತ್ತಿದೆ. ಪಟ್ಟಣದ ಹೊರಗಡೆಗೆ ಸ್ಥಳಾಂತರಿಸಬೇಕು ಎಂದು ಸರ್ಕಾರದವರನ್ನು ಕೇಳಿಕೊಂಡರೂ ಕೂಡ ಅದು ಕಾರ್ಯರೂಪಕ್ಕೆ ಬಂದಿಲ್ಲ. ಜೈಲು ಖೈದಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅವರು ಕ್ಷೇಮದಿಂದ ಇರುವಂತೆ ನೋಡಿಕೊಳ್ಳಬೇಕು. ಮೈಸೂರು ಸಂಸ್ಥಾನದಲ್ಲಿ ಜೈಲುಗಳ ಭದ್ರತೆ ಇನ್ನೂ ಉತ್ತಮ ಮಟ್ಟಕ್ಕೆ ಬಂದಿಲ್ಲ. ಆ ಬಗ್ಗೆ ಸರ್ಕಾರದವರು ಗಮನ ಕೊಡಬೇಕು. ಮಾನ್ಯ ಚಿನ್ನಬಸಪ್ಪನವರು, ಮಾನ್ಯ ಸಿದ್ದವೀರಪ್ಪನವರು ಮತ್ತು ಇನ್ನಿತರ ಸ್ನೇಹಿತರು ಈ ಸಭೆಯಲ್ಲಿ ಮಾತನಾಡುವಾಗ ಸಭೆಯ ಘನತೆ ಮತ್ತು ಗೌರವಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮಾತನಾಡಬೇಕೆಂದು ಈ ಸಭೆಯ ಮೂಲಕ ಅವರನ್ನು ಪ್ರಾರ್ಥಿಸುತ್ತೇನೆ. ಅವರು ತಿಳಿದಂಥವರು, ಮಂತ್ರಿಗಳಾಗಿ ಒಳ್ಳೆಯ ಕೀರ್ತಿಯನ್ನು ಪಡೆದವರು ಆದರೆ ಇವತ್ತು ಅಧಿಕಾರಸಾ ನ ಸಿಗಲಿಲ್ಲ ಎಂಬ ಭಾವನೆ ಇಟ್ಟುಕೊಂಡು ಆ ರೀತಿ ಮಾತನಾಡುವುದು ಸರಿಯಲ್ಲ, ದೇಶ ಸುಭಿಕ್ಷವಾಗಿ ಮತ್ತು ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಮಾಡಲು ಅವರು ಒಳ್ಳೆಯ ಸಲಹೆಗಳನ್ನು ಈ ಸಭೆಯಲ್ಲಿ ಕೊಡಬೇಕೆಂದು ಪುನಃ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪೋಲೀಸ್ ಇಲಾಖೆಯ ವಿಚಾರದಲ್ಲಿ ಮತ್ತು ವಿಜಿಲೆನ್ಸ್ ಕಮಿಷನ್ ಇಲಾಖೆಯ ವಿಚಾರದಲ್ಲಿ ನಮ್ಮ ಸ್ನೇಹಿತರು ಕೆಲವರು ವಿರೋಧ ಮಾಡಿದ್ದಾರೆ. ಈ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಸರ್ಕಾರದವರು ಒದಗಿಸಿರತಕ್ಕ ಅಂಕಿ ಅಂಶಗಳನ್ನು ನೋಡುವುದಾದರೆ ಅದರಲ್ಲಿ ಅನೇಕ ಉಪಯುಕ್ತವಾದ ಅಂಶಗಳು ಮತ್ತು ಅನುಕೂಲತೆಗಳು ಆಗಿರುವುದು ಅದರಲ್ಲಿ ಇವೆ. ಈ ಇಲಾಖೆಯಲ್ಲಿ ಅನೇಕ ಉಪಯುಕ್ತವಾದ ಕೆಲಸಕಾರ್ಯಗಳು ಆಗಿವೆ. ನಾವು ಸುಮ್ಮನೆ ಈ ಸಭೆಯ ಮೂಲಕ ಯಾವುದನ್ನೇ ಆಗಲಿ, ಯಾರನ್ನೇ ಆಗಲಿ, ಅವಹೇಳನ ಮಾಡತಕ್ಕದ್ದು, ಟೀಕೆ ಮಾಡತಕ್ಕದ್ದು ಅಷ್ಟು ಸರಿಯಲ್ಲ. ಯಾವ ಯಾವ ಇಲಾಖೆಯಲ್ಲಿ ಏನೇನು ಕೆಲಸಕಾರ್ಯಗಳು ಆಗಿವೆ, ಎನ್ನತಕ್ಕೆ ಅಂಕಿ ಅಂಶಗಳನ್ನು, ಮತ್ತು ಏನೇನು ಅನುಕೂಲತೆಗಳು ಆಗಿವೆ ಎನ್ನತಕ್ಕದ್ದನ್ನೂ ಈ ಸಭೆಯ ಮುಂದೆ, ನಮ್ಮ ಮುಂದೆ ಸರ್ಕಾರದವರು ಇಟ್ಟಿದ್ದಾರೆ. ಮತ್ತು ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಹಾಗೆ ದೇಶದಲ್ಲಿ ಏನೇನು ಘಟನೆಗಳು ನಡದಿವೆ, ಎಷ್ಟೆಷ್ಟು ಕೇಸುಗಳು ಆಗಿವೆ, ಇವುಗಳ ಬಗ್ಗೆ ಪೋಲೀಸಿನವರು ಎಷ್ಟರಮಟ್ಟಿಗೆ ಕಾರ್ಯಾಚರಣೆಯನ್ನು ನಡೆಸಿದ್ದಾರೆ ಎನ್ನುವುದನ್ನು ನಾವು ಗಮನಿಸಬೇಕಾದುದ್ದು ನ್ಯಾಯ. ಆದರೆ ಸುಮ್ಮನೆ ಈ ಸಭೆಯ ಮೂಲಕ ಇಲಾಖೆಗಳನ್ನೂ, ಈ ಇಲಾಖೆಯ ಅಧಿಕಾರಿಗಳನ್ನೂ ಟೀಕೆ ಮಾಡುವುದರಿಂದ ನಮ್ಮದೇಶಕ್ಕೆ ಲಾಭವಾಗುವುದಿಲ್ಲ. ಅಧಿಕಾರಿಗಳು ಸಾಧ್ಯವಾದ ಮಟ್ಟಿಗೆ ಸರಿಯಾದ ರೀತಿಯಲ್ಲಿ ಎಲ್ಲಾ ಇಲಾಖೆಗಳಲ್ಲೂ ಕೆಲಸ ಮಾಡುತ್ತಿದ್ದಾರೆ. ನಾವು ಲೆಜಿಸ್ಲೇಟರ್ಸ್ ಆಗಿರುವವರು ತಾಲ್ಲೂಕುಗಳಲ್ಲಿ ಸಂಚಾರ ಮಾಡಿ ಆಫೀಸುಗಳಲ್ಲಿ ಕೆಲಸ ಕಾರ್ಯಗಳು ಯಾವ ರೀತಿ ನಡೆಯಬೇಕು. ದೇಶದ ಅಭಿವೃದ್ಧಿಕಾರ್ಯಗಳು ಯಾವರೀತಿ ನಡೆಯಬೇಕು, ಮತ್ತು ದೇಶದಆಡಳಿತಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳು ಯಾವರೀತಿ ನಡೆಯಬೇಕು ಎಂಬ ಬಗ್ಗೆ ಇಲಾಖೆಯವರಮೂಲಕ ನೇರವಾಗಿ ತಿಳಿಸುವುದಕ್ಕೆ ಅವಕಾಶ ಇದೆ. ಒಂದು ಕ್ಷೇತ್ರದ ಲಕ್ಷಾಂತರ ಜನಗಳು ನಮಗೆ ವೋಟು ಕೊಟ್ಟು ನಮ್ಮನ್ನು ಈ ಸಭೆಗೆ ಕಳುಹಿಸಿದ್ದಾರೆ. ನಾವು ನಮ್ಮ ಕರ್ತವ್ಯವನ್ನು ಮಾಡಬೇಕು. ಅನೇಕಸಾರಿ ಈ ಸಭೆಯ ಮೂಲಕ ನೌಕರರನ್ನು ಸಂಸ್ಥೆಯ ಕೆಲಸಕಾರ್ಯಗಳನ್ನು ವಿರೋಧಿಸಿ ಮಾತನಾಡತಕ್ಕದ್ದು ಸರಿಯಲ್ಲ. ಸರ್ಕಾರವನ್ನು ಕೆತ್ತು ಒಗೆಯುತ್ತೇವೆ ಎಂದು ಪ್ರತಿಜ್ಞೆ ಮಾಡತಕ್ಕದ್ದು ಸರಿಯಲ್ಲ. ಸರ್ಕಾರವನ್ನು ಕೆತ್ತು ಒಗೆಯತಕ್ಕದ್ದು ಅಷ್ಟೊಂದು ಸುಲಭವಲ್ಲ ಇಂಥಾ ಮಾತುಗಳನ್ನು ಹೇಳುವುದಕ್ಕೆ ಬದಲಾಗಿ ಬೇರೆ ಮಾರ್ಗಗಳಲ್ಲಿ ಸರ್ಕಾರಕ್ಕೆ ಅವರು ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದು ದೇಶದ ಜನತೆಯಿಂದ ಚುನಾಯಿತರಾಗಿರತಕ್ಕ ಪ್ರತಿನಿಧಿಗಳು ದೇಶದ ಏಳಿಗೆಗಾಗಿ ಕೆಲಸ ಮಾಡಬೇಕು. ಏನಾದರೂ ತಪ್ಪುಗಳು ಇದ್ದರೆ ಅದನ್ನು ಸಂಬಂಧಪಟ್ಟವರಿಗೆ ತಿಳಿಸುವುದಕ್ಕೆ, ದೇಶಕ್ಕೆ ಪ್ರಯೋಜನವಾಗುವ ರೀತಿಯಲ್ಲಿ ಮಾರ್ಗಗಳನ್ನು ಕಲ್ಪಿಸುವುದಕ್ಕೆ ನಮ್ಮ ಸ್ನೇಹಿತರಿಗೆ ಬೇರೆ ಅವಕಾಶ ಇದೆ.

ಶ್ರೀಮಾನ್ ಹುಚ್ಚಮಾಸ್ತಿಗೌಡರು ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಹಾಗೆ ಕೆಲವು ಪ್ರಶ್ನೆಗಳನ್ನು ಹೇಳಿದರು. ಅವರು ಸಹಕಾರ ಸಂಸ್ಥೆಗಳ ಅಧ್ಯಕ್ಷರಾಗಿ ಬಹಳ ವರ್ಷಗಳಿಂದ ಇದ್ದಾರೆ.

ಅವರಿಗೆ ವಿಚಾರಗಳೆಲ್ಲವೂ ಚೆನ್ನಾಗಿ ಗೊತ್ತಿದೆ. ಆದ್ದರಿಂದ ಅವರಿಗೆ ಚೆನ್ನಾಗಿ ಗೊತ್ತಿರತಕ್ಕ ವಿಚಾರವನ್ನು ಪದೇ ಪದೇ ಇನ್ನೊಬ್ಬರ ಮೇಲೆ ಸೇಡು ತೀರಿಸಿಕೊಳ್ಳುವ ಮನೋಭಾವದಿಂದ ಹೇಳಬಾರದು. ಮಾನ್ಯ ಉಪ-ಮಂತ್ರಿಗಳು ಮೈಸೂರು, ಮಂಡ್ಯ, ಮತ್ತು ಕೂಡಿಗಲ್ ಈ ಪ್ರದೇಶಗಳಿಗೆ ಆಗಿಂದಾಗ್ಗೆ ಪ್ರವಾಸ ಹೋಗಿ ಬೇರೆ ಬೇರೆ ರಾಜಕೀಯ ನಡೆಸುತ್ತಿದ್ದಾರೆ ಎಂದು ಹೇಳಿದರು, ಅದು ಸರಿಯಲ್ಲ. ಅವರು ಆ ಕ್ಷೇತ್ರಗಳಿಗೆ ಹೋಗಬೇಕಾದ್ದು ಅವಶ್ಯಕ ಆದ್ದರಿಂದ ಅವರು ಆ ಪ್ರದೇಶಗಳಿಗೆ ಹೋಗಿದ್ದಾರೆ. ನಾವು ಅವರನ್ನು ಈ ಸಭೆಯ ಮೂಲಕ ಅವಹೇಳನ ಮಾಡಿ ಈ ಸಭೆಯ ಪವಿತ್ರವಾದ ಕಾಲವನ್ನು ಹಾಳುಮಾಡುವುದು ಸರಿಯಲ್ಲ.

ಜೈಲು ವಿಚಾರದಲ್ಲಿ ಹೇಳಬೇಕಾದರೆ ಈಗಾಗಲೇ ಮಾನ್ಯ ಸದಸ್ಯರನೇಕರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅವರು ಅಭಿಪ್ರಾಯ ಪಟ್ಟಹಾಗೆ ಜೈಲಿನ ನೌಕರರ ಸ್ಥಿತಿಗತಿಗಳನ್ನು ಸುಧಾರಿಸಿ ಅವರ ಬೇಡಿಕೆಗಳನ್ನು ಕಾರ್ಯಗತ ಮಾಡಬೇಕು. ಜೈಲಿನಲ್ಲಿ ನಡೆಯತಕ್ಕ ಕೈಗಾರಿಕೆಗಳಲ್ಲಿ ಕೆಲಸಮಾಡತಕ್ಕವರ ಕೂಲಿ ಕೊಂತೆಗಳನ್ನು ಸರಿಪಡಿಸಬೇಕು. ಮತ್ತು ಜೈಲಿನಲ್ಲಿ ಕೆಲಸಮಾಡತಕ್ಕ ಮೇಲಧಿಕಾರಿಗಳಿಗೆ ಒಂದು ಪೂರ್ಣವಾದ ಅವಕಾಶವನ್ನು ಕೊಟ್ಟು ಅಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕು. ಜೈಲಿನಲ್ಲಿ ವಾಸಮಾಡತಕ್ಕ ಖೈದಿಗಳಿಗೆ ಸರಿಯಾದಂತಹ ಸ್ಥಳಾವಕಾಶ, ಸರಿಯಾದ ಆಹಾರ, ನೀರು ಸರಬರಾಜು ಇತ್ಯಾದಿಗಳನ್ನು ಜೈಲಿನ ಅಧಿಕಾರಿಗಳು ವ್ಯವಸ್ಥೆ ಮಾಡಬೇಕು. ಮತ್ತು ಈಗಿರತಕ್ಕ ವಿಧಾನವನ್ನು ಮಾರ್ಪಾಡು ಮಾಡುವುದು ಅವಶ್ಯಕ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಸನ್ಮಾನ್ಯ ಸಭಾಧ್ಯಕ್ಷರೇ, ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಮೈಸೂರು ರಾಜ್ಯ ಒಂದು ಮಾದರಿ ಸಂಸ್ಥಾನ ಎಂದು ಇಡೀ ಭಾರತದಲ್ಲೇ ಹೆಸರುವಾಸಿಯಾಗಿತ್ತು, ಮತ್ತು ಮೈಸೂರು ರಾಜ್ಯದ ಆಡಳಿತದ ಬಗ್ಗೆ ಎಲ್ಲರಿಗೂ ತುಂಬಾ ಗೌರವವಿತ್ತು. ಪೂಜ್ಯ ಗಾಂಧೀಜಿಯವರೂ ಸಹ ಇದನ್ನು ಒಪ್ಪಿದ್ದರು. ನಮಗೆ ಸ್ವಾತಂತ್ರ್ಯ ಬಂದ ನಂತರ ರಾಜ್ಯ ನಿಜವಾಗಿಯೂ ರಾಮರಾಜ್ಯವಾಗುತ್ತದೆ, ಎಂದು ಜನತೆ ಆಶೆಯನ್ನು ಇಟ್ಟುಕೊಂಡಿದ್ದರು. ಸ್ವರಾಜ್ಯ ಬಂದನಂತರ ಈ ಹಿಂದಿನ ಆಡಳಿತವನ್ನು ನೋಡಿ ಯಾರೂ ದುಃಖಪಡಬೇಕಾಗಿಲ್ಲ. ಹಿಂದೆ ರಾಜ್ಯದಲ್ಲಿ ಕೆಳಗಿನಿಂದ ಮೇಲಿನವರೆಗೂ ಒಂದೇ ಸಮನಾದ ಭಾವನೆ ಇತ್ತು. ಸರ್ಕಾರದವರು ಸಾರ್ವಜನಿಕರ ವಿಚಾರದಲ್ಲಿ ಹೆಚ್ಚಿನ ಮಾನ್ಯತೆ, ಗೌರವಗಳನ್ನು ತೋರಿಸುತ್ತಿದ್ದರು. ಆದರೆ ಈಗಿನ ಪದ್ಧತಿಯಲ್ಲಿ ನಿಜವಾಗಿಯೂ ಮಾನವರಿಗೆ ಸಲ್ಲಬೇಕಾದ ಗೌರವ ಸರ್ಕಾರಿ ಕಚೇರಿಗಳಲ್ಲಿ ದೊರೆಯುತ್ತಿಲ್ಲ. ಇದು ನಿಜವಾಗಿಯೂ ತುಂಬಾ ಶೋಚನೀಯವಾದ ವಿಚಾರ. ಹಿಂದೆ ಇದ್ದ ಅನೇಕ ಹಿರಿಯ ಅಧಿಕಾರಿಗಳು ಇಂದೂ ಇದ್ದಾರೆ. ಹಿಂದೆ ಇಡೀ ಭಾರತದಲ್ಲಿ ಮೈಸೂರು ಸಿವಿಲ್ ಸರ್ವೀಸ್‌ನವರಿಗೆ ಒಳ್ಳೆಯ ಹೆಸರು ಬಂದಿತ್ತು. ಈಗಲೂ ಕೂಡ ಉತ್ತಮವಾದ ಅಧಿಕಾರಿಗಳು ಇದ್ದಾರೆ, ಪ್ರಾಮಾಣಿಕರಾದ ಅಧಿಕಾರಿಗಳು ಇದ್ದಾರೆ. ನಿಷ್ಠಾವಂತರಾದ ಅಧಿಕಾರಿಗಳು ಇದ್ದಾರೆ, ಅವರಲ್ಲಿ ಒಳ್ಳೆಯ ನೀತಿ ಇದೆ. ಅವರು ದಕ್ಷತೆಯಿಂದಲೂ ಕೆಲಸ ಮಾಡುತ್ತಿದ್ದಾರೆ. ಅವರೆಲ್ಲರಿಗೂ ನನ್ನ ಧನ್ಯವಾದಗಳು. ಇಂಥಾ ಅಧಿಕಾರಿಗಳು ದಕ್ಷರಾದ, ಪ್ರಾಮಾಣಿಕರಾದಂತಹವರು ಒಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಲಂಚ ರುಷವತ್ತುಗಳನ್ನು ತೆಗೆದುಕೊಳ್ಳತಕ್ಕವರು, ಅಧ್ಯಕ್ಷರಾದವರು ಮತ್ತು ಅಪ್ರಾಮಾಣಿಕರಾದವರ ಸಂಖ್ಯೆಯೇ ಹೆಚ್ಚಾಗಿದೆ. ಈಗ ಎಲ್ಲರೂ ಲಂಚವನ್ನು ತಿನ್ನುವುದಕ್ಕೆ ಹುರು ಮಾಡಿದ್ದಾರೆ. ಲಂಚವಿಲ್ಲದೆ ಯಾವ ಕೆಲಸಗಳೂ ಆಗುವುದಿಲ್ಲ. ಜನಗಳು ಸುಲಸೋಲ ಮಾಡಿ ಆಫೀಸುಗಳಿಗೆ ಹೋಗಿ ಅಲ್ಲಿ ಕೆಲ ಸಮಾಡತಕ್ಕ ನೌಕರರಿಗೆ ಅಧಿಕಾರಿಗಳಿಗೆ ಲಂಚವನ್ನು ಕೊಟ್ಟು ಕೈಮುಗಿದು ನಮ್ಮಪ್ಪ ತಿರುಪತಿ ತಿಮ್ಮಪ್ಪಾ ಎಂದು ಹೇಳಿ ನಮ್ಮ ಕೆಲಸ ಮಾಡಿಕೊಡಿ ಎಂದು ಕೇಳಿಕೊಳ್ಳಬೇಕಾಗಿದೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಇದನ್ನೆಲ್ಲಾ ತಪ್ಪಿಸಬೇಕಾದರೆ, ಬಗೆ ಹರಿಸಬೇಕಾದರೆ ಏನು ಮಾಡಬೇಕು? ವಿಜಿಲೆನ್ಸ್ ಕಮಿಷನ್ನಿನವರು ಇದ್ದಾರೆ ಅವರು ಕೆಲಸ ಮಾಡುತ್ತಾರೆ ಎಂದು ತಾವು ಹೇಳಬಹುದು. ಆದರೆ ದಿನಬೆಳಗಾದರೆ ವಿಜಿಲೆನ್ಸ್ ಕಮಿಷ್ನಿನವರಿಗೆ ಅರ್ಜಿಕೊಟ್ಟು ಕಳ್ಳನನ್ನು ಹಿಡಿಯಿರಿ, ಎಂದು ಹೇಳುವುದಾದರೆ ನಾವು ದೇಶದಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸಾರ್ವತ್ರಿಕವಾಗಿ ಬಹು ಜನ ಅಧಿಕಾರಿಗಳು ಲಂಚವನ್ನು ತಿನ್ನುತ್ತಿದ್ದಾರೆ. ಇದರಿಂದಸಾರ್ವಜನಿಕರಿಗೆ ಮೋಸವಾಗುತ್ತಿದೆ ಇದನ್ನು ಸರ್ಕಾರದವರು ಸರಿಪಡಿಸಬೇಕು. ಎಫಿಷಿಯೆನ್ಸಿ ಆಡಿಟ್‌ನವರಿಗೆ ಎನ್‌ಫೋರ್ಸ್ ಮಾಡಿ ಬುದ್ಧಿಶಾಲಿಗಳಾದಂತಹವರು ತನಿಖೆ ಮಾಡಿ ಫೈಲುಗಳನ್ನು ನೋಡಿ ಅದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಪಡೆದು ಅವನು ಲಂಚ ತಿಂದಿದ್ದಾನೆಯೇ ಇಲ್ಲವೇ ಎಂಬುದನ್ನು ಕಂಡುಹಿಡಿದು ತಪ್ಪಿತಸ್ಥನಿಗೆ ಉಗ್ರ ಶಿಕ್ಷೆಯನ್ನು ವಿಧಿಸುವುದಾದರೆ ಸ್ವಲ್ಪ ಲಂಚ ಕಡಿಮೆ ಆಗಬಹುದು. ಆಗ ಪ್ರಜೆಗಳು ಸುಖವಾಗಿರಬಹುದು ಎಂದು ನಾನು ಹೇಳಬಯಸುತ್ತೇನೆ. ಮೇಲ್ಕಟ್ಟದ ಅಧಿಕಾರಿಗಳಲ್ಲಿ ಕೊಂಚ ಲೋಪಗಳು ಇವೆ. ಅವುಗಳನ್ನು ತೊಡೆದು ಹಾಕಿ ದಕ್ಷತೆಯನ್ನು ಹೆಚ್ಚಿಸಬೇಕು ಎಂದು ಮಾನ್ಯ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಮುಖ್ಯಮಂತ್ರಿಗಳು ಒಂದು ಆದೇಶವನ್ನು ಹೊರಡಿಸಿದ್ದಾರೆ. ಸರ್ಕಾರಿ ಅಧಿಕಾರಿಗಳಲ್ಲಿ ಯಾರು ಕೊಂಚ ಅದಕ್ಷತೆಯಿಂದ ಕೆಲಸ ಮಾಡುತ್ತಾರೆ, ಅವರಿಗೆ ೨೫ ವರ್ಷಗಳು ಸರ್ವೀಸ್ ಆಗಿದ್ದರೆ ಅಂಥವರನ್ನು ಎಟೈರ್ ಮಾಡಬೇಕು ಎಂದು ಒಂದು ಸ್ಕ್ರೀನಿಂಗ್ ಕಮಿಟಿಯನ್ನು ಮಾಡಿದ್ದಾರೆ. ಈಗ ಅದರಿಂದ ಪರಿಣಾಮವಾಗಿರತಕ್ಕದ್ದು ಏನು ಎಂದರೆ ಸರ್ಕಾರದವರು ಆ ಅವಕಾಶವನ್ನು ಉಪಯೋಗಿಸಿಕೊಂಡು ತಮಗೆ ಬೇಕಾದ ಅಧಿಕಾರಿಗಳನ್ನು ಕೆಲಸದಲ್ಲಿಟ್ಟುಕೊಂಡು ತಮಗೆ ಬೇಡವಾದ ಅಧಿಕಾರಿಗಳನ್ನು ಮನೆಗೆ ಕಳುಹಿಸುತ್ತಿದ್ದಾರೆ. ಜೂನಿಯರ್ ಆಗಿರುವವರಿಗೆ ಆ ಸ್ಥಾನವನ್ನು ಕೊಟ್ಟು ಅವರನ್ನು ಮೇಲಕ್ಕೆ ಎತ್ತುತ್ತಿದ್ದಾರೆ. ಈ ಒಂದು ಅವಕಾಶವನ್ನು ಸರ್ಕಾರದವರು ಉಪಯೋಗಿಸಿಕೊಂಡು ನಿರಪರಾಧಿಗಳಾದ ಅಧಿಕಾರಿಗಳನ್ನು ಕೆಲವರನ್ನು ಮನೆಗೆ ಕಳುಹಿಸಿದ್ದಾರೆ. ಈ ಒಂದು ಕಾನೂನಿನಿಂದ ಇಷ್ಟು ಅನ್ಯಾಯ ನಡೆದಿದೆನ್ನುವುದು ಕೇಂದ್ರ ಸರ್ಕಾರದವರಿಗೂ ಗೊತ್ತು, ಮೈಸೂರು ಸರ್ಕಾರಕ್ಕೂ ಗೊತ್ತಿದೆ. ಇದರಲ್ಲಿ ಇವರು ಹೊರಡಿಸಿರುವ ಆಜ್ಞೆಯಲ್ಲಿ ಈ ರೀತಿ ಹೇಳಿದ್ದಾರೆ.

"In the public interest, it is sometimes found necessary to grant extension of service or re-employment to persons after the date of their compulsory retirement or superannuation. In such cases, the Government of India have made a rule that such persons shall not be eligible for further promotion in the cadres in which they are re-employed. Following the principle enunciated by the Government of India, the State Government have also made a Rule debarring such persons from further promotion during the period of their re-employment or extension after the date of compulsory retirement."

ಅನೇಕ ಸಂದರ್ಭಗಳಲ್ಲಿ ಒಬ್ಬ ನೌಕರನು ೨೫ ವರ್ಷ ಕೂಡ ಸೇವೆ ಮಾಡಿ, ಪ್ರಶಸ್ತಿ ಪಡೆದರೂ ಅವನನ್ನು ರಿಟ್ರೈರ್ ಮಾಡಲು ಕಾನ್‌ಫಿಡೆನ್ಶಿಯಲ್ ಶೀಟಿನಲ್ಲಿ ಏನಾದರೂ ಬರೆದುಬಿಡುತ್ತಾರೆ ಮತ್ತು ಅವನಿಗೆ ಒಂದೆರಡು ತಿಂಗಳಲ್ಲಿ ನೋಟೀಸ್ ಕೊಡುತ್ತಾರೆ, ಎಕ್ಸ್‌ಪ್ಲನೇಶನ್ ಕೇಳುತ್ತಾರೆ ಮತ್ತು ಇನ್ನಿತರ ಹಿಂಸೆಯನ್ನು ಕೊಡುತ್ತಾರೆ. ಇಂಥ ಅನ್ಯಾಯ ನಡೆದರೆ ಸರ್ಕಾರಿ ನೌಕರನು ತನ್ನ ಗೌರವವನ್ನು ಕಳೆದುಕೊಂಡು, ಅಡ್ಡದಾರಿಯಲ್ಲಿ ನಡೆಯುತ್ತಾನೆ.

ಇನ್ನು ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಪ್ರಶ್ನೆ ೧೯೫೬ನೇ ಇಸವಿಯಿಂದ ಇವತ್ತಿನವರೆಗೂ ಬಗೆಹರಿದಿಲ್ಲ. ಇವತ್ತು ಹೈಕೋರ್ಟಿನಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ಇದರ ಬಗ್ಗೆ ಅನೇಕ ರಿಟ್‌ಗಳು ಬಿದ್ದಿವೆ. ಇದರಿಂದ ಸರ್ಕಾರಕ್ಕೂ ಲಕ್ಷಾಂತರ ರೂಪಾಯಿ ಖರ್ಚು. ಇವತ್ತು ಅನೇಕ ದೂರುಗಳು ಬರುತ್ತಾ ಇವೆ. ರೀಜನಲ್ ಇಂಬೇಲೆನ್ಸ್ ಇದೆ, ಪ್ರಾಂತೀಯ ಭಾವನೆ ಇದೆ, ಮತ್ತು ಇತರ ಭಿನ್ನ ಭೇದಗಳಿವೆ, ಎಂಬ ದೂರುಗಳನ್ನು ಕೇಳುತ್ತಿದ್ದೇವೆ ಇದರಿಂದ ಅಧಿಕಾರಿಗಳಲ್ಲಿ ಒಂದು ರೀತಿಯ ಜಿಗುಪ್ಸೆ ಉಂಟಾಗುತ್ತದೆ. ಸರ್ಕಾರಕ್ಕೆ ಅಧಿಕಾರಿ ವರ್ಗದಲ್ಲಿ ಎಲ್ಲಾ ನೌಕರರು ಕೂಡ ಕ್ಷೇತ್ರನ್ನ ಮಕ್ಕಳೆಂದು ನೋಡಿದರೆ, ಇಂಥ ವಾತಾವರಣಕ್ಕೆ ಅವಕಾಶವಾಗುವುದಿಲ್ಲ. ಮತ್ತು ಹಾಗೆ ಮಾಡುವುದರಿಂದ ಸರ್ಕಾರಕ್ಕೂ ಲಕ್ಷಾಂತರ ರೂಪಾಯಿ ಉಳಿತಾಯವಾಗುತ್ತದೆ.

4-00 P.M.

ಮತ್ತೊಂದು ವಿಷಯ. ಮಾನ್ಯ ರೆವಿನ್ಯೂ ಸಚಿವರು ತಾಹಸೀಲ್ದಾರರ ಲಿಸ್ಟ್ ಮಾಡಿದ್ದಾರೆ ಎಂದು ಕೇಳಿದ್ದೇನೆ. ಆ ಲಿಸ್ಟಿನಲ್ಲಿ ಹೊಸ ಮೈಸೂರಿನವರನ್ನು ಸೇರಿಸಿದ್ದಾರೆ, ಹಳೆಯ ಮೈಸೂರಿನವರು ಇಲ್ಲ ಎನ್ನುವ ಕೂಗು ಕೇಳುತ್ತಿದೆ. ಇದು ನಿಜವೋ, ಸುಳ್ಳೋ ಎಂದು ಗೊತ್ತಿಲ್ಲ. ನಿಜವಿದ್ದ ಪಕ್ಷದಲ್ಲಿ ಅದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯಲ್ಲಿ ಸಾಮಾನ್ಯವಾದ ದೋಷವೆಂದರೆ, ಅಲ್ಲಿ ಪ್ರಾಮಾಣಿಕತೆ ಹೆಚ್ಚಿಲ್ಲ. ಅದಕ್ಕೆ ನಾನಾದರೂ ಸಲಹೆ ಮಾಡುತ್ತೇನೆ, ಈಗ ಹೊಸದಾಗಿ ಪೋಲೀಸ್ ಕಾನ್ಸ್‌ಟೇಬಲ್‌ನ್ನು ನೇಮಕ ಮಾಡುವಾಗ ಎಸ್ ಎಸ್ ಎಲ್ ಸಿ ಪಾಸ್ ಮಾಡಿಕೊಂಡವರನ್ನೇ ನೇಮಿಸಿಕೊಂಡು ಅಲ್ಲಿಯ ದಕ್ಷತೆ ಹೆಚ್ಚಿಸಬೇಕು ಕೇಂದ್ರ ಸರ್ಕಾರದವರು ಪೋಲೀಸರಿಗೆ ಮನೆಗಳನ್ನು ಕಟ್ಟುವುದಕ್ಕೆ ಅಪಾರವಾದ ಹಣವನ್ನು ಕೊಟ್ಟಿರೂ, ನಮ್ಮ ಸರ್ಕಾರದವರು ಅದನ್ನು ಸದುಪಯೋಗಿಸಲು ತಕ್ಕ ಗಮನವನ್ನು

ಕೊಡುತ್ತಾ ಇಲ್ಲ. ಕೋಲಾರ ಜಿಲ್ಲೆಯಲ್ಲಿ ಇಂಥ ಒಂದು ಕೆಲಸ ೫ ವರ್ಷದಿಂದ ಪೆಂಡಿಂಗ್ ಇದೆ. ಆದರೂ ಸಹ ಕೆಲಸ ತೆಗೆದುಕೊಂಡಿಲ್ಲ. ಅಲ್ಲಿ ಪೋಲೀಸ್ ಇಲಾಖೆಯವರು ಮನೆಗಳು ಇಲ್ಲದೆ ತೊಂದರೆಪಡುತ್ತಿದ್ದಾರೆ. ಆ ಕೆಲಸವನ್ನು ನಮ್ಮ ಸರ್ಕಾರದವರು ತ್ವರಿತವಾಗಿ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಷಯವೇನೆಂದರೆ, ನಮ್ಮ ಮಂತ್ರಿಯವರು ಬೆಂಗಳೂರು ಯುನಿವರ್ಸಿಟಿ ಸ್ಟೂಡೆಂಟ್ಸ್ ಕೇಸನ್ನು ವಾಪಸ್ಸು ಪಡೆದಿದ್ದಾರೆ. ಇದಕ್ಕೆ ವಂದನೆಯನ್ನು ಸಲಿ ಸುತ್ತೇನೆ. ವಿದ್ಯಾರ್ಥಿಗಳು ಸಾವಧಾನದಿಂದ ಕೂತು ಪರೀಕ್ಷೆಯಲ್ಲಿ ಪಾಸ್ ಮಾಡಲು ಒಂದು ಅವಕಾಶ ಕೊಟ್ಟಿದ್ದಾರೆ. ಅದೇ ರೀತಿ ಚಿಂತಾಮಣಿಯ ಕೇಸಿನಲ್ಲೂ, ವಿದ್ಯಾರ್ಥಿಗಳ ಮೇಲೆ ಪೋಲೀಸರು ಕೇಸ್ ಹಾಕಿದ್ದಾರೆ. ಈಗ ಪರೀಕ್ಷೆ ಸಮಯ ಹತ್ತಿರ ಬರುತ್ತಾ ಇದೆ. ಅಲ್ಲೂ ಕೂಡ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಪ್ರೊಸಿಕ್ಯೂಶನ್ ವಾಪಸ್ಸು ಪಡೆಯಬೇಕೆಂದು ಶಿಫಾರಸು ಮಾಡಿದ್ದಾರೆ. ಆದ್ದರಿಂದ ಅದನ್ನು ವಾಪಸ್ಸು ಪಡೆದು, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಾಸಾಗುವಂತೆ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಂಡು, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ) :—ಮಾನ್ಯ ಅಧ್ಯಕ್ಷರೇ, ಜನರಲ್ ಅಡ್ಮಿನಿಸ್ಟ್ರೇಶನ್, ಪೋಲೀಸ್, ಮತ್ತು ಜೈಲಿಗೆ ಸಂಬಂಧಪಟ್ಟ ೧೫ ಕೋಟಿ ರೂಪಾಯಿಯ ಡಿಮ್ಯಾಂಡನ್ನು ಅನುಮೋದಿಸುತ್ತಾ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ. ಈಗ ಜೈಲು ಸರಿಯಾಗಿಲ್ಲವೆಂದು ಮಾನ್ಯ ಸೋಲೂರು ಸಿದ್ದಪ್ಪನವರು ಹೇಳಿದರು. ಆದರೆ ೧೯೫೯ನೇ ಇಸವಿಯಲ್ಲಿ ಜೈಲು ಇರುವುದಕ್ಕೂ, ೧೯೭೦ನೇ ಇಸವಿಯಲ್ಲಿ ಜೈಲು ಇರುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಕಾಂಗ್ರೆಸ್ ಜನರು ಹಿಂದೆ ಜೈಲಿನಲ್ಲಿ ಏನು ಕಷ್ಟಗಳನ್ನು ಅನುಭವಿಸುತ್ತಿದ್ದರು, ಏನು ಅನಾನುಕೂಲಗಳು ಇತ್ತು, ಅದನ್ನೆಲ್ಲಾ ಮನಗಂಡು ಇನ್ನೂ ಅನುಕೂಲಗಳನ್ನು ಮಾಡಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ಬೇಕಾದಷ್ಟು ಅನುಕೂಲಗಳನ್ನು ಮಾಡಿದ್ದಾರೆ. ಮಾಡಿರತಕ್ಕದ್ದನ್ನು ನಾವು ಒಪ್ಪಲೇಬೇಕು. ನಾವು ಜೈಲಿನಲ್ಲಿರುವಾಗ ಕತ್ತಲೆಯಲ್ಲಿ ಕೂಡ ಬಿದ್ದರೂ ನಮ್ಮನ್ನು ಕೇಳುವವರಿರಲಿಲ್ಲ. ಮತ್ತು ಅಲ್ಲಿನ ಸ್ಥಿತಿಯನ್ನು ಹೇಳತೀರದು. ಈ ದಿವಸ ನಮ್ಮ ಮನೆಗಳಿಗಿಂತಲೂ ಜೈಲು ಮೇಲು ಎಂದು ಕಾಣುತ್ತದೆ. ಅಲ್ಲಿ ಡಿ ಡಿ ಟಿ ಹಾಕಿ ಬಿಟ್ಟು ರೂಮುಗಳನ್ನು ಸ್ವಚ್ಛವಾಗಿಟ್ಟಿದ್ದಾರೆ. ನಾವು ಮೈಸೂರಿನಲ್ಲಿ ಜೈಲಿನಲ್ಲಿರುವಾಗ ಅನ್ನದಲ್ಲಿ ಏನೇನು ಇರುತ್ತಿತ್ತು ? ಆದರೆ ಇವತ್ತಿನ ದಿವಸ ಆ ರೀತಿ ಇಲ್ಲ. ಅವರಿಗೆ ಒಳ್ಳೆಯ ತಿಂಡಿಗಳನ್ನು ಕೊಡುತ್ತಿದ್ದಾರೆ. ಮತ್ತು ಅವರಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಟ್ಟು ಮುಂದೆ ಅವರು ಜೈಲಿನಿಂದ ಬಿಡುಗಡೆಯಾದ ಮೇಲೆ ಉತ್ತಮ ರೀತಿಯ ಪ್ರಜೆಯಾಗಿ ಬಾಳುವುದಕ್ಕೆ ಬೇಕಾದ ಅನುಕೂಲವನ್ನು ಕಲ್ಪಿಸಿಕೊಟ್ಟಿದ್ದಾರೆ. ಇದು ಹೆಮ್ಮೆಯ ವಿಷಯ. ಸುಮ್ಮನೆ ಜೈಲು ಚೆನ್ನಾಗಿಲ್ಲ, ಅಡಳಿತ ಚೆನ್ನಾಗಿಲ್ಲವೆಂದು ಹೇಳುವುದು ತಪ್ಪು. ಜೈಲಿನಲ್ಲಿ ಹೋಗಿ, ನೋಡಿ ಅಲ್ಲಿ ಏನು ಅನುಕೂಲ ಇದೆ, ಏನು ಅನಾನುಕೂಲ ಇದೆ ಎಂಬುದನ್ನು ನೋಡಿ ಬಂದು ಇಲ್ಲಿ ಹೇಳಬೇಕು. ಏನೋ ಜೈಲು ಅಂದ ತಕ್ಷಣ ನಿಕೃಷ್ಟವಾದ ಭಾವನೆಯಲ್ಲಿ ನೋಡಬಾರದು. ಇವೊತ್ತಿನ ದಿವಸ ಜೈಲಿನಷ್ಟು ನಾಜೂಕು, ಕೆಲವರ ಮನೆ ಕೂಡ ಇಲ್ಲವೆಂದು ಹೇಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯಲ್ಲಿ ಅನೇಕ ಅಧಿಕಾರಿಗಳು ಅಕ್ರಮ ಮಾಡುತ್ತಾ ಇರುವಾಗ ಅದನ್ನು ಮೇಲ್ಪಟ್ಟ ಅಧಿಕಾರಿಗಳ ಗಮನಕ್ಕೆ ತಂದು, ಅವರನ್ನು, ಒದ್ದಾಯಿಸಿ, ಒಳ್ಳೆಯ ಮನುಷ್ಯನನ್ನು ಕೊಡಿ ಎಂದು ಕೇಳಿದಾಗ, 'ಅದ್ಯಾರೋ' ನೀವು ಕರೆದುಕೊಂಡು ಬನ್ನಿ ಎಂದು ಹೇಳಿದ್ದಾರೆ. ಆದರೆ ಎಲ್ಲಿ ಏನು ಕೆಟ್ಟ ಕೆಲಸ ನಡೆದರೂ ಪೋಲೀಸರ ಕೈವಾಡ ಅದರಲ್ಲಿ ನಡೆಯುತ್ತಿದೆ. ಪೋಲೀಸ್ ಇಲಾಖೆಯಲ್ಲಿ ನೂರಕ್ಕೆ ೧೦ ಜನ ಒಳ್ಳೆಯ ಮನುಷ್ಯರು ಸಿಗಬಹುದು ಇನ್ನು ಉಳಿದ ೯೦ ಜನರು ಅಕ್ರಮದಲ್ಲಿ ಹಣ ಸಂಪಾದನೆ ಮಾಡಿ ಮನೆ ಕಟ್ಟಿದವರು. ಇವೊತ್ತಿನ ದಿವಸ ಪೋಲೀಸ್ ಅಧಿಕಾರಿಯ ಮನೆಯಲ್ಲಿ ನೋಡಿದರೆ, ಬೇಕಾದಷ್ಟು ಒಡವೆ, ಒಂಗಾರ, ಮತ್ತು ಬೆಳ್ಳಿ ಸಾಮಾನುಗಳು ಎಲ್ಲಾ ಅನೇಕ ಇವೆ. ಅವರಿಗೆ ಬರತಕ್ಕ ೨೮೦-೩೦೦ ಸಂಬಳದಲ್ಲಿ ಜೀವಿಸುವುದಕ್ಕೆ ಕಷ್ಟವಾಗುತ್ತಿರುವ ಕಾಲದಲ್ಲಿ ಇವೆಲ್ಲಾ ಹೇಗೆ ಬರುತ್ತದೆ? ಇವತ್ತು ನೋಡಿದರೆ ಅವರು ರಾಜ ರೀವಿಯಲ್ಲಿದ್ದಾರೆ. ಆದರೆ ಅವರು ಒಂದು ತಿಳಿದುಕೊಳ್ಳಬೇಕು. ಇದು ನಮ್ಮ ದೇಶ, ಇದು ನಮ್ಮ ರಾಜ್ಯ, ಇಲ್ಲಿಯ ಜನರು ನಮ್ಮವರು ಎನ್ನತಕ್ಕದನು ಮಾತ್ರ ತಿಳಿದುಕೊಳ್ಳಬೇಕು. ಅವರು ಆತ್ಮಸಾಕ್ಷಿಯಾಗಿ ಕೆಲಸ ಮಾಡಿದರೆ, ಅದರಿಂದ ನಮ್ಮ ಸರ್ಕಾರಕ್ಕೂ ಗೌರವ ಬರುತ್ತದೆ. ನಮ್ಮ ಜನತೆಗೂ ಒಳ್ಳೆಯದಾಗುತ್ತದೆ ಮತ್ತು ಅವರಿಗೂ ಒಳ್ಳೆಯ ಹೆಸರು ಬರುತ್ತದೆ. ಇದನ್ನು ಅವರು ತಿಳಿದುಕೊಳ್ಳಬೇಕು. ಆದರೆ ಬರೇ ಹಣಕ್ಕೋಸ್ಕರ ದುಡಿದು ದರೋಡೆ ಮಾಡುವುದಕ್ಕೆ ಹೊರಟರೆ, ಎಲ್ಲವೂ ನಾಶವಾಗಿ ಹೊರಟುಹೋಗಬೇಕಾಗುತ್ತದೆ. ಯಾರು ಬಡವರಿದ್ದಾರೆ ಯಾರು ನಿರಪರಾಧಿಗಳಿದ್ದಾರೆ, ಅವರ ರಕ್ತವನ್ನು ಹೀರಿ ಹಣ ಸಂಪಾದನೆ ಮಾಡುವುದೆಂದರೆ ಇದಕ್ಕಿಂತ

(ಶ್ರೀ ಕೆ. ಎಂ. ಪುಟ್ಟಸ್ವಾಮಿ)

ಅಕ್ರಮವಾದ ಕೆಲಸ ಬೇರೆ ಯಾವುದು ಇಲ್ಲ. ಪೋಲೀಸ್ ಇಲಾಖೆಯಲ್ಲಿ ನೀತಿಯನ್ನು ಪಾಲಿಸಿಕೊಂಡು ಹೋಗತಕ್ಕವರೂ ಕೆಲವರು ಇದ್ದಾರೆ. ಆದರೆ ೯೦ ಪರ್‌ಸೆಂಟ್ ಜನರು ಅಕ್ರಮ ಮಾಡತಕ್ಕವರು ಈ ೧೦ ಜನರಿಗೆ ಮಸಿ ಬಳಿಯಲು ಅವರು ಪ್ರಯತ್ನ ಮಾಡಿ, ಅವರ ಕರ್ತವ್ಯವನ್ನು ಸುಸೂತ್ರವಾಗಿ ಮಾಡಲು ಅಡ್ಡಿಯನ್ನುಂಟುಮಾಡುತ್ತಿದ್ದಾರೆ. ಪೋಲೀಸರು ಇವೊತ್ತಿನ ದಿವಸ ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರು ತರಬೇಕು, ಮತ್ತು ಚಳುವಳಿ ಕಾಲದಲ್ಲಿಯೂ, ಗಡಿ ವಿವಾದದ ಕಾಲದಲ್ಲೂ ಬಹಳ ಸಹನೆಯಿಂದ ವರ್ತಿಸಬೇಕಾಗುತ್ತದೆ.

ಪೋಲೀಸಿನವರು ಏನು ಮಾಡಿದರೂ ಸರ್ಕಾರ ಸುಮ್ಮನೆ ನೋಡುತ್ತಿದೆಯೆಂದು ಇಂಡಿಕೇಟ್ ಸದಸ್ಯರು ಟೀಕೆ ಮಾಡುವುದಕ್ಕೇ ಇದ್ದಾರೆ. ಆದಕ್ಕೆ ಅವಕಾಶ ಕೊಡದೇ ಇರುವ ಹಾಗೆ ಪೋಲೀಸಿನವರು ನಿಷ್ಪಕ್ಷಪಾತೆಯಿಂದ ಹಾಗೂ ನೀತಿಯಿಂದ ನಡೆದರೆ, ದೇಶಕ್ಕೂ ಕ್ಷೇಮ, ಜನಗಳಿಗೂ ಕ್ಷೇಮ ಮತ್ತು ಸರ್ಕಾರಕ್ಕೂ ಕ್ಷೇಮ.

ಇನ್ನೊಂದು ವಿಷಯ ಮಾನ್ಯ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಬಂದಾಗಿನಿಂದಲೂ ಯಾವ ಅರ್ಜಿಗಳೂ ಕೂಡ ಬಾಕಿಮಾನತ್ತಿಲ್ಲಿ ನಿಂತಿಲ್ಲ. ಆ ದಿನವೇ ಅದನ್ನು ಡಿಸ್ಪೆಡ್ ಮಾಡಿ, ಒಳ್ಳೆಯದೋ, ಕೆಟ್ಟದ್ದೊ ಯಾವುದೋ ಒಂದು ತೀರ್ಮಾನಮಾಡಿ ಜನಗಳಿಗೆ ಅನೇಕ ವಿಧವಾಗಿ ಉಪಕಾರ ಮಾಡುತ್ತಿದ್ದಾರೆ. ರಾತ್ರಿ ಹಗಲು ಇವರು ನನ್ನ ದೇಶ, ಜನತೆಯ ಹಿತವೇ ನನ್ನ ಹಿತವೆಂದು ಹೇಳುತ್ತಾ ದುಡಿಯುತ್ತಿದ್ದಾರೆ. ಅಂದಮೇಲೆ ಇಪತ್ತಿನದಿವಸ ನನ್ನ ಸ್ನೇಹಿತರಾದ ಮಾನ್ಯ ಶ್ರೀ ಎಸ್. ಪುಟ್ಟಸ್ವಾಮಿಯವರು ಅವರ ಭಾಷಣದಲ್ಲಿ ಹೇಳಿದರು, ಅವರು ಗುಲ್ಬರ್ಗಾ ಪ್ರಾಂತದಿಂದ ಬಂದವರು, ಮೈಸೂರಿನಲ್ಲಿರತಕ್ಕ ನದೀ ನೀರಿನ ಬಗ್ಗೆ ಅವರಿಗೇನು ಚಿಂತೆ, ಅವರು ಕೃಷ್ಣಾ ಮೆಲ್ದಂಡೆ ಮಾತ್ರ ನೋಡುತ್ತಾರೆ, ಕಾವೇರಿ ನದಿಯ ಬಗ್ಗೆ ನೋಡುವುದಿಲ್ಲವೆಂದು, ಇದು ತಪ್ಪು. ಹಿಂದೆ ಮಾನ್ಯ ಶ್ರೀ ಕೆ. ಸಿ. ರೆಡ್ಡಿಯವರು ಇದ್ದರು. ಮಾನ್ಯ ಶ್ರೀ ಕಡಿದಾಳ್ ಮಂಜಪ್ಪನವರು ಇದ್ದರು, ಇನ್ನೂ ಅನೇಕ ಜನ ಮುಖ್ಯ ಮಂತ್ರಿಗಳು ಇದ್ದರು. ಮಾನ್ಯ ಶ್ರೀ ನಿಜಲಿಂಗಪ್ಪನವರೂ ಸಹ ಇದ್ದರು. ನಾನು ಅವರ ಕಾಲದಲ್ಲಿ ನೋಡಿದ್ದೇನೆ. ಒಂದು ಪೇಪರ್ ತಿವರ ಆಫೀಸಿನೊಳಗೆ ಹೋದರೆ ಬಿದು ಆರು ತಿಂಗಳಾದರೂ ಈಚೆಗೆ ಬರುತ್ತಿರಲಿಲ್ಲ. ಆದರೆ ಈಗಿನ ಮಾನ್ಯ ಮುಖ್ಯ ಮಂತ್ರಿಗಳಿಗೆ ಯಾವುದಾದರು ವಿಚಾರವನ್ನು ಹೇಳಿದರೆ ಅದನ್ನು ತಕ್ಷಣ ಮಾಡುತ್ತಾರೆ. ಅದನ್ನು ನಾನು ಕಣ್ಣಾರೆ ನೋಡಿದ್ದೇನೆ. ಆಚೆ ಕಡೆ ಜನರೂ ಮತ್ತು ಎದುರು ಪಕ್ಷದವರೂ ನೋಡಿದ್ದಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ :—ಹಾಗಾದರೆ ಮಾನ್ಯ ಶ್ರೀ ನಿಜಲಿಂಗಪ್ಪನವರಿಗಿಂತ ಈಗಿನ ಮುಖ್ಯ-ಮಂತ್ರಿಗಳು ದಕ್ಷರೆಂದು ಹೇಳುತ್ತೀರಾ ?

ಶ್ರೀ ಕೆ. ಎಂ. ಪುಟ್ಟಸ್ವಾಮಿ : ಎಲ್ಲರೂ ದಕ್ಷತೆಯಿಂದ ಕೆಲಸ ಮಾಡುವವರಾಗಿದ್ದರೂ ಇನ್ನೂ ಹೆಚ್ಚಿನ ದಕ್ಷತೆಯಿಂದ ಇವರು ಕೆಲಸ ಮಾಡುತ್ತಿದ್ದಾರೆ. ಆದರೆ ಈಗ ಇಂಡೀಕೇಟಿನವರು ನಮ್ಮ ಸರ್ಕಾರದವರನ್ನು ಹೆಚ್ಚಿಗೆ ದೋಷಣೆ ಮಾಡುತ್ತಿದ್ದಾರೆ. ಮಾನ್ಯ ಶ್ರಿ ಎಚ್. ಎಂ. ಚನ್ನಬಸಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಅನೇಕ ಜನರನ್ನು ಡಿಸ್‌ಮಿಸ್ ಮಾಡಿದ್ದು, ಸಸ್‌ಪೆಂಡ್ ಮಾಡಿದ ಮಾಹಿತಿ ನನ್ನಲ್ಲಿದೆ. ಆ ರೀತಿಯಾಗಿ ಮಾಡುತ್ತಿದ್ದರು. ಆಗ ಅನೇಕರು ರಿಟ್‌ಹೋಗಿ ಹೈಕೋರ್ಟಿಗೆ ಅಪೀಲು ಮಾಡಿಕೊಂಡು ನಮ್ಮ ಸರ್ಕಾರದ ಬೊಕ್ಕಸದಿಂದ ಸುಮಾರು ೯-೧೦ ಲಕ್ಷ ರೂಪಾಯಿಗಳವರೆಗೆ ಅವರು ಆಗ ಹಾಳು ಮಾಡುವುದಕ್ಕೆ ಅವಕಾಶಮಾಡಿಕೊಟ್ಟರು. ಅಂಥಾದನ್ನು ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರ ಕಾಲದಲ್ಲಿ ಆದುದನ್ನು ತೋರಿಸಿಕೊಡಿ. ಆಗ ಅವರಿಗೆ ನಾನು ಶಾಬಾಸ್‌ಗಿರಿ ಕೊಡುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ :—ಈಗ ಯಾರು ದೇಶದ್ರೋಹ ಮಾಡುತ್ತಾರೋ ಅವರಿಗೆ ಫೈಯರ್ ಗ್ರೇಡ್ ಕೊಡುತ್ತೀರಿ. ಅವರನ್ನು ಮನೆಗೆ ಕಳುಹಿಸುತ್ತಾ ಇಲ್ಲ.

ಶ್ರೀ ಕೆ. ಎಂ. ಪುಟ್ಟಸ್ವಾಮಿ :—ಆಮೇಲೆ ಇಂಡಿಯನ್ ಏರ್‌ಲೈನ್ಸ್ ವಿಷಯ. ಅದು ಇವರ ಕೈಲಿ ಅಧಿಕಾರದಲ್ಲಿರುವಾಗ ವಿರೋಪ್ಲೇನಿನಲ್ಲಿ ಡೆಲ್ಲಿಗೆ ಹೋದಂಥ ಬಾಕಿಗಳು ಇವತ್ತಿನವರೆಗೂ ಬಾಕಿ ಇದೆ. ನನ್ನಲ್ಲಿ ಅದರ ಬಗ್ಗೆ ರಿಕಾರ್ಡ್ ಇದೆ. ಶ್ರೀ ಮೂ ಕೊಲ್ಲೂರು ಮಲ್ಲಪ್ಪನವರು ೨೮೮ ರೂಪಾಯಿಗಳು ಬಾಕಿ. ಸೋಷಿಯಲ್ ಮಿನಿಸ್ಟರ್ ಅವರದು ೧೫೪೫ ರೂಪಾಯಿಗಳು ಬಾಕಿ. ಇನ್ನು ಮಾನ್ಯ ಶ್ರೀ ಎಂ. ವಿ. ಕೃಷ್ಣಪ್ಪನವರದು... ..

SRI K. H. RANGANATH :—Is it in order to make allegations against members who as not here and who are not members of this house ?

ಶ್ರೀ ಕೆ. ಎಂ. ಪುಟ್ಟಸ್ವಾಮಿ :—ಮಾಜಿ ಉಪ-ಗೃಹ ಮಂತ್ರಿಗಳದ್ದು ೨೫೪೪ ರೂಪಾಯಿಗಳು ಇಂಡಿಯನ್ ಏರ್‌ಲೈನ್ಸ್‌ಗೆ ಬಾಕಿ ಇದೆಯೆಂದು ಹೇಳಿ ನಾನೇ ಚೀಫ್ ಸೆಕ್ರೆಟರಿಗಳಿಗೆ ಕಾಗದ ಬರೆದಿದ್ದೇನೆ.

SRI G. DUGGAPPA :—On apoint of order He must not make alligations and mention names of persons who are not present in the House ಅವರು ಭಾಷಣ ಮಾಡುವಾಗ ನನ್ನನ್ನು ಟೀಕೆ ಮಾಡಲಿ. ನಾನು ಅದಕ್ಕೆ ಒಪ್ಪುತ್ತೇನೆ. ಆದರೆ ಈ ಸಭೆಯಲ್ಲಿ ಇಲ್ಲದೆ ಇರುವವರ ಮೇಲೆ ಟೀಕೆ ಮಾಡಕೂಡದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ ;—ಇಲ್ಲಿ ಬಾಯಿಗೆ ಬಂದಹಾಗೆ ಮಾತನಾಡಿದರೆ ಹೇಗೆ ?

ಶ್ರೀ ಜಿ. ದುಗ್ಗಪ್ಪ :—ಈ ಸಭೆಯ ಮುಂದೆ ಅವರುಗಳು ಇಲ್ಲ. ಅವರ ಬಗ್ಗೆ ಏನೂ ಮಾತನಾಡಕೂಡದು. ಅವರ ಹೆಸರನ್ನು ಹೇಳಕೂಡದು.

ಶ್ರೀ ಕೆ. ಎಚ್. ರಂಗನಾಥ್ ;—ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಿದ ಮೇಲೆ ತಾವು ಏನು ಕ್ರಮ ತೆಗೆದು ಕೊಂಡಿದ್ದೀರಿ ? ತಾವು ಇನ್ನೂ ರೂಲಿಂಗ್ ಕೊಟ್ಟಿಲ್ಲ. ಈ ಸಭೆಯಲ್ಲಿ ಇಲ್ಲದೇ ಇರತಕ್ಕವರ ಹೆಸರನ್ನು ಹೇಳಿರುವುದರಿಂದ, ತಾವು ಆ ಹೆಸರುಗಳನ್ನು ಪ್ರೊಸೀಡಿಂಗ್ಸ್‌ನಿಂದ ಎಕ್ಸ್‌ಪಂಜ್ ಮಾಡಬೇಕು. ಏಕೆಂದರೆ ಹಿಂದೆ ನಡೆದುಹ ನಡುವಳಿಕೆಗಳಿಗೆ ಇದು ವಿರೋಧವಾಗುತ್ತದೆ. ಅದನ್ನು ಸಭಾ ನಡುವಳಿಕೆಗಳಿಂದ ತೆಗೆಸಬೇಕೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು ;—ಈ ಸಭೆಯಲ್ಲಿ ಇಲ್ಲದೇ ಇರುವವರ ಸಂಬಂಧವಾಗಿ ಮಾತನಾಡಬಾರದು. ಈಗ ನಮ್ಮ ಮುಂದಿರುವ ವಿಷಯದ ಮೇಲೆ ಮಾತನಾಡಿ.

ಶ್ರೀ ಕೆ. ಎಂ. ಪುಟ್ಟಸ್ವಾಮಿ :—ಆಗಲಿ. ತಾವು ಹೇಳಿದಂತೆ ಮಾಡೋಣ. ಇನ್ನುಮುಂದೆ ೫ವರು ಹಾಗೆ ಟೀಕೆ ಮಾಡಬಾರದೆಂದು ಅವರಿಗೆ ನೀವು ಹೇಳಬೇಕು.

ಇನ್ನೊಂದು ವಿಷಯ. ನಮ್ಮ ಸರ್ಕಾರದ ಕೈಕೆಳಗೆ ಇರತಕ್ಕ ಅಧಿಕಾರಿಗಳು ನೀತಿಪರರಾಗಿ ಕೆಲಸಮಾಡಿದರೆ ನಮ್ಮ ದೇಶಕ್ಕೆ, ನಮ್ಮ ಜನಾಂಗಕ್ಕೆ ಮತ್ತು ನಮ್ಮ ಮಂತ್ರಿಮಂಡಲಕ್ಕೆ ಶ್ರೇಯಸ್ಸು ಆಗುತ್ತದೆ. ಕೆಲವು ಅಧಿಕಾರಿಗಳಿಗೆ ಏನಾಗಿದೆಯೆಂದರೆ ನೀವು ಎಷ್ಟಾದರೂ ಹಣವನ್ನು ಅವರಿಗೆ ಕೊಡಲಿ. ಅವರಿಗೆ ಆ ಹಣದಿಂದ ತೃಪ್ತಿ ಇಲ್ಲ. ಮಾನ್ಯ ಮಂತ್ರಿಗಳು ಈಗ ೧೧ ಕೋಟಿ ರೂಪಾಯಿಗಳನ್ನು ಅಧಿಕಾರಿಗಳಿಗೆ ಹಂಚಿದರೂ ಇವತ್ತಿಗೂ ಅವರ ಗಲಾಟೆ ತಪ್ಪಿದೆಯೆ ? ಇಲ್ಲ. ಏನ್.ಜಿ.ಓ ಸ್ಟೈಕ್ ಬೋರ್ಡ್ ಮಾತ್ರ ಕಾಣುತ್ತಾ ಇರುತ್ತದೆ. ಸ್ಟೈಕ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಲೇ ಇರುತ್ತಾರೆ. ಆದರೆ ಆಫೀಸಿನಲ್ಲಿ ಕಾಗದಗಳೇನೋ ಹಾಗೆಯೇ ಕಾಣಿಸುತ್ತ ಇರುತ್ತವೆ. ಯಾವುದೂ ಜಾಗ್ರತೆಯಾಗಿ ತೀರ್ಮಾನವಾಗುವುದಿಲ್ಲ. ಏನಾದರೂ ಆಗಲೀ ೨ ಲಕ್ಷ ಜನಗಳಿಗೆ ಮನಸ್ಸಿಗೆ ಸಮಾಧಾನವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ ಆದ್ದರಿಂದ ಸರ್ಕಾರದ ಅಧಿಕಾರಿಗಳಾಗಿರುವ ಅವರ ಆತ್ಮಸಾಕ್ಷಿಯಿಂದ ಕೆಲಸಮಾಡಬೇಕು. ಇನ್ನು ಅನೇಕ ದೊಡ್ಡದೊಡ್ಡ ಹುದ್ದೆಗಳಲ್ಲಿ ಇರತಕ್ಕವರು ಅವರವರ ಊರಿನಲ್ಲಿ ಸುಮಾರು ೨ ಸಾವಿರ, ೩ ಸಾವಿರ ರೂಪಾಯಿಗಳಷ್ಟು ಬಾಡಿಗೆ ಬರುವಂತೆ ಮಾಡಿಕೊಂಡಿದ್ದಾರೆ. ಅದನ್ನು ತನಿಖೆಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿದ್ದೆ. ಇದಕ್ಕಾಗಿ ಒಬ್ಬ ಲಂಚ ನಿರೋಧ ಇಲಾಖೆಯನ್ನು ನೋಡಿ ಕೊಳ್ಳಲಿಕ್ಕೇ ಒಬ್ಬ ಮಂತ್ರಿಗಳನ್ನು ಹೆಚ್ಚಿಗೆ ತೆಗೆದುಕೊಂಡರೆ ಆದರಿಂದೇನೂ ಬಾಧಕವಿಲ್ಲ. ಅವರನ್ನು ನೇಮಕ ಮಾಡಿ ಈ ಅಧಿಕಾರಿಗಳ ಮೇಲೆ ಸರಿಯಾದ ಬಂದೋಬಸ್ತು ಮಾಡಿದರೆ ಸರಿಯಾದ ಆಡಳಿತ ಈ ದೇಶದಲ್ಲಿ ನಡೆಯುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ಲಂಚ ನಿರೋಧ ಶಾಖೆಗೆ ಒಂದು ಪ್ರತ್ಯೇಕ ಆಫೀಸನ್ನು ಮಾಡಿ ಅದಕ್ಕೆ ಒಬ್ಬ ಮಂತ್ರಿಗಳನ್ನು ಮಾಡಿ ಈ ದೇಶದಲ್ಲಿರತಕ್ಕ ಲಂಚಗುಳಿತನವನ್ನು ಹೋಗಲಾಡಿಸ ಬೇಕೆಂದು ನಾನು ಮುಖ್ಯ ಮಂತ್ರಿಗಳಿಗೆ ವಿನಂತಿಮಾಡುತ್ತೇನೆ.

(ಶ್ರೀ ಕೆ. ಎಂ. ಪುಟ್ಟಸ್ವಾಮಿ)

ದಯವಿಟ್ಟು ಮುಂದಿನ ಸೆಷನ್ ಹೊತ್ತಿಗೆ ಲಂಚ ನಿರೋಧ ಶಾಖೆ ಮಂತ್ರಿ ಮಾಡಬೇಕೆಂದು ಕೇಳ್ಕಿ ಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಆಡಳಿತವನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ಅವರಿಗೆ ಒಳ್ಳೆಯ ಆರೋಗ್ಯ ಕೊಡಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಹೆಚ್. ರಂಗನಾಥ್ :– ಅಧ್ಯಕ್ಷರೇ, ಸಭೆಯ ಮುಂದೆ ಇರತಕ್ಕ ಮೂರು ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಜನರಲ್ ಆಡ್‌ಮಿನಿಸ್ಟ್ರೇಷನ್‌ಗೆ ಈ ದಿವಸ ಸುಮಾರು ಐದು ಕೋಟಿ ೨೯ ಲಕ್ಷ ರೂಪಾಯಿಗಳ ಬೇಡಿಕೆ ನಮ್ಮ ಮುಂದೆ ಸರಕಾರ ಇಟ್ಟಿದೆ. ಅದರಲ್ಲಿ ಗೌರ್ನರ್ ಮತ್ತು ಮಂತ್ರಿ ಮಂಡಲದ ಬಗ್ಗೆ ೪೨ ಲಕ್ಷ ೪೫ ಸಾವಿರ ರೂಪಾಯಿ ಈ ವರ್ಷ ಸರಕಾರ ಕೇಳುತ್ತಿದೆ. ಇಷ್ಟೊಂದು ದೊಡ್ಡದಾದ ಮೊತ್ತವನ್ನು ಖರ್ಚು ಮಾಡತಕ್ಕ ಸನ್ನಿವೇಶ ಸರಕಾರಕ್ಕೆ ಏನು ಇದೆ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಸುಮಾರು ೨೧ ಲಕ್ಷ ರೂಪಾಯಿಗಳಷ್ಟು ಗೌರ್ನರ್ ಅವರ ಆಫೀಸಿಗೆ ಖರ್ಚುಮಾಡುವುದು ಸರಿಯೇ ಎನ್ನುವ ಪ್ರಶ್ನೆ ನಮ್ಮ ಮುಂದೆ ಇದೆ. ವೈಯಕ್ತಿಕವಾಗಿ ಹೇಳುವುದಾದರೆ ರಾಜ್ಯಾಂಗದಲ್ಲಿಯೂ ಕೂಡ ಎರಡು ಮೂರು ರಾಜ್ಯಗಳಿಗೆ ಸೇರಿ ಒಬ್ಬ ಗೌರ್ನರ್ ಇರತಕ್ಕಂಥ ಒಂದು ವ್ಯವಸ್ಥೆ ಇದೆ. ಆ ದೃಷ್ಟಿಯಿಂದ ಹೇಳುವುದಾದರೆ ಕೇಂದ್ರ ಸರಕಾರ ಈ ಒಂದು ವ್ಯವಸ್ಥೆಯನ್ನು ಮಾಡುವುದರಿಂದ ದುಬಾರಿ ಖರ್ಚು ಏನಿದೆ ಅದನ್ನು ಕಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ನನ್ನ ಅಭಿಪ್ರಾಯ. ಗೌರ್ನರ್ ಅವರ ತೋಟ ಮತ್ತು ಎಲೆಕ್ಟ್ರಿಸಿಟಿ ಚಾರ್ಜಸ್ ೫೦ ಸಾವಿರ ರೂಪಾಯಿ ; ಕೇಟರಿಂಗ್ ಅಂಡ್ ಮಿಸಲೇನಿಯಸ್ ಒಂದು ಲಕ್ಷ ಇರವತ್ತು ಸಾವಿರ ರೂಪಾಯಿ. ಮನೋರಂಜನೆ ಮತ್ತು ಅತಿಥಿ ಸೌಕರ್ಯ ೧೩ ಲಕ್ಷ ರೂಪಾಯಿ. ಈ ಖರ್ಚನ್ನು ಮಾಡತಕ್ಕದ್ದು ಸರಿಯೇ ಎನ್ನುವುದನ್ನು ನಾವು ಕೂಲಂಕುಷವಾಗಿ ವಿಚಾರ ಮಾಡತಕ್ಕ ಪರಿಸ್ಥಿತಿಯಲ್ಲಿ ಇದ್ದೇವೆ. ಈ ಪೊತ್ತಿನ ದಿವಸ ಹಣಕಾಸಿನ ಸಚಿವರು ಹೇಳುತ್ತಿದ್ದಾರೆ, ಮೇಜರ್ ಪ್ರಾಜೆಕ್ಟ್‌ಗೆ ಹಣವನ್ನು ಒದಗಿಸುವುದಕ್ಕೋಸ್ಕರ ಬಿಲ್ಡಿಂಗ್ಸ್ ಮತ್ತು ಕಮ್ಯೂನಿಕೇಷನ್‌ನಲ್ಲಿ ಸುಮಾರು ಒಂದೂವರೆ ಕೋಟಿ ಉಳಿತಾಯ ಮಾಡಿ ಒದಗಿಸುತ್ತೇವೆ ಎಂದು. ಇಂತಹ ಸಂದರ್ಭದಲ್ಲಿ ಈ ಗೌರ್ನರ್‌ರ ಆಫೀಸನ್ನು ಉಳಿಸಿಕೊಂಡು ಹೋಗುವುದಕ್ಕೆ ಅರ್ಧ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುವುದು ಸರಿಯೇ ಎನ್ನುವ ವಿಚಾರವನ್ನು ಸಭೆಯ ಮುಂದೆ ಇಡುತ್ತೇನೆ. ಅತಿ ಜಾಗ್ರತೆಯಾಗಿ ಈ ಹುದ್ದೆಗಳನ್ನು ವಜಾ ಮಾಡುವುದು ಒಳ್ಳೆಯದು. ಹಾಗೆ ಮಾಡದೆ ಹೋದ ಪಕ್ಷದಲ್ಲಿ ಸಮತಾವಾದ ಎಂದು ಏನು ಹೇಳುತ್ತೀರಿ ಆದರ ತತ್ವಕ್ಕೂ ಮತ್ತು ನಿಮ್ಮ ನುಡಿಗೂ ಅಂತರ ಜಾಸ್ತಿಯಾಗುತ್ತದೆ ಎಂದು ನನ್ನ ಅಭಿಪ್ರಾಯ. ದೆಹಲಿಯಲ್ಲಿರತಕ್ಕ ಮೈಸೂರು ಭವನದ ಖರ್ಚನ್ನು ಬಜೆಟ್‌ನಲ್ಲಿ ನೋಡಿದಾಗ ಎರಡು ಲಕ್ಷ ೪೨ ಸಾವಿರ ರೂಪಾಯಿಗಳು ಖರ್ಚು ಮಾಡಿ ಅದನ್ನು ಮೈನ್‌ಟೇನ್ ಮಾಡುವುದು ಸರಿಯೇ ಉಚಿತವೇ ಎಂದು ಕೇಳುತ್ತೇನೆ. ಇದರಲ್ಲಿಯೂ ಕೂಡ ಕನ್‌ಟಿನ್‌ಜೆನ್ಸಿಗಾಗಿ ಒಂದು ಲಕ್ಷ ೭೦ ಸಾವಿರ ರೂಪಾಯಿಗಳನ್ನು ಯಾವ ಆಧಾರದ ಮೇಲೆ ಒದಗಿಸಿದ್ದಾರೆ, ಅದನ್ನು ಕೂಡ ವಿಚಾರ ಮಾಡಬೇಕಾಗಿದೆ. ಇಂತಹ ಕಷ್ಟದಲ್ಲಿ ಇರತಕ್ಕ ಪರಿಸ್ಥಿತಿಯಲ್ಲಿ ಇಷ್ಟೊಂದು ಹಣವನ್ನು ಖರ್ಚುಮಾಡುವುದಕ್ಕೆ ಪ್ರೋತ್ಸಾಹ ಕೊಡತಕ್ಕದ್ದು ಸರಿಯೇ ಎಂದು ಕೇಳಿಕೊಳ್ಳುತ್ತೇನೆ. ಇನ್ನು ಸರ್ವೀಸಸ್ ಬಗ್ಗೆ ಈ ವರ್ಷ ಒಂದು ರಿಪೋರ್ಟ್ ಸರಕಾರದವರು ನಮಗೆ ಒದಗಿಸಿದ್ದಾರೆ. ಅದು ಬಹಳ ಸಹಾಯಕವಾಗಿದೆ. ಇಷ್ಟು ದಿವಸ ಇಂತಹ ಒಂದು ವ್ಯವಸ್ಥೆ ಇರುತ್ತಾ ಇರಲಿಲ್ಲ. ಜನರಲ್ ಆಡ್‌ಮಿನಿಸ್ಟ್ರೇಷನ್ ಬಗ್ಗೆ ಶ್ರೀಮತಿ ನಾಗರತ್ನಮ್ಮನವರು ಬಹಳ ಸ್ವಾರಸ್ಯವಾಗಿ ಟೀಕೆ ಮಾಡಿದ್ದಾರೆ. ಅದು ವಾಸ್ತವಿಕವಾಗಿ ನಡೆಯುತ್ತಾ ಇದೆ. ಸಚಿವಾಲಯದಲ್ಲಿ ಏನು ಕೆಲಸ ಮಾಡುತ್ತಿದ್ದಾರೆ, ಅದರಿಂದ ಜನ ಸಾಮಾನ್ಯರಿಗೆ ಯಾವ ವಿಧವಾದ ಸಹಾಯವೂ ಸಿಕ್ಕುವುದಿಲ್ಲ. ಯಾವ ಒಂದು ಕಾಗದ ಬಂದರೂ ಕನಿಷ್ಟ ಒಂದು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ವಿಲೇವಾರಿ ಆಗುವ ವ್ಯವಸ್ಥೆ ಕಾಣುವುದಿಲ್ಲ. ಒಂದು ಉದಾಹರಣೆ ಹೇಳುವುದಾದರೆ ೧೯೬೭ನೇ ಇಸವಿ ಮಾರ್ಚ್‌ನಲ್ಲಿ ಹಿಂದೆ ರೆವಿನ್ಯೂ ಮಂತ್ರಿಗಳಾಗಿದ್ದ ಶ್ರೀ ಕೃಷ್ಣಪ್ಪನವರು ಕೆಲವರಿಗೆ ಲ್ಯಾಂಡ್ಸ್ ಗ್ರಾಂಟ್ ಮಾಡಿದ್ದರು. ಅದು ಸರಿಯಲ್ಲ ಅಂತ ಹೊಸ ಸರಕಾರದವರು ಬಂದು ಅದನ್ನು ಕ್ಯಾನ್‌ಸಲ್ ಮಾಡಿದರು. ೧೯೬೯ನೇ ಇಸವಿ ಅಕ್ಟೋಬರ್‌ನಲ್ಲಿ ಈ ತೀರ್ಮಾನವನ್ನು ತೆಗೆದುಕೊಂಡರು. ನವೆಂಬರ್ ಡಿಸೆಂಬರ್‌ನಲ್ಲಿ ಆ ರೆಕಾರ್ಡುಗಳನ್ನು ಕೆಳಗಿನ ಆಫೀಸಿಗೆ ರವಾನೆ ಮಾಡಿದರು. ಹೀಗೆ ಸುಮಾರು ೧೦೦–೧೫೦ ಕೇಸಸ್ ಏನಿವೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸರಕಾರ ಮೂರು ವರ್ಷಗಳು ತೆಗೆದುಕೊಳ್ಳುವುದಾದರೆ ರೆವಿನ್ಯೂ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ ಮತ್ತು ಅಂಡರ್ ಸೆಕ್ರೆಟರಿಗಳು ಏನು ಕೆಲಸಮಾಡಿದರು ಎನ್ನುವುದನ್ನು

ಈ ಒಂದು ಸ್ಪಷ್ಟ ನಿದರ್ಶನದಿಂದ ತಿಳಿದುಕೊಳ್ಳಬಹುದು ಇನ್ನೊಂದು ಅಂಶ ಹೇಳುತ್ತೇನೆ ನಾವು ಇಲ್ಲಿ ಟೀಕೆ ಮಾಡಿದರೆ ಸರಕಾರ ಈ ಟೀಕೆಯನ್ನು ಬಹಳ ಲಘುವಾಗಿ ತೆಗೆದುಕೊಳ್ಳುತ್ತದೆ. ಲಂಚ ಎಂದರೆ ಯಾವುದಾದರೂ ನಿರ್ದಿಷ್ಟವಾದ ವಿಷಯ ಹೇಳಲಿಲ್ಲ ಎಂದು ಹೇಳುತ್ತಾರೆ. ನಾನು ಒಂದು ವಿಚಾರ ಸರಕಾರದ ಮುಂದೆ ಹೇಳುತ್ತೇನೆ. ಯಾವ ಕಾನೂನನ್ನೂ ಕೂಡ ಲಕ್ಷ್ಯಮಾಡದೆ ಸರಕಾರ ಕೆಲಸಮಾಡುತ್ತಾ ಇದೆ ಎಂದು ಧಾರವಾಡದ ಉದಾಹರಣೆಯನ್ನು ಹೇಳುತ್ತೇನೆ ಮುಖ್ಯ ಮಂತ್ರಿಗಳಿಗೂ ಕೂಡ ಈ ಸಂಬಂಧವಾಗಿ ಒಂದು ಕಾಗದ ಬರೆದಿದ್ದೇನೆ. ಅದು ನನ್ನ ಸಂಬಂಧಿಕರಿಗೆ ಸಂಬಂಧಿಸಿದ್ದು; ಒಂದು ಸಣ್ಣ ವ್ಯವಹಾರ. ಪೋಲೀಸಿನವರು ಯಾವ ಒಂದು ಕಾರಣವೂ ಇಲ್ಲದೆ ಜನವರಿ ತಿಂಗಳು ೧೩ನೇ ತಾರೀಖಿನಿಂದ ೪೯ನೇ ಮೈಲಿಕಲ್ಲಿನ ಹತ್ತಿರ ರಿಸರ್ವ್ ಪೋಲಿಸ್‌ನವರನ್ನು ವಾಚ್‌ಗೆ ಹಾಕಿದ್ದಾರೆ. ಈವೊತ್ತು ಕೂಡ ಆ ವಾಚ್ ಇದೆ. ಇದಕ್ಕೆ ಆಗತಕ್ಕ ಖರ್ಚು ಯಾರು ವಹಿಸುತ್ತಾರೆ? ಯಾವ ಅಧಿಕಾರಿ ಯಾವ ಕಾನೂನಿನ ಪ್ರಕಾರ ಅಲ್ಲಿ ಪೋಲೀಸಿನವರನ್ನು ವಾಚ್ ಮಾಡಲಿಕ್ಕೆ ಹಾಕಿದೆ? ಈ ಮಾನ್ಯ ಸರಕಾರಕ್ಕೆ ಕಾಗದ ಬರೆದರೆ ವಿಚಾರಣೆ ಮಾಡಿದ್ದಾರೆಯೇ ಇಲ್ಲವೇ ಎನ್ನುವುದಕ್ಕೆ ಈವೊತ್ತಿನ ವರೆಗೂ ಉತ್ತರ ಬರಲಿಲ್ಲ. ಈವೊತ್ತಿನವರೆಗೂ ರಿಸರ್ವ್ ಪೋಲೀಸಿನವರು ಏನೋ ಅನಾಹುತ ನಡೆದಿದೆ ಎಂದು ಬೀದಿಯಲ್ಲಿ ರಾತ್ರಿ ಹಗಲು ಕಾಯುತ್ತಿದ್ದಾರೆ ಒಂದು ಕಡೆ ಕಾನೂನು ದುರುಪಯೋಗ ಮಾಡುತ್ತಿದ್ದೀರಿ. ಇನ್ನೊಂದು ಕಡೆ ಎಲ್ಲಿ ಕೆಲಸ ಮಾಡಬೇಕೋ ಅಲ್ಲಿ ಮಾಡದೆ ಇದ್ದಾರೆ. ಶಾಖ್ತ್ರಿಗಳು ಚಿಕ್ಕಮಗಳೂರು ವಿಚಾರ ಹೇಳಿದರು. ಘಟನೆ ನಡೆದ ದಿವಸದಲ್ಲಿ ನಾನು ಅಲ್ಲಿಗೆ ಹೋಗಿದ್ದೆ. ಪೋಲೀಸ್ ಡಿಪಾರ್ಟ್‌ಮೆಂಟ್ ಆನ್ಯುಯಲ್ ರಿಪೋರ್ಟ್‌ದಲ್ಲಿಯೂ ಕೂಡ ಪ್ರಸ್ತಾಪ ಮಾಡಿದ್ದಾರೆ. ೧೭-೧೮ನೇ ತಾರೀಖು ಹೋಟೆಲ್ ಸುಟ್ಟು ಹೊಕಿದಾಗ ಪೋಲೀಸಿನವರು ಯಾವ ವಿಧವಾದ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇದಾದ ಎರಡು ದಿವಸಗಳಾದ ನಂತರ ಬೆಳಿಗ್ಗೆ ರಸ್ತೆಯಲ್ಲಿ ಹೋಗುವ ಗೌರವಸ್ಥರನ್ನು ಹಿಡಿದು ಲಾಕಪ್‌ನಲ್ಲಿ ಹಾಕಿ ಕೋರ್ಟಿನಲ್ಲಿ ಹಾಜರು ಮಾಡಿದ್ದು ಅಷ್ಟೇ ಅಲ್ಲ ಪತ್ರಿಕಾ ಪ್ರತಿನಿಧಿ ಬ್ಯಾಂಕಿನಿಂದ ೯೦೦ ರೂಪಾಯಿ ಸಾಲ, ಕ್ಯಾಮೆರಾ ತೆಗೆದುಕೊಂಡು ಬರುತ್ತಿದ್ದಾಗ ಆತನನ್ನು ಹೊಡೆದು ಕ್ಯಾಮೆರಾವನ್ನು ನುಚ್ಚುನೂರು ಮಾಡಿದರು. ಆ ಸಬ್ ಇನ್‌ಸ್ಪೆಕ್ಟರ್ ಅಲ್ಲಿಂದ ವರ್ಗ ಆಗಿದ್ದಾರೆ ಎಂದು ಕೇಳಿದೆ. ಸರಕಾರಕ್ಕೂ ಕೂಡ ನಿಜವೇ ಇಲ್ಲವೇ ಎನ್ನುವುದನ್ನೂ ಕೂಡ ತಿಳಿಸುವುದಿಲ್ಲ. ಸರಕಾರಕ್ಕೂ ಮೋಸ ಮಾಡುತ್ತಾರೆ, ಜನರಿಗೂ ಮೋಸ ಮಾಡುತ್ತಾರೆ. ಅಧಿಕಾರಿಗಳಿಗೆ ಈ ದಿಟ್ಟತನ ಯಾಕೆ ಬಂದಿದೆ ಏನು, ಎನ್ನುವುದನ್ನು ಸರಕಾರ ವಿಚಾರ ಮಾಡದೇ ಹೋದ ಪಕ್ಷದಲ್ಲಿ ಜನಗಳಿಗೆ ಬಹಳ ತೊಂದರೆ ಆಗುತ್ತದೆ.

"During the year the State Police were able to detect by their sustained efforts 22 cases relating to printing and circulation of counterfeit notes and coins and these are under investigation. Four out of the 22 cases of the previous year which were taken to the court ended in conviction."

4-30 P. M

ಸರ್ಕಾರದವರು ಇವತ್ತು ವಿಚಾರಣೆ ಮಾಡಿದ್ದಾರೆಯೇ, ೨೧ ಕೇಸುಗಳು ಅಕ್ವಿಟ್ ಆಗಿದೆಯಲ್ಲಾ ಇದಕ್ಕೆ ಕಾರಣವೇನು? ಇನ್‌ವೆಸ್ಟಿಗೇಷನ್ ಸರಿಯಾಗಿ ಇರಲಿಲ್ಲವೆ? ಪ್ರಾಸಿಕ್ಯೂಷನ್ ಸರಿಯಾಗಿ ನಡೆಸಲಿಲ್ಲವೇ? ಇದನ್ನು ವಿಮರ್ಶೆ ಮಾಡಿದ್ದಾರೆಯೇ ಎಂದು ಕೇಳುತ್ತೇನೆ. ಯಾವ ಅಡ್ಡಿ ಆತಂಕವೂ ಇಲ್ಲದೇ ಅವರೇ ಸರ್ಕಾರ ನಡೆಸತಕ್ಕ ಪರಿಸ್ಥಿತಿ ಇದ್ದಾಗಲೂ ಕೂಡ ಯಾರು ನೋಡಿದರು? ಇದು ಸರಿಯೋ ತಪ್ಪೋ ಗೊತ್ತಿಲ್ಲ, ಈ ಸಭೆಯಲ್ಲಿ ಪ್ರತಿಯೊಬ್ಬರೂ ತಮ್ಮ ಮೇಲೆ ಆಪಾದನೆ ಮಾಡಿದಾಗ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬ ವಿಚಾರವಾಗಿ ಚಕಾರ ಕೂಡ ಉತ್ತರ ರೂಪವಾಗಿ ಕೊಡಲಿಲ್ಲ. ಸರ್ಕಾರದ ಅಧಿಕಾರಿಗಳ ಜೊತೆಯಲ್ಲಿ ತಾವೂ ಸೇರಿಕೊಂಡು ಹೋಗುತ್ತಾ ಇರಬೇಕೆಂಬ ಅಭಿಪ್ರಾಯ ಈ ದಿವಸ ಬರುತ್ತಾ ಇದೆ. ಇನ್ನು ಸರ್ವೀಸಸ್ ಬಗ್ಗೆ ಹೇಳುವುದಾದರೆ ೬೫ ರಿಂದ ೬೯ರವರೆಗೂ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಯಾವ ವಿಧವಾದ ನೇಮಕ ಮಾಡಿಲ್ಲ, ಹೀಗಾಗಿ ಸುಮಾರು ೭ ಸಾವಿರ ಜನ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ತೆಗೆದುಕೊಂಡಿವೆ ಎಂದು ಒಂದು ರಿಪೋರ್ಟ್‌ನಲ್ಲಿ ಹೇಳಿದ್ದೀರಿ. ಇದರಿಂದ ಷೆಡ್ಯೂಲ್ ಕ್ಯಾಸ್ಟ್‌ನ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ರಿಜರ್ವೇಷನ್ ಏನು ಮಾಡಿದ್ದೀರಿ? ಅವರಿಗೆ ಬಹಳ ಅನ್ಯಾಯವಾಗುತ್ತದೆ. ೩೩ ಪರ್ಸೆಂಟ್ ಅಂತ ಏನಿದೆ ಇದು ಬರೀ ಸೆಲೆಕ್ಷನ್‌ನಲ್ಲಿ ಇದೆಯೇ? ಕೆಲಸ ಮಾಡುವಾಗ ಇದು ಅಪರೇಷನ್‌ಗೆ ಬರುತ್ತಿಲ್ಲ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ೧೦೦ಜನ ಸೆಲೆಕ್ಟ್ ಆದರೆ ಅವರಿಗೆ ಕೆಲಸ ಸಿಕ್ಕುತ್ತದೆ ಎಂಬ ಭರವಸೆಯೂ ಕೂಡ ಇಲ್ಲ. ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ೧೮ ಪರ್ಸೆಂಟ್

(ಶ್ರೀ ಕೆ. ಹೆಚ್. ರಂಗನಾಥ್)

ರಿಸರ್ವೇಷನ್ ಇದೆ. ಯಾರಾದರೂ ಮೆರಿಟ್‌ನಲ್ಲಿ ಬಂದರೂ ಕೂಡ ಅದನ್ನೂ ರಿಸರ್ವೇಷನ್‌ನಲ್ಲೇ ಹಾಕುವುದರಿಂದ ಆ ನಂಬರು ಕಮ್ಮಿಯಾಗುತ್ತದೆ, ಈ ಬಗ್ಗೆ ಕೂಡ ವಿಚಾರ ಮಾಡಬೇಕು, ಪುನರ್ವಿಮರ್ಶೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಜೈಲಿನ ಬಗ್ಗೆ ಒಂದು ಮಾತು. ಅಲ್ಲಿ ಕೈಗಾರಿಕೆಗಳು ಬಹಳ ಸಮರ್ಪಕವಾಗಿ ನಡೆಯುತ್ತಾ ಇವೆ. ಇದಕ್ಕೆ ೮೬ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ, ಇದು ಬಹಳ ಕಡಿಮೆಯಾಗಿರತಕ್ಕ ಹಣ, ಇನ್ನೂ ಹೆಚ್ಚು ಹಣ ಕೊಟ್ಟು ಅವರಿಗೆ ಉದ್ಯೋಗದ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಜೈಲಿನಲ್ಲಿ ತಯಾರು ಮಾಡತಕ್ಕ ರತ್ನಕಂಬಳಿಗಳು ಬಹಳ ಹೆಸರುವಾಸಿಯಾಗುತ್ತಾ ಇವೆ. ಪ್ರಿಂಟಿಂಗ್ ಪ್ರೆಸ್ ಇದೆ. ಜೈಲಿನಲ್ಲಿರತಕ್ಕ ಖೈದಿಗಳು ಅಲ್ಲಿಂದ ಹೊರಗೆ ಬಂದ ಮೇಲೆ ಅವರಿಗೆ ಒಂದು ಸೂಕ್ತವಾದ ಉದ್ಯೋಗ ದೊರಕುವಂತಹ ವ್ಯವಸ್ಥೆಯನ್ನೂ ಕೂಡ ಮಾಡಬೇಕೆಂದು ಹೇಳುತ್ತೇನೆ.

ಲಂಚಕೋರತನ, ಅದಕ್ಷತೆ ಇದನ್ನೆಲ್ಲಾ ಶೀಘ್ರವಾಗಿ ನಿರ್ಮೂಲ ಮಾಡಲು ಸರ್ಕಾರ ಪ್ರಯತ್ನ ಮಾಡಬೇಕು, ಇಲ್ಲದೇ ಇದ್ದರೆ ಜನತೆಯಲ್ಲಿ ಅಸಮಾಧಾನ ಹೆಚ್ಚಾಗಿ ಕ್ರಾಂತಿ ಉಂಟಾಗತಕ್ಕ ಪರಿಸ್ಥಿತಿ ಬರಬಹುದು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ : (ಶ್ರೀರಂಗಪಟ್ಟಣ) :

ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ನನಗೆ ಕಟ್ಟಪ್ಪಣೆ ಮಾಡಿದ್ದೀರಿ. ಈಗ ನಮ್ಮ ಮುಂದೆ ಇರತಕ್ಕ ಆಡಳಿತ ಮತ್ತು ಪೋಲೀಸ್ ಇಲಾಖೆಯ ಬಗ್ಗೆ ಕೇವಲ ೫ ನಿಮಿಷದಲ್ಲಿ ಮಾತನಾಡಬೇಕೆಂದು ಹೇಳುವುದು ಬಹಳ ವ್ಯಸನಕರವಾದುದು. ನನಗೆ ಅವಕಾಶ ಕೊಟ್ಟರೆ ೩ ದಿವಸ ಅಥವಾ ೩೬ ಗಂಟೆಗಳ ಕಾಲ ಮಾತನಾಡುವಷ್ಟು ವಿಷಯವನ್ನು ಸಂಗ್ರಹಿಸಿದ್ದೆ. ಕೆಲವು ವಿಷಯಗಳನ್ನು ಅಧ್ಯಕ್ಷರ ಗಮನಕ್ಕೆ ತರುತ್ತೇನೆ. ಸ್ವಾಮಿ ಮೈಸೂರು ರಾಜ್ಯ ಸುಮಾರು ನೂರಾರು ವರ್ಷಗಳಿಂದ ಆಡಳಿತದಲ್ಲಿ ಒಂದು ಕೀರ್ತಿ, ದಕ್ಷತೆಯನ್ನು ಹೊಂದಿದ ರಾಜ್ಯವಾಗಿತ್ತು. ಹಿಂದೆ ದಿವಾನ್‌ರವರು ಅಂತ ಇದ್ದರು, ಆಗಿದ್ದ ರಾಜರ ಆಡಳಿತದಲ್ಲಿ ಅವರು ತ್ರಿಕರಣ ಶುದ್ಧವಾಗಿ, ವಿಶಾಲ ಮನೋಭಾವವುಳ್ಳವರಾಗಿ ಈ ರಾಜ್ಯಕ್ಕೆ ಕೀರ್ತಿ ತಂದಿದ್ದರು ಅಧಿಕಾರಿಗಳೂ ಕೂಡ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಯಾವ ಪ್ರಜಾಪ್ರಭುತ್ವದ ಒಂದು ಬುನಾದಿಯು ಮೇಲೆ ಈ ರಾಜ್ಯಾಡಳಿತ ಪ್ರಾರಂಭವಾಯಿತೋ ಅಂದಿನಿಂದ ಇಂದಿನವರೆಗೂ ಈ ಸನ್ಮಾ ರಾಜ್ಯದ ಆಡಳಿತ, ಕೀರ್ತಿ ಅಧೋಗತಿಗೆ ಇಳಿದಿದೆ. ಚುನಾಯಿತ ಪ್ರತಿನಿಧಿಗಳ ಮಂತ್ರಿಗಳು ಇರುವಾಗ ಜನತೆಗೆ ಆಗಿರುವಂತಹ ಅನ್ಯಾಯದ ಬಗ್ಗೆ ಇದುವರೆಗೂ ನ್ಯಾಯವಾದ ವಿಚಾರಣೆಯಾಗಿಲ್ಲ. ಶ್ರೀಮಾನ್ ಪುಟ್ಟಸ್ವಾಮಿಯವರು ಮಾತನಾಡುವಾಗ ಚನ್ನಬಸಪ್ಪನವರ ಆಡಳಿತದ ಬಗ್ಗೆ ಹೇಳಿದರು. ಶ್ರೀಮಾನ್ ಚನ್ನಬಸಪ್ಪನವರು ಅವರ ಇಲಾಖೆಯ ಕಾರ್ಯಗಳ ಬಗ್ಗೆ ಮತ್ತು ಭ್ರಷ್ಟಾಚಾರ ಮಾಡತಕ್ಕ ಅಧಿಕಾರಿಗಳ ಬಗ್ಗೆ ದಿಟ್ಟವಾದ ನಿಲುವನ್ನು ತಾಳಿ ಕ್ರಮ ಕೈಕೊಂಡು ಒಳ್ಳೆಯ ಹೆಸರನ್ನು ಸಂಪಾದನೆ ಮಾಡಿದ್ದರು. ೯ ಗಿನ ಮುಖ್ಯಮಂತ್ರಿಗಳು ಉತ್ಸಾಹಶಾಲಿಗಳು, ಯುವಕರು. ವರ್ಗಾವರ್ಗಿ ಬಗ್ಗೆ ದೊಡ್ಡಬೋರೇಗೌಡನ ಕ್ಷೇತ್ರವಾಗಲಿ ಅಥವಾ ವಿರೋಧ ಪಕ್ಷದ ಕ್ಷೇತ್ರವಾಗಲಿ ಅಲ್ಲಿ ಯಾರಾದರೂ ಒಬ್ಬ ಒಳ್ಳೆಯ ಅಧಿಕಾರಿ ಇದ್ದರೆ ಅವನು ವರ್ಷದಲ್ಲಿ ೩-೪ ಸಾರಿ ಬೇರೆ ಬೇರೆ ಊರುಗಳಿಗೆ ಗಂಟು ಹೊರಲೇ ಬೇಕು. ವಿಧಿಯೇ ಇಲ್ಲ. ಆಳುವ ಪಕ್ಷದ ಸದಸ್ಯರು ಚುನಾಯಿತರಾಗಿ ಬಂದಿರುವ ಕಡೆ ಅವರಿಗೆ ಯಾವ ಅಧಿಕಾರಿ ಬೇಕೋ ಅವರನ್ನು ಕೇಳಿ, ನಿಮಗೆ ಇಂಥವನನ್ನು ಹಾಕುತ್ತೇವೆ ಅಂತ ಹೇಳಿ ಹಾಕುವಂತಹ ಪರಿಪಾಠ ನಾಚಿಗೇಡಿನ ಪ್ರಸಂಗ ಎಂದು ಹೇಳಬೇಕಾಗಿದೆ.

೩ ಮತ್ತು ೪ನೇ ತರಗತಿಯ ನೌಕರರು ಬಹಳ ಕಷ್ಟದಲ್ಲಿ ಇದ್ದಾರೆ, ಜೀವನ ಮಾಡುವುದೇ ಬಹಳ ಕಷ್ಟವಾಗಿದೆ. ಎರಡನೇ ತರಗತಿಯಿಂದ ಮೇಲ್ಪಟ್ಟು ಅಧಿಕಾರಿಗಳು ಯಾರಿದ್ದಾರೆ ಅವರ ವ್ಯವಹಾರವೆಲ್ಲಾ ಲಕ್ಷದ ಮೇಲ್ಪಟ್ಟೇ ಹೊರತು ಅದಕ್ಕಿಂತ ಕೆಳಗೆ ಇಲ್ಲವೇ ಇಲ್ಲ. ಅವರಿಗೆ ಹೆಚ್ಚು ಸೌಲಭ್ಯ, ಸಂಬಳ ಸಾರಿಗೆಗಳು ದೊರೆಯುತ್ತಾ ಇವೆಯೇ ಹೊರತು ೩-೪ನೇ ದರ್ಜೆಯ ವರ್ಗದ ನೌಕರರಿಗೆ ಹೆಚ್ಚು ಸೌಲಭ್ಯ ದೊರೆಯದೆ ಅವರು ಜೀವನ ಮಾಡುವುದೇ ಬಹಳ ದುಸ್ತರವಾದ ಪರಿಸ್ಥಿತಿ ಆಗಿದೆ. ಲಂಚ ನಿರೋಧ ಶಾಖೆಯವರು ಇದನ್ನು ರಾಮರಾಜ್ಯ ಮಾಡುತ್ತೇವೆ, ಧರ್ಮ ರಾಜ್ಯ ಮಾಡುತ್ತೇವೆ ಎಂದು ಹೇಳುತ್ತಾರೆ. ಇವತ್ತು ಎಲ್ಲಿ ನೋಡಿದರೂ ೫೦-೬೦ರೂಪಾಯಿ ಸಂಬಳ ತೆಗೆದುಕೊಳ್ಳುವವರನ್ನು ಹಿಡಿದು ಶಿಕ್ಷೆ ಮಾಡುತ್ತಾರೆಯೇ ಹೊರತು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕವರು ಯಾರನ್ನು ಹಿಡಿದು ಕಾರಾಗೃಹದಲ್ಲಿ ಇಟ್ಟಿದ್ದಾರೆ ಎಂದು ಕೇಳುತ್ತೇನೆ. ಬಡ ನೌಕರ ೨ ರೂಪಾಯಿ ಲಂಚ ತೆಗೆದುಕೊಂಡ ಅಂತ ಹೇಳಿ ಅವನನ್ನು ಹಿಡಿಯುವುದು ನಾಚಿಕೆಗೇಡು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಲೋಕಸೇವಾ ಆಯೋಗ ಮಾಡಿದ್ದಾರೆ. ಅದು ಕೆಲಸ ಯಾರಿಗೆ ಕೊಡುವುದು ಎಂದರೆ ತರ್ಡ್‌ಕ್ಲಾಸ್ ನಲ್ಲಿ ಪಾಸಾಗಿರುವವರಿಗೆ. ಮಂತ್ರಿಗಳಿಗೆ ಬೇಕಾದವರು, ದೊಡ್ಡ ಕೈಗಾರಿಕೆಗಳವರು. ಕಂಟ್ರಾಕ್ಟರರು ಮುಂತಾದವರು ಮಾಡಿದ್ದಾರೆ ಅವರ ಮಕ್ಕಳು, ಅಳಿಯಂದಿರು ಮುಂತಾದವರಿಗೆ ಮಾತ್ರ ಸ್ಥಾನಗಳು ದೊರೆಯುವುವು, ಯಾವ ಪ್ರಭಾವವೂ ಇಲ್ಲದಿರುವ ಇತರರಿಗೆ ಯಾವ ಉದ್ಯೋಗವೂ ಈ ಆಯೋಗದಲ್ಲಿ ಸಿಕ್ಕುವುದಿಲ್ಲ.

ಇನ್ನು ಪೋಲೀಸು ಇಲಾಖೆ. ಈಚೆಗೆ ಕಳತನಗಳು, ದುಷ್ಕೃತ್ಯಗಳು ಜಾಸ್ತಿಯಾಗಿವೆ. ಶ್ರೀರಂಗ ಪಟ್ಟಣದ ರಂಗನಾಥಸ್ವಾಮಿಯ ಚಿನ್ನದ ಪದಕ ಎರಡೂವರೆ ಲಕ್ಷ ರೂಪಾಯಿ ಬೆಲೆ ಬಾಳುವುದು ಕಳ್ಳತನವಾಗಿ ಎರಡೂವರೆ ವರ್ಷವಾಯ್ತು, ಇನ್ನೂ ಪತ್ತೆಯಾಗಿಲ್ಲ. ಪೋಲೀಸರ ದಕ್ಷತೆ ಹೇಗಿದೆ ಎಂಬುದು ಇದರಿಂದ ಗೊತ್ತಾಗುವುದು. ಪೋಲೀಸಿನವರಿಗೆ ಸಹಾಯ ದೊರೆಯದಿರುವ ಕಡೆ ಅವರಿಗೇನೂ ಆದಾಯ ಬಾರದಿರುವ ಕಡೆ ಕಳ್ಳತನವಾದರೆ ಬೇಗ ಪತ್ತೆಯಾಗುವುದು. ಅವರಿಗೇನಾದರೂ ಲಾಭವಾಗಿರುವ ಕಡೆ ಕಳ್ಳತನವಾಗಿದ್ದರೆ ಪತ್ತೆಯಾಗುವುದಿಲ್ಲ. ನಮ್ಮ ದೇಶದ ಪೋಲೀಸರು ದಕ್ಷರೆಂದು ಹಿಂದೆ ಹೋರದೇಶಗಳ ವರಲ್ಲಿ ಭಾವನೆ ಮೂಡಿತ್ತು. ಈಗ ಪೋಲೀಸಿನವರು ಸ್ವತರ್ಿಗಳಾಗಿ ಅವರೇ ಕಳ್ಳತನ ಮಾಡಿಸುತ್ತಿದ್ದಾರೆ. ಅದೇ ಟೌನಿನಲ್ಲಿ ಒಬ್ಬ ಕಂಟ್ರಾಕ್ಟರಿಗೆ ಸೇರಿದ ೫೦ ಸಾವಿರ ರೂಪಾಯಿಗಳ ನಗರ, ೫ ಸಾವಿರ ರೂಪಾಯಿ ನಗದು ಕಳ್ಳತನವಾಗಿ ಎರಡೂ ವರ್ಷಗಳಾದರೂ, ಪತ್ತೆಯಾಗಿಲ್ಲ. ಇಡೀ ಮಂಡ್ಯ ಜಿಲ್ಲೆ ಪೋಲೀಸಿನವರು ಅದರಲ್ಲಿ ಸಂಚು ಮಾಡಿಕೊಂಡಿರುವುದರಿಂದ ನಿಷ್ಠಾವಂತ ಅಧಿಕಾರಿಯೊಬ್ಬರು ಪತ್ತೆ ಮಾಡಲು ಬಂದಾಗ ಅದಕ್ಕೆ ಅವಕಾಶವಿಲ್ಲದಂತೆ. ಆತನನ್ನು ವರ್ಗ ಮಾಡಿದ್ದಾರೆ, ಆರು ತಿಂಗಳಲ್ಲಿ ಪತ್ತೆಮಾಡಲು ನಿರತನಾಗಿದ್ದ ಸಬ್ ಇನ್‌ಸ್ಪೆಕ್ಟರು ಪತ್ತೆಮಾಡುತ್ತಾನೆ ಎಂದು ಆತನನ್ನು ವರ್ಗ ಮಾಡಿರುತ್ತಾರೆ. ಈ ರೀತಿಯ ಆಡಳಿತ ನೋಡಿದರೆ ನಾಚಿಕೆಯಾಗುವುದು. ಇದರಿಂದ ನಿಷ್ಠಾವಂತರು ಸುಖವಾಗಿ ಬದುಕುವುದಕ್ಕೆ ಅವಕಾಶವಿಲ್ಲ. ರಾಜ್ಯದಲ್ಲಿ ಪುಂಡುಗಾರರಿಗೆ. ದರೋಡೆ ಮಾಡುವವರಿಗೆ ಅವಕಾಶವಿದೆಯೇ ಹೊರತು ದೇಶ ಪ್ರೇಮಿಗಳು ವವರಿಗೆ, ಮಾನವೀಯತೆ ಇರುವವರಿಗೆ ಬಾಳು ನಡೆಸಲು ಅವಕಾಶವಿಲ್ಲ. ಈ ರಾಜ್ಯದ ಪೋಲಿಸ್ ಇಲಾಖೆ ಕಮೀಷನ್ ಏಜೆಂಟಾಗಿ ಕೆಲಸ ಮಾಡುತ್ತಿದೆ. ಇದನ್ನು ನೋಡಿದರೆ ನಾಚಿಕೆಯಾಗುವುದು. ನಿಷ್ಠಾವಂತರು ಬದುಕುವುದಕ್ಕಾಗುವುದಿಲ್ಲ ಪುಂಡುಕಾರರ ದರೋಡೆಕಾರರು ಮುಂತಾದವರಿಗೆ ದೇಶದಲ್ಲಿ ಅವಕಾಶವಿದೆಯೇ ಹೊರತು ದೇಶ ಪ್ರೇಮಿಗಳಿಗೆ, ಮಾನವೀಯತೆ ಇರುವವರಿಗೆ ಬಾಳಲು ಅವಕಾಶವಿಲ್ಲ. ಹಿಂದೆ ಆಳರಸರ ಕಾಲದಲ್ಲಿದ್ದ ಪಾಳೆಯಗಾರರಿಗಿಂತ ಮುಂದೆ ಹೋಗಿದ್ದಾರೆ. ಮಳವಳ್ಳಿ ತಾಲ್ಲೂಕಿಲ್ಲಿ ಒಂದು ಹಾವು ಕಚ್ಚಿದ ಪ್ರಸಂಗ ಮತ್ತೊಂದು ನೇಣು ಹಾಕಿ ಕೊಂಡದ್ದು ಈ ಬಗ್ಗೆ ಸ್ಥಳೀಯ ಪೋಲೀಸ್ ಅಧಿಕಾರಿಗಳು ೨-೩ ಸಾವಿರ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಇನ್ನೊಂದು ಕಡೆ ಒಂದು ಸಾವಿರ ತೆಗೆದುಕೊಂಡರು ಕಳೆದ ಜನವರಿ ತಿಂಗಳಲ್ಲಿ ೩ ಸಾವಿರ ಕೊಡಬೇಕೆಂದು ಇಬ್ಬರನ್ನು ಪೋಲೀಸ್ ಠಾಣೆಗೆ ಹಿಡಿದುಕೊಂಡು ಹೋದರು. ಅವರು ಈ ಮನೆಯ ಸದಸ್ಯರ ಮರೆ ಹೊಕ್ಕಾಗ ಒಂದು ಸಾವಿರಕ್ಕೆ ತೀರ್ಮಾನ ಮಾಡಿದರು ಎಷ್ಟು ಮಟ್ಟಿಗೆ ಆಡಳಿತ ನಡೆಯುತ್ತಿದೆ ಎಂಬುದನ್ನು ನೋಡಬಹುದು.

ಬೆಂಗಳೂರು ನಗರದಲ್ಲಿ ಇರುವ ಬಂಡೆಗಳನ್ನು ಯಾರೋ ಒಬ್ಬರ ಅನುಕೂಲಕ್ಕಾಗಿ ಕಾರ್ಪೊರೇಷನ್ನಿನ ಅನುಮತಿ ಇಲ್ಲದೆ ಆಳುವ ವರ್ಷಕ್ಕೆ ಸಹಾಯ ಸಹಕಾರ ನೀಡುವ ವ್ಯಕ್ತಿಗೆ ಕೊಟ್ಟಿದ್ದಾರೆ ಇದು ಧರ್ಮವಲ್ಲ. ಕಾನೂನಿಗೆ ವಿರೋಧವೆಂದು ಕಾಣುತ್ತದೆ. ಹಾಗೆಯೇ ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ ವಸೂಲಾದ ಮನಗಂಜನೆ ತೆರಿಗೆಗೆ ರಿಯಾಯಿತಿ ತೋರಿಸಿರುವುದು ಸಾಧುವಾದುದಲ್ಲ. ಇಷ್ಟು ಹೇಳಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ವಾತನ್ನು ಮುಗಿಸುತ್ತೇನೆ.

† SRI J. P. BARWESH (SERAM):—Mr. Speaker Sir, Opposing these Demands which are before the House, I would like to say that murders dacoities and crimes are increasing, particularly in Gulbarga. These grave crimes, threats and dacoities have increased to such an extent that in no case the police have succeeded in recovering thelost property or detecting the person who has committed the offence. That apart people are afraid to go to the Police Stations to lodge complaints because money is extracted from them in almost all the Police Stations from the people who go to make complaints. If these malpractices are not checked, the Police will lose the respect they were commanding

(SRI J. P. SARWESH)

some time back. The Police are so much afraid of the Police that they do not go to the Police Station even when they have complaints to make.

I would like to bring to the notice of the House one instance. Recently one dacoity was committed in Sedam Taluk. I tell you no person was arrested. The Police Officers took a few persons to the Police Station, beat them and let them off after taking money from them. This corruption has increased in almost all the Departments

Even in the Tahsil Office, an ordinary peon will not put the stamp on a paper unless he is given Rs. 2. When big officers are taking bribes we cannot blame poor peons

Re cently we held a meeting of some important workers and we have decided at that meeting that we would first warn the officers who indulge in corruption. If they do not mend themselves, we have decid ed to collect some volunteers and march to the concerned Office. We ourselves will take part in that agitation. We will enter that Office, beat concerned officials or officers, slap them and confess in the Court that we beat and slapped them and take upon ourselves whatever punishment the Court gives we are prepared to undergo any hardship to eliminate corruption because the people are so much enraged again st these corrupt officers. Corruption is increasing daily.

We have got the Vigilance Department. The Department has got a big office and a big staff. Recently I tabled a question in this House regarding a Tahsildar who harassed an agriculturist. The Hon. Chief Minister promised in the House that he would see that an inquiry is conducted. in the matter. Accordingly he sent the seniormost officer of the Vigilance Commissioner's Office for enquiry. The Officer who condu cted the inquiry has given a discharge certificate to the Tahsildar On the basis of that, the Hon. Chief Minister wrote to me that no charge was proved against the Tahsildar. In the criminal case filed in the Munsiff's Court, Sedam, against the agriculturist by the Tahsildar, the Munsiff has passed strictures against the Tahsildar and remarked that he exceeded his powers and abused them in dealing with the agriculturist. But the Vigilance Commission comes to a decision differ ent from the one given by the Munsiff, a judicial officer We are convinc ed that the people would not be safe under the Viglance Commission as it is unable to bring corrupt officials to book and free the public from the harassment of those who practise bribery; the Vigilance Commission Department takes wrong decisions and comes to perverse conclusions with respect to corrupt officials with the result they go scot free and become a menace to society; there are many instances in which corrupt officers are protected by the Vigilance Commission,

At my instance, a complaint was sent to the Vigilance Commission in writing by a person regarding the final payment made by the Taluk Board in respect of one well which was dug. There was no water at all in the said well. The District Anti-Corruption Officer was deputed to investigate into the complaint. But that Officer, before coming to the spot, went to the B. D. O. The B. D. O. went to the Mulkad Village where the well was dug collected 50 people and saw that water was brought from the near by Kagne river and poured into the well. The Anti-Corruption Officer was thus hoodwinked. Not only that; the Officer was given two bags of jawar: and he went away without making further enquiry about the truth of the allegation.

when we bring to the notice of the Government that corrupt practices are going on, the corrupt officers and officials are protected by the Anti-Corruption Department in the Vigilance Commission. In this connection, I want to give a warning that if corruption is not checked, the peopal will be forced to adopt their own methods to check corruption, particularly in the Revenue Department and the Police Department where it is rampant. They do not work without taking bribe from the people. The Government must see that the officers work properly and honestly.

The Police Constables and Head Constables are paid very low pay Thier pay should be increased so that they may not indulge in corruption. with these few words, I close.

SRI MANIK RAO PATIL (Deputy Minister for Home):—Sir, I am very much grateful to all the members who have participated in the debate and expressed their satisfaction over the function of the Jail Department I do not like at this stage to go into details, as to how the department is steadily progressing year after year since the report on the present working of the department has already been placed on the Table of the House.

But, I would like to reply to some of the points which have been raised by the Hon. members during the course of the debate and through cut motions. One or two Members, Sri M. S. Krishnan and Sri M. Nagappa have pointed out that quality of the food provided in the Jails is not upto the mark. I would like to say to this House that it is far from truth In fact the quality of the food has considerably improved in the jails and they have been provided with food which contains nutrive value. Before serving the food to the prisoners, the Superintendent of the Jail take up inspection of the food and so also medical officer. After certification by these two officers the meals are provided to the inmates of the jails. Therefore I do not believe that there is any point in saying that the the food is not properly provided in the jails. Smt. Nagaratnamma and one or two members emphasisep for granting liberal remissions to the prisoners of the jails. At this

(SRI MANIK RAO PATIL)

stage I would like to state that such a provisions has been made in the Jail Mannual and according to that provision various categories of convicts enjoy remissions according to their category and I am happy to place before the House that this year the Standing Advisory Board which has been constituted for examining the cases of convicts has recommended 191 convicts for premature release and out of this 191 convicts the Government are pleased to release about 131 convicts So also in the Gandhi Centeary Year we have released about 502 prisoners. Apart from this because of Gandhi Centenary Amnesty Remission about 3328 convicts have enjoyed privilege of getting the benefits of this remission. I dount think that we are in anyway lagging behind other States in granting remissions. Smt. Nagaratnamma all though she is a hardliner whenever she criticises the Government she is very soft and kind lady. She wanted wholesale release of all prisioners. That, the Government cannot do considering the existing social conditions in the country. One more point was mentioned by Smt. Nagaratnamma. She expressed concern over the disparity of salary between the Superintendent of Jails and Superintendent of Police. I also share equally the feeli gs of the member. But I would like to say that this matter will be con idered at the appropriate time. Sri M. Nagappa questioned the derirability of shifting of the Gulbarga Jail. The Gulbara Central Jail was located in the heart of the city. Many people were feeling and it was represented thatnot it was not desirable to keep in the Jail heart of the city. Therefore, Governmet took a decision and shifted it outside the town. It is now in a beautiful building and it is one of the whole State.

Apart from this I do not think any other points have been made by the Hon. Members during the course of the debate. whether they have raised them or not, I assure the House that I have taken up a task to improve the jails to the satisfaction of the members because, we the congressmen were pleading the pre-independence days that jails should not treated as a place for unwanted persons but they must be places fit for human beings. I do not want to say anything more.

With these few words I express my thanks to all the members who have participated in the debate and expressed satisfaction over the working of the department.

With these remarks I request the Hon. Members to support my Demand.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳ ಮೇಲೆ ನಿನ್ನೆ ಮತ್ತು ಈ ಹೊತ್ತು ಚರ್ಚೆಯಾಗಿದೆ. ಅನೇಕ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ನಾನು ಅಧಿಕಾರ ವಹಿಸಿಕೊಂಡಮೇಲೆ ನನ್ನ ನೀತಿ, ಧ್ಯೇಯ, ದೊರಣೆ ಏನು ಎನ್ನುವುದನ್ನು ಅನೇಕಸಲ ಈ ಸಭೆಯಲ್ಲಿ ಹೇಳಿದ್ದೇನೆ ಮತ್ತು ಹೊರಗಡೆಯೂ ಕೂಡ ಅವಕಾಶ ಸಿಕ್ಕಿದಾಗಲೆಲ್ಲ ಹೇಳಿದ್ದೇನೆ. ಮುಖ್ಯ ಮಂತ್ರಿಯಾಗಿ ದೇಶದ ಆಡಳಿತ ಸೂತ್ರವನ್ನು ನಾನು ಮತ್ತು ನನ್ನ ಪಕ್ಷದವರು ಕೈಯಲ್ಲಿ ಹಿಡಿದುಕೊಂಡ್ಮೆ

ನಡೆಸುವ ಮುನ್ನ ದೇಶದ ಜನತೆಗೆ ಬೇಕಾಗಿದ್ದುದು ಸುಭದ್ರ ಸರ್ಕಾರ. ಏನು ಈ ಹೊತ್ತು ಅನೇಕ ರಾಜ್ಯಗಳಲ್ಲಿ ಇರುವಂಥ ಪರಿಸ್ಥಿತಿ, ಸ್ಥಿತಿಗತಿ ಇವುಗಳನ್ನು ನಾವು ಗಣನೆಗೆ ತೆಗೆದುಕೊಂಡರೆ ನೋಡಿದರೆ ಅನೇಕರು ಇಡೀ ತಮ್ಮ ಆಯುಷ್ಯವನ್ನೆ ರಾಜಕೀಯದಲ್ಲಿ ಕಳೆದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಕಷ್ಟು ದುಡಿದು ನಿವೃತ್ತರಾಗಿರುವಂಥ ಅನೇಕ ಮಹನೀಯರು ದೇಶಕ್ಕೆ ಒಂದು ಸುಭದ್ರ ಮತ್ತು ಒಳ್ಳೆಯ ಸರ್ಕಾರ ಕೊಟ್ಟರೆ ಸಾಕು ಎನ್ನುವಂಥ ಪರಿಸ್ಥಿತಿಯಲ್ಲಿದ್ದಾರೆ. What we want from our representatives is a good Government and clean administration. ಇದು ಬಹಳ ಮುಖ್ಯವಾದದು, ಈ ಹೊತ್ತು ಕೆಲಕೆಲವು ಕಡೆ ಗುಡ್ ಗವರ್ನಮೆಂಟ್ ಕ್ಲೀನ್ ಅಡ್ಮಿನಿಸ್ಟ್ರೇಷನ್ ಲಾ ಅಂಡ್ ಆರ್ಡರ್ ಬಹಳ ಪ್ರಿಯವಾದ ಪಸ್ತುವಾಗಿದೆ. ಅದಕ್ಕಾಗಿ ನಾನು ಅಧಿಕಾರ ಪಡೆಸಿದಮೇಲೆ ಆಡಳಿತದಲ್ಲಿ ಒಂದು ಹೊಸ ಜೈತನ್ಯ, ಹೊಸ ಉತ್ಸಾಹ ತರುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿದ್ದೇನೆ ಮತ್ತು ನಮ್ಮ ಆಡಳಿತದಲ್ಲಿ ಪ್ಯೂರಿಟಿ ಬರುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಅಷ್ಟರಮಟ್ಟಿಗೆ ಪ್ರಯತ್ನ ನಾವು ನಡೆಸುತ್ತಿದ್ದೇವೆ. ಆಡಳಿತ ಮಂದಗತಿಯಿಂದ ನಡೆಯುತ್ತಿದೆ, ಫೈಲುಗಳ ವಿಲೇವಾರಿ ಜಾಗ್ರತೆಯಾಗುತ್ತಿಲ್ಲ, ಕೆಲಸಕಾರ್ಯಗಳು ನಿಧಾನವಾಗಿ ಆಗುತ್ತಿವೆ ಎನ್ನುವ ಕೂಗು ಬಹಳ ದಿವಸಗಳಿಂದ ಆಡಳಿತದ ಬಗ್ಗೆ ಕೇಳಿಬರುತ್ತಿತ್ತು.

5-00 P M

ಅದಕ್ಕಾಗಿ Quick decision is the best decision ಎಂಬ ನೀತಿಗೆ ಅನುಸರಿಸಿ ವಿಲೇವಾರಿ ಅದಷ್ಟು ಜಾಗ್ರತೆ ಆಗುವುದಕ್ಕೆ ಎಷ್ಟರ ಮಟ್ಟಿಗೆ ಕಾರ್ಯಕ್ರಮ ತೆಗೆದುಕೊಳ್ಳಲು ಸಾಧ್ಯವಿದೆಯೋ ಅಷ್ಟು ಕಾರ್ಯಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ ನಾನು ಅಧಿಕಾರ ವಹಿಸಿಕೊಂಡಮೇಲೆ ಇವತ್ತು ಇರತಕ್ಕ ಆಡಳಿತ ಬಂದಿಲ್ಲ. ಇವತ್ತು ಇರತಕ್ಕ ಆಡಳಿತ ಮೊದಲಿನಿಂದಲೂ ಇರತಕ್ಕಂಥ ಆಡಳಿತ ವ್ಯವಸ್ಥೆಯಾಗಿದೆ. ಹಿಂದೆ ಇದ್ದ ಎಸ್ಟಾಬ್ಲಿಷಮೆಂಟ್ ಅದೇ ಇವತ್ತು ನಡೆಕೊಂಡು ಬರುತ್ತಾ ಇದೆ. ಅದೇ ಎಸ್ಟಾಬ್ಲಿಷಮೆಂಟ್‌ನಿಂದ ಇವತ್ತು ಎಷ್ಟು ಸಾಧ್ಯವಿದೆಯೋ ಅಷ್ಟು ಮಾಗ್ದಿಮಂ ಲಾಭ ಸಾಧನೆ ಮಾಡಿ ಅದರಿಂದ ಜನತೆಗೆ ಲಾಭ ಸಿಕ್ಕುವಂತೆ ವ್ಯವಸ್ಥೆ ಮಾಡುತ್ತಾ ಇದ್ದೇವೆ. ಇವತ್ತು ದೇಶದ ಸ್ಥಿತಿಗತಿ ಏನು ಇದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಬಹುಶಃ ಇದು ಆಜಿಟೇಶನ್ ಏಜ್—ಚಳುವಳಿ ಯುಗ ಇದ್ದ ಹಾಗೆ ಕಾಣುತ್ತದೆ. ಪ್ರತಿಯೊಂದು ಪ್ರಾತಿಗೆ ಚಳುವಳಿ, ಹರತಾಳ, ಮುಷ್ಕರ ಪ್ರತಿಭಟನೆ ಎ ಬುದನ್ನು ಒಂದಲ್ಲ ಒಂದು ದಿವಸ ಕೇಳತ್ತಾ ಇರುತ್ತೇವೆ. ಈ ಆಜಿಟೇಷನ್ ವಿಷದಲ್ಲೂ ಲಾ ಅಂಡ್ ಆರ್ಡರ್—ಶಾಂತಿ ಸುವ್ಯವಸ್ಥೆ—ಮೆಂಟೇನ್ ಮಾಡತಕ್ಕಂಥ ದೊಡ್ಡ ಜವಾಬ್ದಾರಿ ಆಡಳಿತ ನಡೆಸುತ್ತಿರುವವರ ಮೇಲೆ ಬಿದ್ದಿದೆ ಎಂದು ನನಗೆ ಅನಿಸುತ್ತದೆ. ನಾನು ಮುಖ್ಯ ಮುಂತ್ರಿಯಾಗಿ ಅನೇಕ ಸಲ ಹೇಳಿದ್ದೇನೆ. My first concern is to maintain law and order ಎಂದು ಯಾವ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಇರುವುದಿಲ್ಲವೋ ಅಂಥ ರಾಜ್ಯದಲ್ಲಿ ಹಿಂಸಾ ಕೃತ್ಯಗಳು ನಡೆಯುತ್ತವೆ, ಅಶಾಂತಿ ತಲೆಯೆತ್ತುತ್ತದೆ. ಮತ್ತು ಅಂತ್ಯದಲ್ಲಿ ದೇಶದ ಹಿತದೃಷ್ಟಿಯಿಂದ ಇವತಕ್ಕ ಕಾರ್ಯಗಳಿಗೆ ಆಡ್ಡಿ ಆತಂಕ ಉಂಟಾಗುತ್ತದೆ. ನಾವು ಸರಿಯಾಗಿ ರಾಜ್ಯಭಾರ ನಡೆಸುತ್ತಿದ್ದೆವೆಯೋ ಇಲ್ಲವೋ ಎನ್ನುವದಕ್ಕೆ ಇದು ಅಳತೆಗೋಲು ಆಗಿದೆ. ರಾಜ್ಯದಲ್ಲಿ ಪರಿಸ್ಥಿತಿ ಹೇಗೆ ಇದೆ, ಲಾ ಅಂಡ್ ಆರ್ಡರ್ ಹೇಗೆ ಇದೆ ಎನ್ನುವುದು ಅದನ್ನು ತಿಳಿಸತಕ್ಕಂಥಾ-ದ್ದಾಗಿದೆ ಈ ಲೆಕ್ಕದಿಂದ ನಾನು ಮುಖ್ಯಮಂತ್ರಿಯಾದ ಮೇಲೆ ಈ ವಿಚಾರದಲ್ಲಿ ನಾನು ಹೆಚ್ಚಾಗಿ ಪ್ರಯತ್ನ ಮಾಡುತ್ತಿದ್ದೆನೆ. ಮತ್ತು ಆಡಳಿತದಲ್ಲಿ ಬಹುಮಟ್ಟಿಗೆ ಸುಧಾರಣೆಯಾಗುವುದಕ್ಕೆ ಪ್ರಯತ್ನ ಮಾಡುತ್ತಿದ್ದೆನೆ. ಕಳೆದ ಎರಡು ವರ್ಷದಲ್ಲಿ ಬಹುಮಟ್ಟಿಗೆ ಸುಧಾರಣೆಯಾಗಿದೆ. ಮೊದಲು ಏನೂ ಇರಲಿಲ್ಲ ಎಂದು ಮಾತನಾಡುವುದು ಅಲ್ಲ ಈ ಆಡಳಿತವನ್ನು ನಾನು ಇನ್‌ಹೆರಿಟ್ ಮಾಡಿದ್ದೇನೆ. ಅದು ತಕ್ಷಣ ಬದಲಾವಣೆ-ಯಾಗುತ್ತದೆ ಎಂದು ಅಲ್ಲ. ಇರತಕ್ಕಂಥ ಪರಿಸ್ಥಿತಿಯಲ್ಲಿ ಆಡಳಿತ ಸುಧಾರಣೆ ನಡೆಯಬೇಕು ಎನ್ನುವ ದೃಷ್ಟಿಯಿಂದ ಸಂಕ್ಷಿಪ್ತವಾಗಿ ಇದನ್ನು ಸಭೆಯ ಮುಂದೆ ಇಡುತ್ತೇನೆ. ಆಡಳಿತದಲ್ಲಿ ಬಹುಮಟ್ಟಿಗೆ ನಿಧಾನ ವಾಗುತ್ತದೆ, ಕೆಲಸ ಚೆನ್ನಾಗಿ ಚುರುಕಾಗಿ ನಡೆಯುವುದಿಲ್ಲ, ಇದನ್ನು ನಿವಾರಣೆ ಮಾಡಿ ಆಡಳಿತ ಕೆಲಸ ಕಾರ್ಯಗಳು ತೀವ್ರ ಗತಿಯಿಂದ ನಡೆಯಬೇಕು ಎಂಬ ಉದ್ದೇಶದಿಂದ ಇವತ್ತು ಸೆಕ್ರೆಟೇರಿಯೆಟ್‌ನಲ್ಲಿ ಬಹಳಷ್ಟು ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆ. ಅನೇಕ ಫೈಲುಗಳು ಅಂಡರ್ ಸೆಕ್ರಟರಿ, ಡೆಪ್ಯೂಟಿ ಸೆಕ್ರೆಟರಿ ಲೆವೆಲ್ಲಿನಲ್ಲಿ ತೀರ್ಮಾನವಾಗುತ್ತವೆ ಮಂತ್ರಿಗಳಿಗೆ ಕೆಲವೇ ಫೈಲ್ಸ್ ಬರುವಂತೆ ವ್ಯವಸ್ಥೆ ಮಾಡಿ-ದ್ದೇವೆ. ಅದಕ್ಕಾಗಿ ಈಗ ಸೆಕ್ರೆಟೇರಿಯಟ್‌ನಲ್ಲಿ ಬಹುಮಟ್ಟಿಗೆ ಕೆಲಸ ಕಾರ್ಯಗಳು ಚುರುಕಾಗಿ ನಡೆಯು-ತ್ತಿರುವ ವಾತಾವರಣ ಕಾಣುತ್ತಿದೆ. ಅಲ್ಲದೆ ಟಾಪ್ ಹೇವಿ ಆಡ್ಮಿನಿಸ್ಟ್ರೇಷನ್ ಆಗುತ್ತಿದೆ, ಸಿಕ್ಕಾಪಟ್ಟೆ ಆಫೀಸರ್ಸ್ ಅಪಾಯಿಂಟಮೆಂಟ್ ಮಾಡುತ್ತಾರೆ ಎಂಬ ವಿಚಾರ ಇತ್ತು. ಇಂದು ನಾವು ನೋಡುತ್ತೇವೆ ಲೋಕಲ್ ಕ್ಯಾಂಡಿಡೇಟ್ಸಿನ ೭೦೦ ಅಪಾಯಿಂಟಮೆಂಟ್ ಆಗಿದೆ. ಟಾಪ್ ಹೇವಿ ಆಡ್ಮಿನಿಸ್ಟ್ರೇಷನ್‌ಮಾತ್ರ ಇದರ ಮೇಲೆ ದುಡ್ಡು ಸುರಿದರೆ ಡೆವಲಪ್ಮೆಂಟ್ ಕಾರ್ಯಗಳಿಗೆ ದುಡ್ಡು ಉಳಿಯುವುದಿಲ್ಲ. ಆಡ್ಮಿನಿಸ್ಟ್ರೇಷನ್ನಿನಲ್ಲಿ ಎಕನಮಿ

(ಶ್ರೀ ವೀರೇಂದ್ರ ಪಾಟೀಲ್)

ತರುವ ಉದ್ದೇಶದಿಂದ ಇವತ್ತು ಯಾರೇ ಆಗಲಿ ಪೋಸ್ಟ್ ಕ್ರಿಯೇಟ್ ಮಾಡುವ ಅಧಿಕಾರವಿಲ್ಲ ಬೇಕಾದರೆ ಪೋಸ್ಟ್ ಕ್ರಿಯೇಟ್ ಮಾಡುವುದು ಮತ್ತು ಸ್ಯಾಂಕ್ಷನ್ ಮಾಡುವ ಅಧಿಕಾರ ಬೇರೆಯವರಿಗೆ ಕೊಟ್ಟಿಲ್ಲ. ಪೋಸ್ಟ್‌ಕ್ರಿಯೇಟ್ ಮತ್ತು ಸ್ಯಾಂಕ್ಷನ್ ಮಾಡಬೇಕಾದರೆ ಅದಕ್ಕೆ ಒಂದು ಕಮಿಟಿ ಮಾಡಿದ್ದೇವೆ. ಆ ಕಮಿಟಿಯವರು ಶಿಫಾರಸ್ಸುಮಾಡಿ. ಅವರ ಶಿಫಾರಸ್ಸು ನಾನು ಮತ್ತು ಫೈನಾನ್ಸ್ ಮಿನಿಸ್ಟರ್ ಸಭೆಯಲ್ಲಿ ಸ್ಯಾಂಕ್ಷನ್ ಮಾಡಿದರೆ ಪೋಸ್ಟ್ ಕ್ರಿಯೇಟ್ ಆಗುತ್ತದೆ. ಮನಸ್ಸಿಗೆ ಬಂದಂತೆ ಪೋಸ್ಟ್ ಕ್ರಿಯೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಈ ಅಧಿಕಾರ ಬೇರೆಯವರ ಕೈಯಲ್ಲಿ ಇಟ್ಟಿಲ್ಲ. ಈ ಕಮಿಟಿ ಫ್ಯೂರ್ಲೀ ಆಫೀಶಿಯಲ್ ಕಮಿಟಿಯಾಗಿದೆ. ಇದಕ್ಕೆ ಚೀಫ್ ಸೆಕ್ರಟರಿಯವರ, ಚೇರಮನ್ ಆಗಿದ್ದಾರೆ. ಒಬ್ಬರು ಸೀನಿಯರ್ ಮೋಸ್ಟ್ ಆಫೀಸರ್ ಮತ್ತು ಫೈನಾನ್ಸ್ ಸೆಕ್ರಟರಿಯವರು ಈ ಕಮಿಟಿಯ ಮೆಂಬರರು ಆಗಿದ್ದಾರೆ. ಪ್ರತಿಯೊಂದು ಪೋಸ್ಟು ಅದು ಸೆಕೆಂಡ್ ಡಿವಿಜನ್ ಪೋಸ್ಟ ಇರಲಿ, ಕ್ಲಾರ್ಕ ಪೋಸ್ಟ ಇರಲಿ ಅದು ಡಿಪಾರ್ಟಮೆಂಟನ್ನು ಸುತ್ತಿಕೊಂಡು ಬರುವದಕ್ಕಿಂತ ಸಂಬಂಧಪಟ್ಟ ಅಧಿಕಾರಿಗಳು ಇದರಲ್ಲಿ ಇದ್ದು ಇದು ಅವಶ್ಯಕವಾಗಿದೆ ಎಂದು ನಿರ್ಣಯ ಮಾಡಿ ಕಳಿಸಿದರೆ, ಕಡೆಗೆ ನಾವು ನಿರ್ಣಯ ಮಾಡುತ್ತೇವೆ, ಸಾಮಾನ್ಯವಾಗಿ ಇದರಲ್ಲಿ ಯಾವ ಮುಚ್ಚುಮರೆ ಮಾಡುವುದಿಲ್ಲ ಈಗ ಸೆಕ್ರಟೇರಿಯೆಟ್‌ನಲ್ಲಿ, ನನಗೆ ಗೊತ್ತಿದೆ. ಬಹಳ ದಿವಸದಿಂದ ಫೈಲುಗಳು ಹಾಗೇ ಬಿದ್ದುಕೊಂಡು, ೬ ವರ್ಷ, ೭ ವರ್ಷ, ೧೦ ವರ್ಷ, ವಿಲೇವಾರಿ ಆಗದೇ ಇರತಕ್ಕಂಥವು ಗಳು ಇವೆ. ಇದಕ್ಕಾಗಿ ವಿಗರಸ್ಸ್ ಡ್ರೈವ್ ಕ್ರಮ ತೆಗೆದುಕೊಂಡಿದ್ದೇವೆ. ಹಳೇ ಫೈಲುಗಳ ವಿಲೇವಾರಿ ಮಾಡುವುದಕ್ಕೆ ಇಂಥ ಒಂದು ವಿಗರಸ್ ಡ್ರೈವ್ ತರಹ ಕ್ರಮ ತೆಗೆದುಕೊಂಡಿದ್ದೇವೆ. ಪ್ರತಿಯೊಂದು ಡಿಪಾರ್ಟ್‌ಮೆಂಟುಗಳಲ್ಲಿ ೬ ತಿಂಗಳ ಮೇಲೆ ಎಷ್ಟು ಫೈಲುಗಳಿವೆ, ಒಂದು ವರ್ಷದ ಮೇಲೆ ಎಷ್ಟು ಇವೆ, ಎರಡು ವರ್ಷದ ಮೇಲಿನವು ಎಷ್ಟು ಆರು ವರ್ಷದಮೆಲಿನವು ಎಷ್ಟು ಇವೆ ಎಂದು ಒಂದು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಪ್ರೋ ಫಾರ್ಮಾ ತಯಾರು ಮಾಡಿ ಕಳಿಸಿದೆ. ಹಳೇ ಕೇಸುಗಳ ವಿಲೇವಾರಿ ಮಾಡಲು ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ಬಹುಪಾಲಿಗೆ ಯಶ ಸಿಕ್ಕುತ್ತಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಸೆಕ್ರಟೇರಿಯೆಟ್‌ನಲ್ಲಿ ಇನ್‌ಸ್ಪೆಕ್ಷನ್ ಇಟ್ಟುಕೊಂಡಿದ್ದೇವೆ. ಇದನ್ನು ಪಾರಂಭ ಮಾಡಿದ್ದೇವೆ ಮುಂದೆ ಈ ಕೆಲಸ ಬೇರೆ ಡಿಪಾರ್ಟಮೆಂಟುಗಳಿಗೆ ತೆಗೆದುಕೊಂಡು ಹೋಗಬೇಕು ಎನ್ನುವ ವಿಚಾರ ಇಟ್ಟುಕೊಂಡಿದ್ದೇವೆ. ಪ್ರತಿಯೊಂದು ಡಿಪಾರ್ಟಮೆಂಟಿನ ಸೆಕ್ಷನ್ನಿನಲ್ಲಿ ಯಾವ ರೀತಿ ಕೆಲಸ ಆಗುತ್ತಿದೆ., ವರ್ಕ ಲೋಡ ಎಷ್ಟು ಇದೆ, ಯಾವ ರೀತಿ ಕೆಲಸ ಸರಿಯಾಗಿ ಮಾಡುತ್ತಾ ಇಲ್ಲ ಎನ್ನುವುದನ್ನು ಕಂಡು ಹಿಡಿಯಲು ಒಂದು ಇನ್‌ಸ್ಪೆಕ್ಷನ್ ಯುನಿಟ್ ಮಾಡಿಕೊಂಡು, ಈಗಾಗಲೇ ಈ ಯುನಿಟ್ಟಿನ ಕೆಲಸ ಕಾರ್ಯಗಳು ಪ್ರಾರಂಭ ವಾಗಿದೆ. ಸೆಕ್ರೆಟೇರಿಯೆಟ್ ಡಿಪಾರ್ಟಮೆಂಟಿನ ಎಂಟು ಸೆಕ್ಷನ್ ಈ ಗಾಗಲೇ ಚೆಕಿಂಗ್ ಮಾಡಿ, ಸೆಕ್ಷನ್ ಕೆಲಸ ಯಾವರೀತಿ ನಡೆಯುತ್ತಿದೆ. ದೋಷ ಏನು ಇದೆ, ಅದನ್ನು ನಿವಾರಣ ಹೇಗೆ ಮಾಡಬೇಕು ಎನ್ನುವ ಪ್ರಯತ್ನ ಮಾಡುತ್ತಿದೆ. ಅದೂ ಆಲ್ಲದೆ ವರ್ಕ ಸ್ಟಡಿವಿಂಗ್ ಎಂದು ಮಾಡಿದೆ. ಅನೇಕ ಗವರ್ಮೆಂಟ್ ಆಫೀಸುಗಳಲ್ಲಿ ಸ್ವಾಭಾವಿಕವಾಗಿ ಅಧಿಕಾರಿಗಳಿಗೆ ಸಾಕಷ್ಟು ಕೆಲಸ ಇಲ್ಲ, ಆಫೀಸಿಗೆ ಬರುತ್ತಾರೆ, ಕೂತು ಹೋಗುತ್ತಾರೆ ಎನ್ನುವ ಭಾವನೆ ಇದೆ. ಆದುದರಿಂದ ವರ್ಕ ಲೋಡ್ ಯಾವ ರೀತಿ ಫಿಕ್ಸ್ ಮಾಡಬೇಕು ಪ್ರೈಸೀಜರ್ ಸಿಂಪ್ಲಿಫೈ ಮಾಡಿ ತೀವ್ರ ಕೆಲಸ ಕಾರ್ಯಗಳು ನಡೆದು ಕೇಸುಗಳ ವಿಲೇವಾರಿ ಮಾಡಲು ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಇದು ಇದೆ. ವರ್ಕ ಸ್ಟಡಿ ಟೀಮ್ ಮತ್ತು ವರ್ಕ ಸ್ಟಡಿ ಯುನಿಟ್ ರಿಪೋರ್ಟಲ್ಲಿ ಕೆಲಸ ಕಾರ್ಯಗಳನ್ನು ಮಾಡಿ ಅನೇಕ ಆಫೀಸುಗಳಿಗೆ ವಿಜಿಟ್ ಕೊಟ್ಟು ಸ್ಟಡಿ ಮಾಡಿ, ಯಾವ ರೀತಿ ಕೆಲಸಕಾರ್ಯಗಳು ನಡೆಯುತ್ತಿವೆ. ಎಂಬುದನ್ನು ನೋಡಿಕೊಂಡು ಒಂದು ರಿಪೋರ್ಟು ಮಾಡುತ್ತಾ ಇದ್ದಾರೆ. ಅವರು ಕೊಟ್ಟಂಥ ಸಲಹೆಗಳನ್ನು ಅನುಸರಿಸಿ, ಕಾರ್ಯಗತ ಮಾಡಿ, ಎಫೀಸಿಯನ್ಸಿ ಹೆಚ್ಚು ಮಾಡುವುದಕ್ಕೆ ಸಾಕಷ್ಟು ಪ್ರಯತ್ನ ನಡೆಯುತ್ತಿದೆ.

ಇನ್ನು ಟ್ರೇನಿಂಗ್ ಸೆಕ್ಷನ್ ಒಂದನ್ನು ಪಾರಂಭ ಮಾಡಿದೆ. ಅನೇಕ ಸೆಕ್ಷನ್ನುಗಳಲ್ಲಿ ಕೆಲಸ ಕಾರ್ಯಗಳು ಆಗಬೇಕು. ನಮ್ಮ ಅಸಿಸ್ಟೆಂಟ್ಸ, ಸೆಕ್ಷನ್ ಆಫೀಸರ್ಸ್, ಅಸಿಸ್ಟೆಂಟ್ಸ, ಜ್ಯೂನಿಯರ್ ಅಸಿಸ್ಟೆಂಟ್ಸ ಇವರಿಗೆ ಸಾಕಷ್ಟುಮಟ್ಟಿಗೆ ಟ್ರೇನಿಂಗ್ ಪಡೆವ ಪ್ರೋಗ್ರಾಂ ಪ್ರಾರಂಭಮಾಡಿದ್ದೇವೆ. ಈ ಗಾಗಲೇ ನಾಲ್ಕು ಬ್ಯಾಚು ಗಳಿಗೆ ಟ್ರೇನಿಂಗ್ ಕೊಟ್ಟಿದ್ದೇವೆ. ಅನೇಕ ಸೆಕ್ಷನ್ ಆಫೀಸರ್ಸ, ಸೀನಿಯರ್ ಅಸಿಸ್ಟೆಂಟ್ಸ, ಜ್ಯೂನಿಯರ್ ಅಸಿಸ್ಟೆಂಟ್ಸ ಟ್ರೇನಿಂಗ್ ಪಡೆದಿದ್ದಾರೆ ಯಾವದೇ ಕೆಲಸ ಯಾವ ರೀತಿ ನಿರ್ವಹಿಸಬೇಕು ಯಾವ ರೀತಿ ಹೆಚ್ಚಿನ ಪ್ರಮಾಣದಲ್ಲಿ ಎಫೀಸಿಯನ್ಸಿ ಬೆಳೆಸಬೇಕು ಎನ್ನುವುದಕ್ಕೆ ಇದನ್ನು ಮಾಡಿದೆ. ಇದರಿಂದ ಎಫೀಸಿಯನ್ಸಿ ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ನಂಬಿದ್ದೇನೆ.

ಇನ್ನು ದರಖಾಸ್ತು ವಿಚಾರದಲ್ಲಿ ಅನೇಕ ಸಲ ಮಾನ್ಯ ಸದಸ್ಯರು ಈ ಮಾನ್ಯ ಸಭೆಯಲ್ಲಿ ಹೇಳಿದ್ದಾರೆ. ಎರಡು ಮೂರು ಎಕರೆ ಬಗ್ಗೆ ಅರ್ಜಿ ಹಿಡಿದುಕೊಂಡು ಬರುತ್ತಾರೆ. ಸರಕಾರದ ಹತ್ತಿರ ಎಷ್ಟು ಭೂಮಿ ಇದೆ, ಎಷ್ಟು ರಿಲೀಜ್ ಮಾಡಬಹುದು ಮತ್ತು ಭೂಮಿ ರಿಲೀಜ್ ಮಾಡಿ ಈ ಪ್ರಶ್ನೆ ಬಗೆಹರಿಸಬೇಕು ಎಂದು ಲ್ಯಾಂಡ್ ಗ್ರ್ಯಾಂಟ್ ರೂಲ್ಸನ್ನಲ್ಲಿಸಾಕಷ್ಟು ಮಾರ್ಪಾಟು ಮಾಡಿದ್ದೇವೆ. ಅಲ್ಲದೇ ಲ್ಯಾಂಡ್ ಗ್ರ್ಯಾಂಟ್ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಈ ರೀತಿ ಬಹುಶಃ ಎರಡು ಎರಡೂವರೆ ವರ್ಷಗಳಲ್ಲಿ ಭೂಮಿ ಎಷ್ಟು ಇದೆಯೋ ಅದನ್ನು ವಿಲೇವಾರಿ ಮಾಡಲು ಸ್ಕೋಪ್ ವಾಗುತ್ತದೆ. ದರಖಾಸ್ತು ಲ್ಯಾಂಡ್ ಬಗ್ಗೆ ಸಾವಿರಾರು ಅರ್ಜಿಗಳು ಬರುತ್ತವೆ. ವರ್ಕ ಲೋಡ್ ಸೆಕ್ರೆಟೇರಿಯೆಟಿನಲ್ಲಿ ಹೆಚ್ಚಾಗುತ್ತಿದೆ. ಇದನ್ನು ಕಡಿಮೆ ಮಾಡಲು ನಾವು ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ಡಿಸಿಪ್ಲಿನೆರಿ ಕೇಸುಗಳಲ್ಲಿ ಅನೇಕ ವೇಳೆ ಅಧಿಕಾರಿಗಳನ್ನು ಸಸ್ಪೆಂಡಿನಲ್ಲಿಡಬೇಕಾಗುತ್ತದೆ ಅಂಥ ಸಂದರ್ಭದಲ್ಲಿ ಆ ಕೇಸುಗಳನ್ನು ಬೇಗ ಇತ್ಯರ್ಥ ಮಾಡದಿದ್ದರೆ ಅದರಲ್ಲಿ ಇನ್‌ವಾಲ್ವ್ ಆದ ಅಧಿಕಾರಿಯ ಮನಸ್ಸಿನ ಸೈಕಲಾಜಿಕಲ್ ಎಫೆಕ್ಟ್ ಏನೆಂಬುದನ್ನು ನಾವು ನೋಡಬೇಕಾದ್ದು ಮುಖ್ಯ. ಮತ್ತು ಅಂಥ ಕೇಸುಗಳನ್ನು ಬೇಗ ಇತ್ಯರ್ಥ ಮಾಡದೆ ವರ್ಷಾನುಗಟ್ಟಲೆ ನೆನೆಗುದಿಗೆ ಬೀಳುವುದಕ್ಕೆ ಅವಕಾಶವಾದರೆ ಆಗ ಅಂಥ ಕೇಸುಗಳನ್ನು ಹಾಕುವುದರಲ್ಲಿದ್ದ ಬಿಗಿ ಹೋಗಿಬಿಡುತ್ತಿದೆ. ಇತ್ತ ಆಲ್ಲಿ ಸರ್ಕಾರದವರ ಕೆಲಸ ಕಾರ್ಯಗಳು ನಡೆಯುವುದಕ್ಕೂ ಒಹಳ ತ್ರಾಸಾಗುತ್ತದೆ. ಆದ್ದರಿಂದ ಆ ಕೇಸುಗಳನ್ನು ಬೇಗ ಇತ್ಯರ್ಥಮಾಡುವಂತೆ ತಿಳುವಳಿಕೆಯನ್ನು ಕೊಡಲಾಗಿದೆ. ಆಗಾಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿಕೊಂಡು ಆ ಕೇಸುಗಳ ಸ್ಟೇಜ್ ಏನೆಂಬುದನ್ನು ವಿಚಾರಿಸಿ ಅವುಗಳನ್ನು ಬೇಗ ಫೈಸಲ್ಮಾಡುವುದಕ್ಕೆ ಸೂಕ್ತ ತಿಳುವಳಿಕೆಯನ್ನು ಕೊಡಲಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಈ ಡಿಸಿಪ್ಲಿನೆರಿ ಕೇಸುಗಳನ್ನು ಬೇಗ ಬೇಗ ಇತ್ಯರ್ಥ ಮಾಡಿದರೆ ಆ ನೌಕರರಲ್ಲಿ ಒಂದು ಒಳ್ಳೆಯ ಭಾವನೆ ಬರುವುದಕ್ಕೆ ಅವಕಾಶವಾಗುತ್ತದೆಂಬುದು ತಪ್ಪು ಅಭಿಪ್ರಾಯವೇ ?

ಶ್ರೀ ವೀರೇಂದ್ರ ಪಾಟೀಲ್:—ವಿಚಾರಣೆಯನ್ನು ಆದಷ್ಟೂ ಬೇಗ ಮುಗಿಸಬೇಕೆಂದು ಸರ್ಕಾರದವರ ಉದ್ದೇಶ. ಹಾಗೆ ಇತ್ಯರ್ಥ ಮಾಡದಿದ್ದರೆ ಕೇಸಿನಲ್ಲಿ ಏನೂ ಹುರುಳೇ ಇರುವುದಿಲ್ಲ. ಆದ್ದರಿಂದ ಈಗ ಈ ಕೇಸುಗಳ ಬಗ್ಗೆಯೂ ಪೀರಿಯಾಡಿಕಲ್ ರಿಪೋರ್ಟುಗಳನ್ನು ತರಿಸಿಕೊಳ್ಳುತ್ತಿದ್ದೇವೆ. ಆದ್ದರಿಂದ ನಮಗೆ ಯಾವ ಯಾವ ಕೇಸು ಎಷ್ಟೆಷ್ಟು ದಿನಗಳಿಂದ ಪೆಂಡಿಂಗ್ ನಿಂತಿದೆ–ಅದರಲ್ಲಿ ಆರು ತಿಂಗಳ ಡಿಲೆ ಆಗಿರತಕ್ಕದ್ದು ಎಷ್ಟು, ಒಂದು ವರ್ಷ ಕಾಲ ಡಿಲೆ ಆಗಿರುವುದೆಷ್ಟು, ಹೀಗೆ ಸ್ಟೇಟ್‌ಮೆಂಟನ್ನು ತರಿಸಿ ವಿನಾ ಕಾರಣ ನಿಧಾನವಾಗಿದ್ದ ಕಡೆ ಅಧಿಕಾರಿಗಳ ಎಕ್ಸ್‌ಪ್ಲನೇಷನ್ ಕೂಡ ಕೇಳಲಾಗಿದೆ. ಹೀಗೆ ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಎಲ್ಲಾ ವಿಚಾರಗಳನ್ನೂ ಪೂರ್ತಿ ಮಾಡಲಾಗುತ್ತಿದೆ. ಇಂಥ ಒಂದು ವ್ಯವಸ್ಥೆಯಿಂದ ಈಗ ಈ ಕೇಸುಗಳು ಬೇಗ ಇತ್ಯರ್ಥವಾಗುವುದಕ್ಕೆ ಅವಕಾಶವಾಗಿದೆ. ನಾನು ಇಷ್ಟೆಲ್ಲವನ್ನೂ ಹೇಳಿದ ಮೇಲೆ ಈ ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಕರಪ್ಷನ್ ಇಲ್ಲ, ಇನ್ನೆಫಿಷಿಯೆನ್ಸಿ ಇಲ್ಲ ಎಂದು ಹೇಳುತ್ತಿಲ್ಲ. ಯಾರು ಇನ್ನೆಫಿಷಿಯೆಂಟ್ ಆಗಿದ್ದಾರೆ, ಯಾರು ಕರಪ್ಟ್ ಆಗಿದ್ದಾರೆ. ಅಂಥವರನ್ನು ಕಾನೂನು ರೀತಿಯಲ್ಲಿ ರಿಮೂವ್ ಮಾಡಿ ಆಲ್ಲಿಗೆ ಹೊಸ ರಕ್ತವನ್ನು ತುಂಬ ಬೇಕಾಗಿದೆ. ಸರಿಯಾಗಿ ಕೆಲಸ ಮಾಡುವುದಕ್ಕೆ ಆಗದಿರತಕ್ಕ ನೌಕರರು ಏನಿದ್ದಾರೆ ಅವರು ಸರ್ಕಾರದಮೇಲೆ ಹಾಗೂ ಸಮಾಜದ ಮೇಲೆ ಒಂದು ಹೆಚ್ಚಿನ ಹೊರೆಯಾಗಿರುತ್ತಾರೆ. ಆದ್ದರಿಂದ ೫೦ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರನ್ನು ಅವರು ಇನ್‌ಎಫಿಷಿಯೆಂಟ್ ಆಗಿದ್ದರೆ ಕೆಲಸದಿಂದ ಡಿಸ್‌ಪೆನ್ಸ್ ಮಾಡಲು ಒಂದು ಸ್ಕ್ರೀನಿಂಗ್ ಸಮಿತಿಯನ್ನು ನೇಮಕ ಮಾಡಲಾಗಿದೆ. ಆ ಸಮಿತಿಯವರು ಏನು ಶಿಫಾರ್ಸುಮಾಡಿದರೆ ಅದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆ. ಹೀಗೆ ಜನರಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿ ಒಂದು ಪ್ಯೂರಿಟಿ ಮತ್ತು ಕ್ಲೀನಿಂಗ್ ಮಾಡುವುದಕ್ಕೆ ಅವಕಾಶವಾಗುವಂತೆ ಒಂದು ಹೊಸಹಾದಿಯನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನಮಾಡಿದ್ದೇವೆ.

ಇನ್ನು ನಮ್ಮ ಸೆಕ್ರೆಟೇರಿಯೆಟ್‌ನಲ್ಲಿ ಬಹಳ ಹಳೇಕಾಲದಿಂದಲೂ ಇದ್ದ ಪ್ಯಾಸ್ಟರ್ನ್‌ಯಲ್ಲೇ ಈಗಲೂ ಇದ್ದ ಕಾರಣ ಆದರಿಂದ ಕೆಲಸಗಳು ಬಹಳ ನಿಧಾನವಾಗುತ್ತಿದ್ದವು. ಆದ್ದರಿಂದ ಅದನ್ನು ಈಗ ಸಂಪೂರ್ಣವಾಗಿ ರಿವೈಜ್ ಮಾಡಿ ಒಂದು ಹೊಸ ಪ್ಯಾಸ್ಟರ್ನ್‌ಯನ್ನು ಜಾರಿಗೆ ತರಲಾಗಿದೆ. ಇದರಿಂದ ಈಗ ಸೆಕ್ರೆಟೇರಿಯೆಟ್ಟಿನ ಕೆಲಸ ಕಾರ್ಯಗಳು ಬಹಳ ಚೆನ್ನಾಗಿ ಬೇಗ ಬೇಗ ನಡೆಯುತ್ತಿವೆ. ಇನ್ನು ರಿಟ್ ಅರ್ಜಿಗಳ ವಿಚಾರಕ್ಕೆ ಬಂದರೆ ಅವುಗಳ ಬಗ್ಗೆ ಇಲ್ಲಿಯವರೆಗೂ ಸಾಕಷ್ಟು ಗಮನ ಕೊಡದೆ ಇದ್ದುದರಿಂದ ನಮ್ಮ ಕೇಸುಗಳು ಚೆನ್ನಾಗಿದ್ದರೂ ಅವು ಕೆಡುವುದಕ್ಕೆ ಅವಕಾಶವಾಗಿತ್ತು. ಆದ್ದರಿಂದ ಅದಕ್ಕೆ ಒಬ್ಬ ಅಧಿಕಾರಿಯನ್ನು ನೇಮಕಮಾಡಿ ಅವರು ಆ ಕೇಸುಗಳ ವಿಚಾರದಲ್ಲಿ ಹೆಚ್ಚಿನ ಶ್ರದ್ಧೆ ಮತ್ತು ಎಚ್ಚರಿಕೆಗಳನ್ನು ವಹಿಸಿ ಕೇಸುಗಳನ್ನು ನಡೆಸುವುದಕ್ಕೆ

(ಶ್ರೀ ವೀರೇಂದ್ರ ಪಾಟೀಲ್)

ಮಾರ್ಗ ಮಾಡಿದ್ದೇವೆ. ಇದರಿಂದ ನಮಗೆ ಕೂಡಲೇ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ರಿಟ್ ಅರ್ಜಿಗಳು ಬಿದ್ದಿವೆ ಎಂಬುದು ಗೊತ್ತಾಗುತ್ತದೆ. ಈ ಒಂದು ವಿಧಾನದಿಂದ ಇತ್ತೀಚೆಗೆ ನಮ್ಮಲ್ಲಿ ಅನೇಕ ರಿಟ್ ಕೇಸುಗಳು ಇತ್ಯರ್ಥವಾಗಿವೆ. ಇದರಲ್ಲೂ ಒಂದು ಸುಧಾರಣೆಯನ್ನು ಜಾರಿಗೆ ತಂದಂತಾಗಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ:—ಸರ್ಕಾರದವರು ೧೦-೧೫ ವರ್ಷಗಳಾದರೂ ಸೀನಿಯಾರ್ಟಿ ಪಟ್ಟಿಯನ್ನೂ ಸರಿಯಾಗಿ ತಯಾರಿಸದೆ ಇದ್ದದ್ದು ಸರ್ಕಾರದವರ ತಪ್ಪಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್:—ಆ ಸೀನಿಯಾರ್ಟಿ ಪಟ್ಟಿ ವಿಚಾರಕ್ಕೆ ನಾನು ಅನಂತರ ಬರುತ್ತೇನೆ.

ನಾನಿನ್ನು ಪೋಲೀಸ್ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಬಹುತಃ ಯಾವಾಗ ಜನತೆಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಒಂದು ಸ್ವಾತಂತ್ರ್ಯದ ಅವಕಾಶವಿರಲಿಲ್ಲವೋ, ಆಗ ಯಾರಿಗೂ ಈ ಇಲಾಖೆಯ ಬಗ್ಗೆ ತಮ್ಮ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿರಲಿಲ್ಲ. ಆದರೆ ಹೀಗೆ ಟೀಕೆಟಿಪ್ಪಣಿಗಳನ್ನು ಮಾಡುವ ಅಧಿಕಾರ ಜನರಿಗೆ ಯಾವಾಗ ಬಂತೆಂದರೆ ಅದು ೧೯೪೭ ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ, ಪ್ರಜೆಗಳಿಗೆ ಒಂದು ಹೆಚ್ಚಿನ ಅಧಿಕಾರ ಸಿಕ್ಕಿತು. ಅಂದಿನಿಂದ ಜನತೆಗೆ ಸರ್ಕಾರದ ಬಗ್ಗೆ ಹಾಗೂ ಸರ್ಕಾರಿ ಇಲಾಖೆಗಳ ಬಗ್ಗೆ ಟೀಕೆಟಿಪ್ಪಣಿಗಳನ್ನು ಮಾಡುವುದಕ್ಕೆ ಅವಕಾಶವುಂಟಾಯಿತು. ರಾಜ್ಯಾಂಗ ರಚನೆಯಾದಮೇಲೆ ಆ ಒಂದು ಅಧಿಕಾರ ಜನರ ಕೈಸೇರಿತು. ಅಂದಿನಿಂದ ಇಂದಿನವರೆಗೂ ಈ ಪೋಲೀಸ್ ಇಲಾಖೆಯ ಬಗ್ಗೆ ಟೀಕೆಟಿಪ್ಪಣಿಗಳು ಬರುತ್ತಲೇ ಇವೆ, ಇವು ಯಾವಕಾಲದಲ್ಲೂ ನಿಂತಿದ್ದನ್ನು ನಾನು ನೋಡಿಲ್ಲ. ಹಿಂದೆ ಮಾನ್ಯ ಸಿದ್ದವೀರಪ್ಪನವರು ಇದೇ ಸಭೆಯಲ್ಲಿ ಗೃಹಸಚಿವರಾಗಿದ್ದ ಕಾಲಕ್ಕೆ ನಾನು ಈ ಸಭೆಯಲ್ಲಿ ಸದಸ್ಯನಾಗಿರಲಿಲ್ಲ. ಆದರೂ ತಗಲೂ ಇದೆ ಸಭೆಯಲ್ಲಿ ಟೀಕೆಟಿಪ್ಪಣಿಗಳಾಗಿವೆ ಕದರೆ ಅವುಗಳಿಗೆ ಸಾಧ್ಯವಾದಷ್ಟೂ ಅವಕಾಶವಿಲ್ಲದಂತೆ ಆಡಳಿತವನ್ನು ನಡೆಸಬೇಕೆಂಬುದು ನಮ್ಮ ಉದ್ದೇಶ. ಅಲ್ಲದೆ ದೇಶದಲ್ಲಿ ಜವಾಬ್ದಾರಿಯನ್ನು ಹೊತ್ತವೇಲೆ ಲಾ ಆಂಡ್ ಆರ್ಡರನ್ನು ಪಾಲಿಸಬೇಕು ಮತ್ತು ಸಮಾಜದ್ರೋಹಿಗಳನ್ನು ಹತ್ತಿಕ್ಕಬೇಕು. ಇದು ನಮ್ಮ ಜವಾಬ್ದಾರಿ. ಇಂಥ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಹಂಜಿ ಶಿವಣ್ಣ:—೧೯೪೭ ರಿಂದೀಚೆಗೆ ಪೋಲೀಸ್ ಇಲಾಖೆ ಬಹಳವಾಗಿ ಕೆಟ್ಟಿದೆಯಲ್ಲವೇ?

ಶ್ರೀ ವೀರೇಂದ್ರ ಪಾಟೀಲ್:—ಅದನ್ನು ನಾನು ಒಪ್ಪುವುದಿಲ್ಲ. ಈ ಪೋಲೀಸಿನವರ ಬಗ್ಗೆ ಆಗುತ್ತಿರುವ ಟೀಕೆಗಳೇನಿವೆ ಇವು ಹೊಸದೇನೂ ಅಲ್ಲ. ಇವು ಈ ದಿವಸ ಮಾಡತಕ್ಕ ಟೀಕೆಗಳೇನೂ ಅಲ್ಲ ಎಂಬುದನ್ನು ಹೇಳುತ್ತಿದ್ದೆ ಆದರೆ ನಾನು ಬಂದಮೇಲೆ ಇಲ್ಲಿ ಎಲ್ಲವೂ ಚೆನ್ನಾಗಿ ನಡೆಯುತ್ತಿದೆ ಎಂದು ವಾದಿಸುವುದಕ್ಕಾಗಿ ನಾನು ನಿಂತಿಲ್ಲ. ಇನ್ನೂ ನಾನು ಹೇಳಬೇಕೆಂದರೆ ನಮ್ಮ ಪೋಲೀಸ್ ಇಲಾಖೆಯ ಬಗ್ಗೆ ನಾವೆಲ್ಲರೂ ನಮ್ಮ ಅಭಿನಂದನೆಗಳನ್ನು ಅರ್ಪಿಸಬೇಕಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಂದೆ ಮಾತ್ರಕ್ಕೆ ಪೋಲೀಸ್ ಇಲಾಖೆಯಲ್ಲಿರತಕ್ಕವರೆಲ್ಲರೂ ಒಳ್ಳೆಯವರೇ ಆವರಲ್ಲಿ ಯಾರೂ ಕೆಟ್ಟವರಿಲ್ಲ ಆ ಇಲಾಖೆಯಲ್ಲಿ ದೋಷವೇ ಇಲ್ಲ ಎಂದು ನಾನು ಹೇಳುತ್ತಿಲ್ಲ. ಒಟ್ಟಾರೆ ಮಾನ್ಯ ಸದಸ್ಯರೆಲ್ಲರೂ ದಿನ ಬೆಳಗಾದರೆ ಬರತಕ್ಕ ಪತ್ರಿಕೆಗಳಲ್ಲಿ ತಾವು ಓದಿರಬೇಕು. ಪೋಲೀಸಿನವರು ಸಾರ್ವಜನಿಕ ಹಿತರಕ್ಷಣೆಗಾಗಿ ಎಷ್ಟೆಷ್ಟು ಕೆಲಸಮಾಡುತ್ತಿದ್ದಾರೆ ಎಂಬುದನ್ನು ನಮ್ಮ ರಾಜ್ಯದಲ್ಲಿ ಲಾ ಆಂಡ್ ಆರ್ಡರನ್ನು ಮೈನ್‌ಟೈನ್ ಮಾಡುತ್ತಿರುವಂತೆ ಬೇರೆಯೆಲ್ಲಿಯೂ ಮಾಡುತ್ತಿಲ್ಲ. ಆದಕ್ಕಾಗಿ ನಮ್ಮ ಪೋಲೀಸ್ ಸಿಬ್ಬಂದಿಯನ್ನು ನಾವು ಎಲ್ಲರೂ ಅಭಿನಂದಿಸಬೇಕಾಗಿದೆ. ನಾನು ಪತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಮ್ಮಲ್ಲಿ ದಿನ ಬೆಳಗಾದರೆ ನಡೆಯತಕ್ಕ ಕಳ್ಳತನಗಳ ಬಗ್ಗೆ.....

ಶ್ರೀ ಎಂ. ನಾಗಪ್ಪ :—ಆ ಅಭಿನಂದನೆಯನ್ನು ಸಲ್ಲಿಸುವುದಾದರೆ ಅದು ನಮ್ಮ ಜನರಿಗೆ ಸಲ್ಲಬೇಕು.

ಶ್ರೀ ವೀರೇಂದ್ರ ಪಾಟೀಲ್: ಶ್ರೀಮಾನ್ ನಾಗಪ್ಪನವರು ಹೇಳುತ್ತಿರುವುದನ್ನು ನಾನು ಡಿಸ್ಪ್ಯೂಟ್ ಮಾಡುವುದಕ್ಕೆ ಹೋಗುತ್ತಿಲ್ಲ. ಸ್ವಾಭಾವಿಕವಾಗಿ ಕರ್ನಾಟಕದವರು ಪೀಸ್ ಲವಿಂಗ್ ಜನರು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅನೇಕರು ಬೇರೆ ರಾಜ್ಯದಿಂದ ಬಂದಿರತಕ್ಕಂಥವರು ನಮ್ಮಲ್ಲಿರತಕ್ಕಂಥ

ಪೋಲೀಸ್ ಸಿಬ್ಬಂದಿ ನೋಡಿ ಇಷ್ಟೊಂದು ಸ್ವಲ್ಪ ಸಿಬ್ಬಂದಿಯಿಂದ ಲಾ ಅಂಡ್ ಆರ್ಡರನ್ನು ಯಾವರೀತಿ ಯಾಗಿ ಮೆಂಟೈನ್ ಮಾಡಿವ್ವಾರೆಂದು ಆಶ್ಚರ್ಯದಿಂದ ನನ್ನನ್ನು ಪ್ರಶ್ನಿಸಿದ್ದುಂಟು. ಈ ಸ್ವಲ್ಪ ಸಿಬ್ಬಂದಿ ಇರತಕ್ಕಂಥ ನಮ್ಮ ಮೈಸೂರು ರಾಜ್ಯದಲ್ಲಿ ಲಾ ಅಂಡ್ ಆರ್ಡರನ್ನು ಚೆನ್ನಾಗಿ ಬೆಳೆಸಿಕೊಂಡು ಬಂದಿದ್ದೇವೆ, ಅದರಂತೆಯೇ ಉಳಿಸಿಕೊಂಡು ಬಂದಿದ್ದೇವೆ. ಅನೇಕ ರಾಜ್ಯಗಳಲ್ಲಿ ಲಾ ಅಂಡ್ ಆರ್ಡರ್ ಪರಿಸ್ಥಿತಿ ಯಾವ ರೀತಿ ಇದೆಯೆಂದು ನಾವು ಹೋದ ವರ್ಷದಿಂದಲೂ ನೋಡುತ್ತಾ ಇದ್ದೇವೆ. ಇಡೀ ರಾಜ್ಯದಲ್ಲಿ ರೈಟರ್ಸಲ್ಲಿ ೫ ಸಲ ಮಾತ್ರ ಫೈರಿಂಗ್ ಆಗಿದೆ. ಈ ೫ ಸಲದ ಫೈರಿಂಗ್‌ನಲ್ಲಿ ೩ ಜನ ಮಾತ್ರ ಸತ್ತಿದ್ದಾರೆ ಅದಕ್ಕಿಂತ ಹೆಚ್ಚಿಗೆ ಏನೂ ಆಗಿಲ್ಲ ಅನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಶ್ರೀ ಪಿ. ವೆಂಕಟಗಿರಿಯಪ್ಪ:—ಅದರ ಬಗ್ಗೆ ಎಷ್ಟು ಕೇಳಿಕೊಂಡರೂ ಕೂಡ ಸಹ ನೀವು ಜುಡಿಷಿಯಲ್ ಎನ್‌ಕ್ವೈರಿ ಕಂಡಕ್ಟ್ ಮಾಡಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್: ಬರೀ ಫೈರಿಂಗ್ ಆದಾಗಲೆಲ್ಲಾ ಜುಡಿಷಿಯಲ್ ಎನ್‌ಕ್ವೈರಿ ಮಾಡಿಸುವುದಕ್ಕಾಗುವುದಿಲ್ಲ. ಈವೊತ್ತಿನ ದಿವಸ ಸರ್ಕಾರದಲ್ಲಿ ಏನಾದರೂ ಒಂದು ತಪ್ಪು ಕಂಡುಹಿಡಿಯುವುದಕ್ಕೆ ಅದರಲ್ಲಿ ದೋಷ ಕಂಡುಹಿಡಿಯುವುದಕ್ಕೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಅನ್ನುವುದು ಸರಿಯಲ್ಲ. ನಾನು ಇದರ ಬಗ್ಗೆ ಮೊದಲೇ ಹೇಳಿದೆ ಈವೊತ್ತು ಪ್ರತಿಯೊಂದಕ್ಕೂ ಎಜಿಟೇಷನ್ ಮಾಡುವ ಪರಿಸ್ಥಿತಿ ಯಲ್ಲಿದ್ದೇವೆ. ಮೊನ್ನೆ ರಾತ್ರಿ ನಾನು ಒಂದು ಡಿನ್ನರನ್ನು ಏರ್ಪಾಡು ಮಾಡಿದಾಗ ಅದಕ್ಕೆ ವೆಸ್ಟ್ ಬಂಗಾಳ ಮತ್ತು ಕೆಲ್ಕತ್ತಾದ ಕೆಲವು ಸದಸ್ಯರು ಬಂದಿದ್ದರು. ಅವರು ಹೇಳಿದರು ಆ ರಾಜ್ಯದಲ್ಲಿ ಅವರಿಗೆ Solitude ಮತ್ತು right of priviey ಇಲ್ಲ ಎಂದು ಹೇಳಿದರು. ಆಲ್ಲಿ ಹಾಯಾಗಿ ಮನೆಯಲ್ಲಿ ಇದ್ದು ಜೀವನ ಮಾಡುವುದಕ್ಕೆ ಅಥವಾ ಒಂದು ಅಂಗಡಿಗೆ ಹೋಗುವುದಕ್ಕೆ ಒಂದು ರಕ್ಷಣೆ ಇಲ್ಲ ಪರಿಸ್ಥಿತಿ ಬಹಳ ಕಷ್ಟ ವಾಗಿದೆ ಎನ್ನುವ ಮಾತನ್ನು ಹೇಳಿದರು. ದೇಶದಲ್ಲಿ ಈ ರೀತಿ ಪರಿಸ್ಥಿತಿ ಹದಗೆಡುತ್ತಾ ಇದೆ. ಲಾ ಅಂಡ್ ಆರ್ಡರ್ ಮೊದಲಿದ್ದಂತೆ ಇಲ್ಲ. ಎಜಿಟೇಷನ್ ಮಾಡುತ್ತಾ ಹೋದರೆ ಸರ್ಕಾರ ನಮ್ಮ ಮೇಲೆ ಕಣ್ಣು ತೆರೆಯುತ್ತದೆ ಎನ್ನುವ ಒಂದು ಟೆಂಡೆನ್ಸಿ ಉಂಟಾಗಿದೆ. ಈ ಒಂದು ಟೆಂಡೆನ್ಸಿಯಿಂದ ಲಾ ಅಂಡ್ ಆರ್ಡರ್ ಪ್ರಾಬ್ಲೆಮ್ ದಿನೇ ದಿನೇ ಬೆಳೆಯುತ್ತಾ ಇದೆ.

ಶ್ರೀ ಎಂ. ನಾಗಪ್ಪ:—ತಮಗೆ ರೆಪ್ರೆಸೆಂಟೇಷನ್ ಕೊಟ್ಟರೂ ನೋಡುವುದಿಲ್ಲ ಎಂದು ಹೇಳುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್: ನಾನು ಸ್ಟೇಟ್‌ಮೆಂಟ್ ಮಾಡುತ್ತಾ ಇದ್ದೇನೆಯೇ ಹೊರತ ಕಾಮೆಂಟ್ ಮಾಡುತ್ತಾ ಇಲ್ಲ. ಮಾತು ಮಾತಿಗೂ ಎಜಿಟೇಷನ್ ಆಗುತ್ತಾ ಇರುವುದರಿಂದ ಲಾ ಅಂಡ್ ಆರ್ಡರ್ ಪ್ರಾಬ್ಲೆಮ್ ಹೆಚ್ಚಾಗಿದೆ ಎಂದು ಈವೊತ್ತಿನ ದಿವಸ ಈ ಮಾನ್ಯ ಸಭೆಗೆ ಸ್ಪಷ್ಟವಾಗಿ ಹೇಳುತ್ತೇನೆ ಈವೊತ್ತು ನಾನು ಹೋಮ್ ಮಿನಿಸ್ಟರ್ ಆಗಿದ್ದರೂ, ಲಾಠಿ ಛಾರ್ಜು ಮಾಡಬೇಕಾದರೆ ಫೈರಿಂಗ್ ಮಾಡಬೇಕಾದರೆ ಮರ್ಡರ್ಸ್ ಮಾಡುವವರನ್ನು ಹಿಡಿಯಬೇಕಾದರೆ ನನ್ನ ಸಲಹೆ ತೆಗೆದುಕೊಂಡು ಮಾಡಬೇಕು ಎನ್ನುವ ಪ್ರಾವಿಶನ್ ಏನೂ ಇಲ್ಲ. ನನಗೆ ಟೆಲಿಫೋನ್ ಮಾಡಿ ನನ್ನ ಆದೇಶ ತೆಗೆದುಕೊಂಡು ಮಾಡಬೇಕು ಎನ್ನುವುದು ಏನೂ ಇಲ್ಲ. ಲಾ ಅಂಡ್ ಆರ್ಡರ್ ಮೆಂಟೈನ್ ಮಾಡುವುದು ಪೋಲೀಸಿನವರಿಗೆ ಬಿಟ್ಟಂಥ ಪ್ರಶ್ನೆ. ಆಕ್ಟ್ ಮತ್ತು ರೂಲ್ಸ್ ಪ್ರಕಾರ ಅವರು ನಡೆದುಕೊಳ್ಳಬೇಕಾದ್ದು ಅವರ ಕರ್ತವ್ಯ. ಆಯಾಯ ಸಂದರ್ಭಕ್ಕೆ ತಕ್ಕಂತೆ ತಮ್ಮ ಡಿಸ್ಕ್ರಿಷನ್ ಉಪಯೋಗಿಸಿ ತಮ್ಮ ಕೆಲಸ ಮಾಡಬೇಕೇ ವಿನಃ ಮುಖ್ಯಮಂತ್ರಿಗಳು ಹೇಳಿದಂತೆ ಅವರು ಮಾಡಿಕೊಂಡು ಹೋದರೆ ದೇಶದಲ್ಲಿ ಯಾವ ಲಾ ಅಂಡ್ ಆರ್ಡರ್ ಕೂಡ ಉಳಿಯುವುದಿಲ್ಲ. ಅವರು ಶಿಕ್ಷೆ ಮಾಡುವುದಾಗಲಿ, ಅಥವಾ ಅದರ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಾಗಲಿ ಪೋಲೀಸಿನವರು ಮಾಡಬೇಕೇ ವಿನಃ ಇದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಕ್ಕೆ ಸಾಧ್ಯವಿಲ್ಲ, ಮತ್ತು ಸರ್ಕಾರ ಇದರಲ್ಲಿ ಹಸ್ತಕ್ಷೇಪ ಮಾಡಲೂ ಬಾರದು ಈವೊತ್ತು ಲಾ ಅಂಡ್ ಆರ್ಡರಿನ ಜವಾಬ್ದಾರಿ ಪೋಲೀಸಿನವರಿಗೆ ಕೊಟ್ಟಿದ್ದೇವೆ, ಅದಕ್ಕಾಗಿ ಕಾನೂನು ಇದೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅವರಿಗೂ ಅಧಿಕಾರ ಕೊಟ್ಟಿದ್ದೇವೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇರು ಆರ್ಡರ್ ಕೊಟ್ಟನಂತರ ಆ ಆರ್ಡರನ್ನು ಕ್ಯಾರಿಔಟ್ ಮಾಡಬೇಕಾದ್ದು ಪೋಲೀಸಿನವರ ಕರ್ತವ್ಯ. ಅವರು ಹೇಗೆ ಕ್ಯಾರಿಔಟ್ ಮಾಡುತ್ತಾರೆ ಎಂದರೆ ಸಿಚುಯೇಷನ್ ಹೇಗೆ ಇರುತ್ತದೆ, ಆ ಸಂದರ್ಭವನ್ನು ಅನುಸರಿಸಿಕೊಂಡು ಅವರು ತಮ್ಮ ಒಂದು ಅಧಿಕಾರವನ್ನು ಉಪಯೋಗಿಸಿಕೊಂಡು ಆರ್ಡರ್ ಮಾಡಬೇಕೇ ಹೊರತು ಅದಲ್ಲದೆ ಮಂತ್ರಿಮಂಡಲದವರು ಆರ್ಡರ್ ಇಷ್ಟೂ ಮಾಡಬೇಕು ಎಂದು ಯಾರಾದರೂ ಮನಸ್ಸಿನಲ್ಲಿ ತಿಳಿದು ಕೊಂಡಿದ್ದರೆ ಅದು ತಪ್ಪು ಎಂದು ಹೇಳುತ್ತೇನೆ ಇದರಲ್ಲಿ ಯಾರ ಹಸ್ತಕ್ಷೇಪವೂ ಇಲ್ಲ, ನಾನಂತೂ ಒಂದು ಸಲವೂ ಹಸ್ತಕ್ಷೇಪ ಮಾಡಿಲ್ಲ ಎಂದು ಈ ಮಾನ್ಯ ಸಭೆಯಲ್ಲಿ ಹೇಳುತ್ತೇನೆ.

ಶ್ರೀ ಪಿ. ಕೆಂಕಟಗಿರಿಯಪ್ಪ:—ನಮ್ಮ ರಾಜ್ಯದಲ್ಲಿ ಮಧುಗಿರಿ ಪ್ರಕರಣದಲ್ಲಿ ಫೈರಿಂಗ್ ಆದಾಗ ಯಾರೂ ಸಾಯಲಿಲ್ಲ. ಆದರೂ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು ಎಂದು ಒತ್ತಾಯ ಮಾಡಿದಾಗ ಜುಡಿಷಿಯಲ್ ಎನ್‌ಕ್ವೈರಿ ಮಾಡಲಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್:—ಮಾನ್ಯ ಸದಸ್ಯರಾದ ಶ್ರೀಮಾನ್ ಪಿ. ಕೆಂಕಟಗಿರಿಯಪ್ಪನವರು ಮಧುಗಿರಿ ಪ್ರಕರಣದ ಒಂದು ವಿಷಯವನ್ನೇ ಹೇಳುತ್ತಾರೆಯೇ ಹೊರತು ಬೇರೆ ಯಾವುದೂ ಹೇಳುವುದಿಲ್ಲ. ನಾನು ಬೇಕಾದರೆ ಬೇರೆ ಉದಾಹರಣೆ ಕೊಡಬಹುದು. ಕೇರಳ, ವೆಸ್ಟ್ ಬಂಗಾಳ ಮತ್ತು ಇನ್ನೂ ಇತರ ರಾಜ್ಯಗಳಲ್ಲಿ ಏನಾಗಿದೆ ಎಂದು ಉದಾಹರಣೆ ಕೊಡಬಹುದು. ಪೋಲೀಸಿನವರು ಅವರ ಡಿಸ್ಕ್ರಿಪ್ಷನ್‌ನಲ್ಲಿ ಲಾ ಅಂಡ್ ಆರ್ಡರ್ ಮೈಂಟೈನ್ ಮಾಡುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳುತ್ತಾರೋ ಅದರಲ್ಲಿ ಸರ್ಕಾರದವರು ಹಸ್ತಕ್ಷೇಪ ಮಾಡುವುದಿಲ್ಲ. ಆ ರೀತಿ ಹಸ್ತಕ್ಷೇಪ ಮಾಡಲೂಬಾರದು. ನಾವು ಜೂಡಿಷಿಯಲ್ ಎನ್‌ಕ್ವೈರಿ ಎಂದು ಆರ್ಡರ್ ಮಾಡುತ್ತಾ ಹೋದರೆ ಪೋಲೀಸ್ ಇಲಾಖೆಯನ್ನು ಡಿಮಾರಲೈಸ್ ಮಾಡಿದ ಹಾಗಾಗುತ್ತದೆ. ಎಲ್ಲಿ ಡೆಲಿಬರೇಟ್ ಆಗಿ, ವಿಲ್‌ಫುಲ್ ಆಗಿ ಪೋಲೀಸ್ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿರುತ್ತಾರೋ ಅಂಥ ಕಡೆ ನಾವು ಜುಡಿಷಿಯಲ್ ಎನ್‌ಕ್ವೈರಿ ಮಾಡಿಸುವುದಕ್ಕೆ ಯೋಚಿಸಬೇಕಾಗುತ್ತದೆ. ವಿಶೇಷ ಸಂದರ್ಭಗಳಲ್ಲಿ ಮಾತ್ರ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕಾಗುತ್ತದೆ. ಅದು ಬಿಟ್ಟು ಲಾಠಿ ಛಾರ್ಜ್ ಮಾಡಿದಾಗ, ಫೈರಿಂಗ್ ಮಾಡಿದಾಗ ಇವಕ್ಕೆಲ್ಲಾ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದು ಸರಿಯಾದುದಲ್ಲ. ಒಂದು ವೇಳೆ ಎಲ್ಲಾದರೂ ದೌರ್ಜನ್ಯ ಆಗಿದ್ದರೆ, ಡೆಲಿಬರೇಟ್ ಆಗಿ, ಅತ್ಯಾಚಾರ ಆಗಿದ್ದರೆ, ಅಂಥ ಒಂದು ವಿಶೇಷ ಸಂದರ್ಭದಲ್ಲಿ ಜುಡಿಷಿಯಲ್ ಎನ್‌ಕ್ವೈರಿ ಮಾಡಿಸಬೇಕು ಎನ್ನುವ ಪ್ರಶ್ನೆ ಬರುತ್ತದೆ. ಆದುದರಿಂದ ಟಿಯರ್ ಗ್ಯಾಸ್ ಉಪಯೋಗಿಸಿದಾಗಲೂ ಎಲ್ಲದಕ್ಕೂ ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ಹೇಳುವುದಾದ್ದು ಸರಿಯಾದುದಲ್ಲ. ಈ ರೀತಿ ಆದರೆ ಲಾ ಅಂಡ್ ಆರ್ಡರನ್ನು ಯಾವರೀತಿಯಾಗಿಯೂ ಮೈಂಟೈನ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯಕ್ಕೆ ಕೀರ್ತಿ ಬಂದಿದ್ದರೆ ಅದು ನಮಗೆ ಗೊತ್ತಾಗುವುದಿಲ್ಲ. ಏತಕ್ಕೆಂದರೆ ನಾವು ಹಾಯಾಗಿ ಇರುತ್ತೇವೆ. ಎಲ್ಲಾದರೂ ಹೊರಗಡೆ ಹೋದರೆ ಈ ವಿಷಯ ಗೊತ್ತಾಗುತ್ತದೆ. ಮೈಸೂರಿನ ಸ್ಥಿತಿ ಹೇಗಿದೆ ಎಂದು ಹೊರಗಿನವರಿಗೆ ಗೊತ್ತಾಗುತ್ತದೆ ಅವರನ್ನು ಕೇಳಿ ನಾವು ತಿಳಿದುಕೊಳ್ಳಬೇಕು. ಹಾಗೇನಾದರೂ ಮೈಸೂರಿಗೆ ಕೀರ್ತಿ ಬಂದಿದ್ದರೆ ಇದಕ್ಕೆ ಹೊರಗಿನ ಜನರೇ ಕಾರಣ ಎಂದು ಹೇಳಬಹುದು. ಏತಕ್ಕೆಂದರೆ ಮೈಸೂರಿನಲ್ಲಿ ಒಳ್ಳೆಯವರು, ಸಹಾನುಭೂತಿ ಉಳ್ಳಂಥವರು, ಶಾಂತಿಪ್ರಿಯರು ಅದಂಥ ಜನ ಇಲ್ಲಿರುವುದರಿಂದ ಅವರು ಇಲ್ಲಿಯವರನ್ನು ಹೋಗಲುತ್ತಾರೆ ಮತ್ತು ಮೈಸೂರಿನಲ್ಲಿ ಯಾವ ಹಿಂಸಾಕೃತ್ಯಗಳೂ ನಡೆಯುತ್ತಾ ಇಲ್ಲ ಎಂದು ಹೇಳುತ್ತಾರೆ. ಇದರಿಂದ ಮೈಸೂರು ರಾಜ್ಯಕ್ಕೆ ಕೀರ್ತಿ ಬಂದಿದೆ. ಇದರ ಪರಿಣಾಮವಾಗಿ ಹೊರಗಿನ ಜನರು ಸಾಧ್ಯವಾದಷ್ಟು ಅವರ ವ್ಯವಹಾರ ಗಳನ್ನೆಲ್ಲಾ ಏತಕ್ಕಾಗಿ ನಮ್ಮ ರಾಜ್ಯಕ್ಕೆ ವರ್ಗಾಯಿಸಬಾರದು ಎನ್ನುವುದನ್ನು ಯೋಚಿಸುತ್ತಿದ್ದಾರೆ. ಏತಕ್ಕೆಂದರೆ ಅವರ ರಾಜ್ಯದಲ್ಲಿ ಇರುವಂಥ ಇಕ್ಕಟ್ಟು ನೋಡಿ ಅಡ್ಮಿನಿಸ್ಟ್ರೇಷನ್ ಮತ್ತು ಲಾ ಅಂಡ್ ಆರ್ಡರ್ ಸರಿಯಾಗಿ ಇಲ್ಲದೇ ಇರುವ ಕಾರಣ ಅವರ ವ್ಯವಹಾರಗಳನ್ನು ಆದಷ್ಟು ಬೇಗ ನಮ್ಮ ರಾಜ್ಯಕ್ಕೆ ವರ್ಗಾಯಿಸಬೇಕೆಂದು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ:—ತಾವು ಇದರಲ್ಲಿ ಹಸ್ತಕ್ಷೇಪ ಮಾಡಬಾರದು ಎನ್ನುವ ವಿಚಾರ ಹೇಳಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ತಮ್ಮ ಪರಿವಾರದವರು ಇದರಲ್ಲಿ ಎಷ್ಟರಮಟ್ಟಿಗೆ ಹಸ್ತಕ್ಷೇಪ ಮಾಡಿದ್ದಾರೆ ಎನ್ನುವುದನ್ನು ಕಿವಿ ಮಾತಿನಲ್ಲಾದರೂ ಕೇಳಿ ತಿಳಿದುಕೊಂಡರೆ ಗೊತ್ತಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:—ಈಗ ಮಾನ್ಯ ಸದಸ್ಯರು ಸೂಚನೆ ಮಾಡಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಅನೇಕ ಮರ್ಡರ್ಸ್ ಆಗುತ್ತವೆ. ನಮ್ಮ ರಾಜ್ಯದಲ್ಲಿ ಪೋಲೀಸ್ ಅಧಿಕಾರಿಗಳು ಅಲ್ಲಿಗೆ ಹೋಗಿ ಇನ್‌ವೆಸ್ಟಿಗೇಟ್ ಮಾಡಬೇಕು, ಕೋರ್ಟಿಗೆ ಹೋಗಬೇಕು, ತಪ್ಪಿಸ್ಥ ಅಲ್ಲಿ ಶಿಕ್ಷೆ ಪಡೆಯಬೇಕು. ತಪ್ಪಿಸ್ಥ ಸಣ್ಣದವನು ಅಪ್ರೂವರ್ ಆಗಬೇಕು. ಈಗ ಒಂದು ಉದಾಹರಣೆ ಹೇಳಬೇಕಾದರೆ ಡಿಫಿಷನ್ ಕೇಸುಗಳ ಆಲ್ ಇಂಡಿಯಾ ಆವರೇಜ್ ತೆಗೆದುಕೆ ಇಂಡರೆ ೨೭.೩ ಆಗುತ್ತದೆ ಆದರೆ ನಮ್ಮ ರಾಜ್ಯದಲ್ಲಿ ೪೭.೮ ಪರ್ಸೆಂಟ್‌ನಷ್ಟು ಡಿಟೆಕ್ಷನ್ ಮಾಡಿದ್ದಾರೆ ಇದರ ಒಂದು ಅಂಕಿ ಅಂಶಗಳಿಂದಲೇ ನೋಡಬಹುದು, ಪೋಲೀಸಿನವರು ಎಷ್ಟು ಒಳ್ಳೆಯರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಮತ್ತು

ಇನ್ನೊಂದು ವಿಚಾರ ತಮ್ಮ ಗಮನಕ್ಕೆ ತರಬೇಕಾದರೆ ಕಳೆದ ಸಾರಿ ಅಂದರೆ ೧೯೬೯ನೇ ಸಾಲಿನಲ್ಲಿ ಅನೇಕ ರಾಜ್ಯಗಳಲ್ಲಿ ನನಗೆ ಗೊತ್ತಿದ್ದ ಹಾಗೆ ರಾಜಕೀಯ ಕಾರಣಗಳಿಂದ ಮರ್ಡರ್ ಆಗಿವೆ. ಒಂದಲ್ಲ ಒಂದು ರೀತಿಯಲ್ಲಿ ಮರ್ಡರ್ ಆಗಬಹುದು ಆದರೆ ರಾಜಕೀಯ ಕಾರಣದಿಂದ ಮರ್ಡರ್ ಆದರೆ ಅದು ಬಹಳ ಕೆಟ್ಟದ್ದು. ಆದರೆ ಆ ರೀತಿ ನಮ್ಮ ರಾಜ್ಯದಲ್ಲಿ ೧೯೬೯ನೇ ಸಾಲಿನಲ್ಲಿ ನನಗೆ ತಿಳಿದಿರುವಮಟ್ಟಿಗೆ ಒಂದೂ ಕೂಡ ಪೊಲಿಟಿಕಲ್ ಮರ್ಡರ್ ಆಗಲಿಲ್ಲ ಎಂದು ಅಭಿಮಾನದಿಂದ ಹೇಳುತ್ತೇನೆ.

5-30 P. M.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:—ಗುಲ್ಬರ್ಗಾದಲ್ಲಿ ಬರೀ ರಾಜಕೀಯ ಕೊಲೆ ನಡೆಯುತ್ತಿದೆಯಲ್ಲಾ, ಇದರ ಬಗ್ಗೆ ತಾವೇನು ಹೇಳುತ್ತೀರಿ.

ಶ್ರೀ ವೀರೇಂದ್ರ ಪಾಟೀಲ್:—ನನಗೇನೂ ಆ ರೀತಿ ಇಲ್ಲ ಎಂದು ಕಾಣುತ್ತೆ. ತಾವೇ ಅಲ್ಲಿಗೆ ಹೋಗಿ ಬನ್ನಿ ಎಂದು ಹೇಳುತ್ತೇನೆ. ಇನ್ನೊಂದು ರೂಡಗಿಯಲ್ಲಿ ಆದ ಮರ್ಡರು ಮತ್ತು ಇಡಪನೂರು ಇಲ್ಲಿ ಆದ ಮರ್ಡರುಗಳ ಬಗ್ಗೆ ಇಲ್ಲಿ ಹೇಳಿದರು. ಇದರಲ್ಲಿ ತನಿಖೆ ಮಾಡಿ ಕೆಲವರಿಗೆ ಶಿಕ್ಷೆಯಾಗಿದೆ ಮತ್ತು ಇದರ ಬಗ್ಗೆ ಇನ್ನೂ ಆಧಿಕಾರಿಗಳು ಇನ್‌ವೆಸ್ಟಿಗೇಷನ್ ಮಾಡಿ ಕೆಲವರನ್ನು ಶಿಕ್ಷೆಗೆ ಗುರಿಮಾಡಿದ್ದಾರೆ ಎನ್ನುವ ಮಾತನ್ನು ಇಲ್ಲಿ ಹೇಳುತ್ತೇನೆ. ರೂಡಗಿ ಮತ್ತು ಇಡಪನೂರು ಮರ್ಡರು ಕೇಸುಗಳಲ್ಲಿ ಎವಿಡೆನ್ಸ್ ನಮ್ಮ ರಾಜ್ಯದಲ್ಲಿ ಸಾಕಷ್ಟು ಇರಲಿಲ್ಲ ಎಂದು ಹೇಳಿರುವುದನ್ನು ಒಪ್ಪುವುದಕ್ಕಾಗುವುದಿಲ್ಲ. ರೂಡಗಿ ಎನ್ನುವುದು ಬಿಜಾಪುರ ಜಿಲ್ಲೆಗೆ ಸೇರಿದ್ದು ಇಡಪನೂರು ಮತ್ತು ರೂಡಗಿ ಇವೆರಡು ಕಡೆಯ ಕೇಸುಗಳನ್ನು ವಿಚಾರ ಮಾಡಲು ಒಂದು ಸ್ಪೆಷಲ್ ಬೆಂಚ್‌ನ್ನೇ ಮಾಡಬೇಕಾಯಿತು. ಈ ರೀತಿ ಮಾಡಿ ಇಲ್ಲಿ ಎನ್‌ಕೌಂಟರಿಯಾಯಿತು ರೂಡಗಿ ಕೇಸಿನಲ್ಲಿ ೧೪ ಜನರಿಗೆ ಶಿಕ್ಷೆಯಾಗಿದೆ ಮತ್ತು ೩೩ ಜನರಿಗೆ ಇಂಪ್ರಿಸನ್ಮೆಂಟ್ ಫಾರ್ ಲೈಫ್ ಆಗಿದೆ. ಅದೇ ರೀತಿ ಇಷ್ಟೋ ಮರ್ಡರು ಕೇಸುಗಳಲ್ಲಿ ಎನ್‌ಕೌಂಟರಿ ಆಗಿ ಶಿಕ್ಷೆಗಳಾಗಿವೆ. ನನ್ನ ಹತ್ತಿರ ಇದರ ಅಂಕೆ ಸಂಖ್ಯೆಗಳು ಈಗ ಇಲ್ಲ. ಒಟ್ಟಿನಲ್ಲಿ ಮರ್ಡರುಗಳು ಆಗಿರುವ ಸಂಖ್ಯೆ ಬಹಳ ಕಡಿಮೆ.

ಇನ್ನೊಂದು ವಿಚಾರ ಎಂದರೆ ಕೌಂಟರುಫೀಟು ನೋಟುಗಳ ಸಂಖ್ಯೆ ಮತ್ತು ಇದರ ಹಾವಳಿ ದೇಶದ ಎಲ್ಲಾ ಕಡೆಗಳಲ್ಲೂ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕೆಲವು ರಾಜ್ಯಗಳಲ್ಲಿ ಈಚೆಗೆ ಆಗುತ್ತಿವೆ. ಲವು ರಾಜ್ಯಗಳಲ್ಲಿ ಕೇಸುಗಳಾಗಿ ಕೆಲವರನ್ನು ಶಿಕ್ಷೆಗೆ ಗುರಿಪಡಿಸಲಾಗಿದೆ. ಇಂತಹ ಖೋಟಾ ನೋಟುಗಳನ್ನು ಹಿಡಿಯುವುದರಲ್ಲಿ ನಮ್ಮ ರಾಜ್ಯದ ಸಿ.ಐ.ಡಿ. ಇಲಾಖೆಯವರು ಬಹಳ ಚಾಕಚಕ್ಯತೆಯಿಂದ ಕೆಲಸ ಮಾಡಿ ಪತ್ತೆಹಚ್ಚಿದ್ದಾರೆ. ಇದು ನಮ್ಮ ಒಂದೇ ರಾಜ್ಯದಲ್ಲಿ ಆಗುತ್ತಿರಲಿಲ್ಲ. ಮೂರು ನಾಲ್ಕು ರಾಜ್ಯಗಳಲ್ಲಿ ಸೇರಿದಂತೆ ನಡೆಯುತ್ತಿತ್ತು. ಇದೊಂದು ಅಂತರ ರಾಜ್ಯ ವ್ಯಕ್ತಿಗಳಿಂದ ನಡೆಯುತ್ತಿತ್ತು ಎನ್ನುವುದನ್ನು ವಿಚಾರಣೆಗಳಿಂದ ಗೊತ್ತಾಗಿದೆ. ನಮ್ಮ ಸಿ.ಐ.ಡಿ ಇಲಾಖೆಯವರು ಸಮಾರು ೧೯ ಕೇಸುಗಳನ್ನು ಪತ್ತೆ ಮಾಡಿದ್ದಾರೆ. ಇದರಲ್ಲಿ ಹತ್ತು ರೂಪಾಯಿಗಳ, ನೂರು ರೂಪಾಯಿಗಳ ಹಾಗೂ ಸಾವಿರ ರೂಪಾಯಿಗಳ ಖೋಟಾ ನೋಟುಗಳು ಇದುದು ಪತ್ತೆಯಾಯಿತು. ಇದೂ ಅಲ್ಲದೆ ಪರದೇಶಗಳಿಂದ ಬರುವ ಡಾಲರುಗಳನ್ನು ಕೂಡ ಖೋಟಾ ಡಾಲರುಗಳಂತೆ ಮಾಡುತ್ತಿದ್ದುದು ಪತ್ತೆಯಾಯಿತು. ಫೇಕ್ ಡಾಲರುಗಳನ್ನು ಪತ್ತೆ ಮಾಡುವಾಗ ಇದರ ಜೊತೆಯಲ್ಲಿ ಅದಕ್ಕೆ ಬೇಕಾಗುವ ಮೇಟೀರಿಯಲ್ಸ್‌ಗಳು ಮತ್ತೆತರ ಸಾಮಾನುಗಳನ್ನು ವಶಪಡಿಸಿಕೊಳ್ಳಲಾಯಿತು. ಇಂತಹ ಖೋಟಾ ಡಾಲರುಗಳೇನಾದರೂ ಪರದೇಶದಿಂದ ಬರುವ ಟೂರಿಸ್ಟ್‌ಗಳಿಗೆ ಸಿಕ್ಕಿದ್ದರೆ ಅವರುಗಳು ಬಹಳ ತೊಂದರೆಪಡುತ್ತಿದ್ದರು.

ಇಂತಹ ಇಂಟರು ಸ್ಟೇಟು ಗ್ಯಾಂಗನ್ನು ಹತ್ತಿಕ್ಕಲು ನಮ್ಮ ಸಿ. ಐ. ಡಿ. ಇಲಾಖೆಯವರು ಬಹಳ ಕಷ್ಟಪಟ್ಟು ಕೆಲಸ ಮಾಡಿ ಇವರನ್ನೆಲ್ಲಾ ಹಿಡಿದಿದ್ದಾರೆ. ನಮ್ಮ ಸಿ. ಐ. ಡಿ. ಇಲಾಖೆಯವರು ಹಿಡಿದಿರುವ ಕೇಸುಗಳಲ್ಲಿ ೧೯೬೯ರಲ್ಲಿ ಎಂಟು ಕೇಸುಗಳಲ್ಲಿ ಕನ್‌ವಿಕ್ಷನ್ ಆಗಿದೆ, ಕೌಂಟರು ಫೀಟು ನೋಟುಗಳ ಹಾವಳಿ ಎಲ್ಲ ಕಡೆಗಳಲ್ಲೂ ಹರಡಿಕೊಂಡಿದೆ. ನಮ್ಮ ಮೈಸೂರು ರಾಜ್ಯದ ಒಂದೇ ಕಡೆಯಲ್ಲಿ ಆಗುತ್ತಿಲ್ಲ. ಇದರ ಬಗ್ಗೆ ನಮ್ಮ ರಾಜ್ಯಕ್ಕೆ ಸೂಚನೆಗಳು ಬೇರೆ ರಾಜ್ಯಗಳಿಂದ ಬಂದ ಕೂಡಲೆ ನಮ್ಮ ಸಿ.ಐ.ಡಿ. ಇಲಾಖೆಯವರು ಬಹಳ ಜಾಗರೂಕತೆಯಿಂದ ಅಪರಾಧಗಳನ್ನು ಪತ್ತೆ ಹಚ್ಚುವುದರಲ್ಲಿ ಕೆಲಸ ಮಾಡಿದುದರಿಂದ ನಮ್ಮ ರಾಜ್ಯದಲ್ಲಿ ಇಂತಹ ಕೌಂಟರ್ ಫೀಟು ಕೇಸುಗಳ ಹಾವಳಿ ಅಷ್ಟು ಹೆಚ್ಚಾಗಿ ಆಗಿಲ್ಲ? ಕಾಳಸಂತೆಯನ್ನು ಆದಷ್ಟೂ ತಪ್ಪಿಸಲಾಗಿದೆ. ಯಾಂತ್ರೀಕರಣದ ಮೂಲಕ ಅಪರಾಧಗಳನ್ನು ಪತ್ತೆ ಹಚ್ಚಲು ಪ್ರಯತ್ನ ಮಾಡುತ್ತಿರುವುದರಿಂದ ಅಪರಾಧಗಳ ಸಂಖ್ಯೆ ಕಡಿಮೆಯಾಗಿದೆ. ನಮ್ಮ ಸಿ.ಐ.ಡಿ. ಇಲಾಖೆಯಲ್ಲಿರುವ ಸೆಷಲ್ ಸ್ಕ್ವಾಡ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಈ ಸ್ಕ್ವಾಡ್‌ನವರು. ಒಂದು ವರ್ಷದಲ್ಲಿ ೩೧, ೯೪,೦೦೦ ರೂಪಾಯಿಗಳ ಮೆಟಲರ್ಜಿಕ್ ವೈರುಗಳ ಕಳ್ಳತನವನ್ನು ಪತ್ತೆಹಚ್ಚಿ ಅಪರಾಧಿಗಳನ್ನು ಕಂಡು

(ಶ್ರೀ ವೀರೇಂದ್ರ ಪಾಟೀಲ್)

ಹಿಡಿದಿದ್ದಾರೆ. ಇದೂ ಅಲ್ಲದೆ ನಮ್ಮ ರಾಜ್ಯದ ಬಾರ್ಡರುಗಳಲ್ಲಿ ಆಹಾರ ಪದಾರ್ಥಗಳ ಕಳ್ಳ ಸಾಗಾಣಿಕೆ ಮಾಡುತ್ತಿರುವವರನ್ನೂ ಕಾಡುಹಿಡಿದು ಏಷ್ಟೋ ಕೇಸುಗಳೂ ಆಗಿವೆ ಮತ್ತು ಕಳ್ಳ ಭಟ್ಟಿಸಾರಾಯಿ ಕೇಸುಗಳನ್ನೂ ಹಿಡಿದು ಸುಮಾರು ೪೦ ಲಕ್ಷ ರೂಪಾಯಿಗಳಷ್ಟು ಸರಕಾರಕ್ಕೆ ವಸೂಲು ಮಾಡಿಕೊಟ್ಟಿದ್ದಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ:—ಶೇಕಡ ಹತ್ತರಷ್ಟು ಕೇಸುಗಳಲ್ಲಿ ಕೂಡ ಸರಿಯಾಗಿ ಶಿಕ್ಷೆಯಾಗಿಲ್ಲ.

ಶ್ರೀ ವೀರೇಂದ್ರ ಪಾಟೀಲ್:—ಕೋರ್ಟುಗಳಿಗೆ ಹೋಗಿರುವ ಪ್ರಶ್ನೆ ಕೇಳಿದರೆ ಅದೇ ಬೇರೆಯಾಗುತ್ತದೆ. ನಮ್ಮ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡಿದ್ದಾರೆ ಎನ್ನುವುದಕ್ಕಾಗಿ ಇಲ್ಲಿ ಹೇಳುತ್ತಿದ್ದೇನೆ. ಅನೇಕ ಹೊಸ ಏರ್ಪಾಡುಗಳನ್ನು ನಮ್ಮ ಪೋಲೀಸು ಇಲಾಖೆಯವರು ಅನುಸರಿಸುತ್ತಿದ್ದಾರೆ. ನಮ್ಮ ಸಿ.ಐ.ಡಿ. ಇಲಾಖೆಯಲ್ಲಿ ಮೆಕನೈಸ್ಡ್ ಡ್ಯಾಟಾ ಪ್ರೊಸೆಸಿಂಗ್ ಪದ್ಧತಿ ಇರಬೇಕು ಎಂದು ಬ್ಯೂರೋ ಆಫ್ ಏಕನಾಮಿಕ್ಸ್ ಮತ್ತು ಸ್ಟಾಟಿಸ್ಟಿಕ್ಸ್‌ನವರು ಸಲಹೆ ಮಾಡಿದ್ದರು. ಇದರಂತೆ ಇಲ್ಲಿ ಎಲ್ಲ ರಿಕಾರ್ಡು-ಗಳನ್ನೂ ಇಡಲು ಪ್ರಯತ್ನ ಮಾಡುತ್ತಿದ್ದಾರೆ. ಹಿಂದೆ ಒಂದೂವರೆ ಲಕ್ಷ ರಿಕಾರ್ಡುಗಳು ಇಡಲು ಆಗುತ್ತಿದ್ದುದನ್ನು ಈ ರೀತಿ ಯಾಂತ್ರೀಕರಣ ಮಾಡಿದುದರಿಂದ ಸುಮಾರು ಹತ್ತು ಲಕ್ಷ ರಿಕಾರ್ಡುಗಳನ್ನು ಜಾಸ್ತಿ ಇಡಲು ಅನುಕೂಲವಾಗುವಂತೆ ಈಗ ಕಂಪ್ಯೂಟರು ಪದ್ಧತಿಯನ್ನು ಇಲ್ಲಿ ತರಲು ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ಒಂದು ಸಿಸ್ಟಂ ತರುವುದರಲ್ಲಿ ಎಲ್ಲ ರಾಜ್ಯಗಳ ಸರಾಸರಿಯನ್ನು ತೆಗೆದುಕೊಂಡರೆ ನಮ್ಮ ರಾಜ್ಯ ಎರಡನೆಯ ಸ್ಥಾನ ಪಡೆಯುತ್ತಿದೆ. ಇದೂ ಅಲ್ಲದೆ ಫೊರೆನ್‌ಸಿಕ್ ಲ್ಯಾಬೊರೇಟರಿ ಎಂದು ಮಾಡಿದ್ದಾರೆ. ಇದೂ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ನಾನು ಮೊದಲೇ ಹೇಳಿದ ಹಾಗೆ ಮರ್ಡರುಗಳ ಡೀಟೇಲ್ಸ್ ನೋಡಿದರೆ ಆಲ್ ಇಂಡಿಯಾ ಆವರೇಜ್‌ಗಿಂತ ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ ಮರ್ಡರುಗಳು ಆಗಿವೆ ಎನ್ನುವುದು ಗೊತ್ತಾಗುತ್ತದೆ. ಹಾಗೇ ರೆಯಟಿಂಗ್ ಬಗ್ಗೆ ನೋಡಿದರೆ ೧೯೬೮ರಲ್ಲಿ ಶೇಕಡಾ ೭೬ ರಷ್ಟು ಇತ್ತು. ಮರ್ಡರ್ಸ್‌ಗಳು ೧೯೬೮ರಲ್ಲಿ ೧೪ ಮತ್ತು ೧೯೬೯ ರಲ್ಲೂ ೧೪ ಮರ್ಡರುಗಳು ಮಾತ್ರ ಆಗಿವೆ. ಇನ್ನಿತರ ಅಪರಾಧಗಳ ಬಗ್ಗೆ ನಮ್ಮ ರಾಜ್ಯದಲ್ಲಾಗಿರುವುದನ್ನು ಆಲ್ ಇಂಡಿಯಾ ಆವರೇಜ್‌ಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಬಹು ಕಡಿಮೆ ಇದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ.

ಇನ್ನು ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್: – ೨೪ನೇ ಏಪ್ರಿಲ್ ೧೯೬೯ರಲ್ಲಿ ಒಂದು ಮರ್ಡರು ಆಗಿದ್ದುದರ ಬಗ್ಗೆ ತಮಗೆ ಪತ್ರವನ್ನು ನಾನೇ ಬರೆದಿದ್ದೆ ಮತ್ತು ಸ್ಪೆಸಿಫಿಕ್ ಆಗಿ ಇದರ ಬಗ್ಗೆ ಉತ್ತರ ಹೇಳಬೇಕೆಂತಲೂ ಕೇಳಿದ್ದೆ. ಇದರ ಬಗ್ಗೆ ನನಗೆ ಇನ್ನೂ ಉತ್ತರ ಬಂದಿಲ್ಲ.

ಶ್ರೀ ವೀರೇಂದ್ರ ಪಾಟೀಲ್:—ಡೀಟೇಲ್ಸ್‌ಗಳಿಲ್ಲದೆ ಸದ್ಯದಲ್ಲಿ ಉತ್ತರ ಕೊಡಬೇಕೆಂದರೆ ಹೇಗೆ? ಇದರ ಬಗ್ಗೆ ಎನ್‌ಕ್ವೈರಿಯಾಗಬೇಕು ಮತ್ತು ಅಲ್ಲಿನ ಸ್ಥಾನಿಕ ಪ್ರದೇಶದಲ್ಲಿ ಇರುವ ಅಧಿಕಾರಿಗಳಿಂದ ವಿಚಾರಣೆಯಾಗಬೇಕು. ಯಾವುದಾದರೂ ಅಂತಹ ನಿರ್ದಿಷ್ಟವಾದ ಕಡೆ ಸಿ.ಐ.ಡಿ. ಅಧಿಕಾರಿಗಳಿಂದ ವಿಚಾರಣೆಯಾಗಬೇಕೆಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಆಗ ಅದನ್ನು ಬೇಕಾದರೆ ನಮ್ಮ ಇಲಾಖಾ ಮುಖ್ಯಾಧಿಕಾರಿಗಳ ಮೂಲಕ ವಿಚಾರಣೆ ಮಾಡಿಸಬಹುದು. ಸುಮಾರು ೬೦೦–೭೦೦ ಕೇಸು ಗಳಲ್ಲಿ ಇನ್ನೂ ಎನ್‌ಕ್ವೈರಿ ಮತ್ತು ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಇವ್ಯಾಗಳೆಲ್ಲದರ ವಿವರಗಳನ್ನು ಹೇಳಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ಯಾವುದಾದರೂ ಮುಖ್ಯವಾದ ಕೇಸು ಎಂದು ನನ್ನ ಗಮನಕ್ಕೆ ತಂದರೆ ಆಗ ಅದನ್ನು ಸಿ.ಐ.ಡಿ.ಗಳ ಮೂಲಕ ಎನ್‌ಕ್ವೈರಿ ಮಾಡಿಸಿ ಅದು ಸರಿಯೇ ತಪ್ಪೇ ಎಂದು ಆ ನಂತರ ನೋಡಬಹುದು ಇಂತಹ ಒಂದು ವಿಚಾರ ನನ್ನ ಗಮನಕ್ಕೆ ತಂದರೆ ಸ್ಪೆಷಲ್ ಆಗಿ ಬೇಕಾದರೆ ಸಿ.ಐ.ಡಿ.ಗಳನ್ನು ಕಳಿಸಬಹುದು.

ಶ್ರೀ ಕೆ. ಪ್ರಭಾಕರ್:—ಇದು ಬಹಳ ಡಿಲೇ ಆಗಿದೆ. ಇದಕ್ಕಾಗಿ ತಾವು ನಿಗಾ ಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್:—ಶ್ರೀಮಾನ್ ಸಿದ್ದವೀರಪ್ಪನವರು ಅಜ್ಜಂಪುರದಲ್ಲಿ ಒಂದು ಸಭೆ ನಡೆದಾಗ ಅಲ್ಲಿಗೆ ಪೋಲೀಸಿನವರು ಬಂದು ಒಬ್ಬರನ್ನು ಹಿಡಿದುಕೊಂಡು ಹೋದರು ಎನ್ನುವುದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದರು. ಇದರ ಬಗ್ಗೆ ಪತ್ರ ಕೂಡ ಅವರು ಬರೆದಿದ್ದರು. ನಾನು ಅದನ್ನು ಐ.ಜಿ.ಪಿ. ರವರ ಕಡೆಗೆ ಕಳುಹಿಸಿದ್ದೆ. ಅವರಿಂದ ಉತ್ತರ ಬಂದಿಲ್ಲ. ಈಚೆಗೆ ಬಂದಿದೆಯೋ ಏನೋ ಗೊತ್ತಿಲ್ಲ. ೩೯ನೇ ಜನವರಿ ೧೯೭೦ ರಂದು ಅಜ್ಜಂಪುರದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ಸು ಕಮಿಟಿಯ ಒಂದು ಸಭೆ ನಡೆಯಿತು ಇದರಲ್ಲಿ ಡಾ॥ ನಾಗಪ್ಪ ಆಳ್ವರವರು ಅಧ್ಯಕ್ಷತೆ ವಹಿಸಿದ್ದರು ಮತ್ತು ನನ್ನನ್ನೂ ಆಹ್ವಾನಿಸಿದ್ದರು. ಮತ್ತು ಇದು ಪಬ್ಲಿಕ್ ಮೀಟಿಂಗು ಎಂದು ಮಾಡಿರಲಿಲ್ಲ. ಈ ಮೀಟಿಂಗು ಮುಗಿಯುವುದರೊಳಗಾಗಿ ನನಗೆ ನೆನಪಿರುವಂತೆ ಅಲ್ಲಿಗೆ ಒಬ್ಬರು ಬಂದರು, ಪ್ರಾಯಶಃ ಅವರು ಮುನಿಸಿಪಲ್ ಸದಸ್ಯರು ಎಂದು ಕಾಣುತ್ತದೆ. ನಾನು ವೇದಿಕೆಯ ಮೇಲೆ ನಿಂತು ಮಾತನಾಡುತ್ತೇನೆ ಎಂದು ಹೇಳಿದರು. ಆದಕ್ಕೆ ಇದು ನಿಮ್ಮ ಸಭೆಯಲ್ಲಿ, ಬೇರೆ ಕಡೆ ಪಬ್ಲಿಕ್ ಮೀಟಿಂಗು ಮಾಡಿದಾಗ ಅಲ್ಲಿ ಹೋಗಿ ಮಾತನಾಡಬಹುದು ಎಂದು ಹೇಳಿದ್ದಕ್ಕೆ ಅವರು ಅಂದು ಇದ್ದಂತಹ ಪರಿಸ್ಥಿತಿಯಲ್ಲಿ ಸರಿಯಾಗಿರಲಿಲ್ಲ ಮತ್ತು ಅವರು ಎಂತಹ ಕಂಡೀಷನ್‌ನಲ್ಲಿದ್ದರು ಎನ್ನುವುದನ್ನೂ ಇಲ್ಲಿ ವಿವರಿಸುವ ಅಗತ್ಯವೂ ಇಲ್ಲ. ಅವರು ಮಾತನಾಡುವುದಕ್ಕೆ ತಮಗೆ ಅವಕಾಶ ಕೊಡಲಿಲ್ಲ ಏಂದು ದೊಡ್ಡದಾಗಿ ಚೀರಾಟ ಮಾಡಿ ಎಲ್ಲರನ್ನೂ ಬೈಯ್ಯಲು ಆರಂಭಿಸಿದರು ಅವರನ್ನು ಪೋಲೀಸಿನವರು ಹಿಡಿದುಕೊಂಡಾಗ ಅವರು ಮಹಾತ್ಮಾ ಗಾಂಧೀಕಿ ಜೈ, ಇಂದಿರಾ ಗಾಂಧೀಕಿ ಜೈ ಎಂದು ಕೂಗಿಕೊಂಡರು. ಇದರಿಂದ ಒಳಗಡೆ ನಡೆಯುವ ಸಭೆಯಲ್ಲಿ ಗಲಾಟೆಗಳಾಗಬಹುದು ಎಂದು ಪೋಲೀಸರು ಇವರನ್ನು ಕರೆದುಕೊಂಡು ಹೋಗುವಾಗ ಜನಗಳು ಒಳಗೆ ನುಗ್ಗಿದರು. ಇಂದಿರಾ ಗಾಂಧಿಕಿ ಜೈ ಎಂದು ಜಯಕಾರ ಮಾಡಿಕೊಂಡು ಏನು ಬೇಕಾದರೂ ಮಾಡಬಹುದು ಎಂದು ಯಾರೂ ತಿಳಿಯಬಾರದು ಯಾವರೀತಿ ಮಾಡಬೇಕು ಎಂದರೆ ಅದನ್ನು ಕಾನೂನು ಪ್ರಕಾರ ಮಾಡಬೇಕು. ಇದಕ್ಕಾಗಿ ಪೈ೦ ಮಿನಿಸ್ಟರ್‌ರವರ ಹೆಸರು ಹಿಡಿದುಕೊಂಡು ಅವರಿಗೆ ಟಚ್ ಮಾಡುವಂತೆ ಹೇಳಲು ಹೋದರೆ ಕಷ್ಟವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಅಲ್ಲಿಂದ ಮುಂಡ್ಯದಲ್ಲಿ ನಡೆದಂಥ ಒಂದು ಘಟನೆಯ ಬಗ್ಗೆ ಮಾನ್ಯ ಸಿದ್ಧವೀರಪ್ಪನವರು ಪ್ರಸ್ತಾಪ ಮಾಡಿದರು.

ಶ್ರೀ ಎಚ್. ಸಿದ್ದವೀರಪ್ಪ :— ವೇದಿಕೆಯ ಮೇಲೆ ಆ ಮನುಷ್ಯರು ಹೋದರು ಎಂದು ತಾವು ಹೇಳಿದಿರಿ. ಅವರು ಏನು ತಪ್ಪು ಮಾಡಿದರು ಎಂಬುದನ್ನು ಹೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್:— ಅದನ್ನು ಸಹ ಹೇಳಿದೆ. ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ನಾಗಪ್ಪ ಆಳ್ವ ಅವರ ಅಧ್ಯಕ್ಷತೆಯಲ್ಲಿ ಅಲ್ಲಿ ಒಂದು ಪಬ್ಲಿಕ್ ಮೀಟಿಂಗ್ ನಡೆಯುತ್ತಿತ್ತು. ಆ ಮೀಟಿಂಗ್ ಮುಗಿಯುವ ಮುಂದೋ ಏನೋ ನನಗೆ ಸರಿಯಾಗಿ ಗೊತ್ತಿಲ್ಲ, ಒಬ್ಬ ಮನುಷ್ಯ ವೇದಿಕೆಯ ಬಳಿ ಹೋಗಿ ನಾನೂ ಮಾತನಾಡುತ್ತೇನೆ, ಅವಕಾಶ ಕೊಡಿ ಎಂದು ಕೇಳಿದ. ಅದಕ್ಕೆ ಅವರು ಹೇಳಿದರು, ಇಲ್ಲಿ ನಿನಗೆ ಮಾತನಾಡುವುದಕ್ಕೆ ಅಧಿಕಾರ ಇಲ್ಲ, ಇಂದು ನಮ್ಮ ಕಾಂಗ್ರೆಸ್ ಮೀಟಿಂಗ್ ಇದೆ, ಇಲ್ಲಿ ಯಾರು ಯಾರು ಮಾತನಾಡಬೇಕು ಎಂಬುದು ಮೊದಲೇ ನಿರ್ಣಯವಾಗಿದೆ. ಆದ್ದರಿಂದ ನಿನಗೆ ಇಲ್ಲಿ ಮಾತನಾಡುವುದಕ್ಕೆ ಅಧಿಕಾರ ಇಲ್ಲ ಎಂಬುದಾಗಿ. ಅದಕ್ಕೆ ಆ ಮನುಷ್ಯ ಬೈಯುವುದಕ್ಕೆ ಪ್ರಾರಂಭ ಮಾಡಿದ, ಮತ್ತು ಎಲ್ಲರಿಗೂ ಬೈಯುವುದಕ್ಕೆ ಪ್ರಾರಂಭ ಮಾಡಿದ. ಆಗ ಸಭೆಯಲ್ಲಿ ಗೊಂದಲವೇಳುವ ಪರಿಸ್ಥಿತಿ ಬಂತು. ಗೊಂದಲವೇಳದಂತೆ ಶಾಂತಿ ಕಾಪಾಡುವ ಜವಾಬ್ದಾರಿ ಪೋಲೀಸ್‌ರಿಗೆ ಇರುತ್ತದೆ. ಆ ಕಾರಣದಿಂದ ಪೋಲೀಸಿನವರು ಆತನನ್ನು ಹೊರಗೆ ಕರೆದುಕೊಂಡು ಹೋದರು. ಒಂದು ಪಕ್ಷದವರು ಸಭೆ ನಡೆಸುತ್ತಿರುವಲ್ಲಿ ಎರಡನೆಯವರು ಗೊಂದಲ ಎಬ್ಬಿಸುವುದಕ್ಕೆ ಅಧಿಕಾರ ಇರುವುದಿಲ್ಲ. ಎರಡನೆಯವರು ಬೇಕಾದರೆ ಬೇರೆ ಕಡೆ ಸಭೆ ನಡೆಸಬಹುದು.

ಶ್ರೀ ಎಚ್. ಸಿದ್ದವೀರಪ್ಪ:— ನಾವು ಸಭೆ ನಡೆಸುತ್ತೇವೆ. ನಮಗೆ ರಕ್ಷಣೆ ಬೇಕು ಎಂದು ಪೋಲೀಸಿನವರಿಗೆ ಶ್ರೀ ನಾಗಪ್ಪ ಆಳ್ವ ಅವರು ಆಹ್ವಾನವನ್ನು ಕಳಿಸಿದ್ದರೇ?

ಶ್ರೀ ವೀರೇಂದ್ರ ಪಾಟೀಲ್:— ತಾವು ಕೂಡ ಗೃಹಖಾತೆಯ ಮಂತ್ರಿಗಳಾಗಿದ್ದಿರಿ. ಪೋಲೀಸರ ಕರ್ತವ್ಯ ಏನು ಎಂಬುದು ತಮಗೆ ಗೊತ್ತು. ಸಾರ್ವಜನಿಕ ಸಭೆ ಅಥವಾ ಮೆರವಣಿಗೆ ನಡೆದಾಗ ಸಂಬಂಧ ಪಟ್ಟವರು ಯಾರೂ ಪೋಲೀಸರಿಗೆ ಲಾಟಿ ಮತ್ತು ಗನ್ ತೆಗೆದುಕೊಂಡು ಬನ್ನಿ ಎಂದು ಆಹ್ವಾನ ಕೊಡ ಬೇಕಾಗಿಲ್ಲ. ಪೋಲೀಸಿನವರೇ ಅಂತಹ ಕಡೆಗಳಿಗೆ ಶಾಂತಿಭಂಗವಾಗದಂತೆ ನೋಡಿಕೊಳ್ಳಲು ಬರುತ್ತಾರೆ. ಅದು ಅವರ ಜವಾಬ್ದಾರಿ. ಪಬ್ಲಿಕ್ ಮೀಟಿಂಗ್ ಆಗುವ ಕಡೆ ಸುತ್ತಮುತ್ತ ನಿಲ್ಲುತ್ತಾರೆ. ಮೆರವಣಿಗೆ ಹೋಗುವಾಗ ಅಕ್ಕಪಕ್ಕಗಳಲ್ಲಿ ಅವರು ಸಹ ಇರುತ್ತಾರೆ.

ಶ್ರೀ ವಿ. ಎಲ್. ಶಿವಪ್ಪ:— ನನ್ನ ಕ್ಷೇತ್ರದಲ್ಲಿ ಒಂದು ಗಲಾಟೆ ನಡೆದಾಗ ಪೋಲೀಸಿನವರು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಆ ಬಗ್ಗೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ.

MR. SPEAKER:— I have already informed the House that I would put the demand to vote at 6 P. M I am doing that as per the mandate from the House. Even if the Chief Minister were to be speaking, I would request him to stop and then put the demands to vote I there fore request the Members to kindly co-operate with me.

ಶ್ರೀ ವಿ ಎಲ್. ಶಿವಪ್ಪ:— ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶವೇ ಇಲ್ಲವೇ?
ಅಧ್ಯಕ್ಷರು ಸಮಯ ಸಾಕಷ್ಟು ಇಲ್ಲ.

ಶ್ರೀ ವೀರೇಂದ್ರ ಪಾಟೀಲ್ :— ನನಗೆ ಕೊಟ್ಟಿರುವ ಸಮಯದಲ್ಲಿ ಇನ್ನು ಕೇವಲ ೧೫ ನಿಮಿಷಗಳು ಮಾತ್ರ ಇದೆ. ಆದ್ದರಿಂದ ನಾನು ಜಾಗ್ರತೆ ಉತ್ತರ ಕೊಡಬೇಕಾಗಿದೆ ಮಂಡ್ಯದಲ್ಲಿ ನಡೆದಂತಹ ಒಂದು ಸಭೆಯ ಬಗ್ಗೆ ಮಾನ್ಯ ಸಿದ್ಧವೀರಪ್ಪನವರು ಹೇಳಿದ್ದಾರೆ. ಚುನಾವಣೆಯ ಸಮಯದಲ್ಲಿ ಆ ರೀತಿ ಗದ್ದಲ ವಾಗುವುದು ಮತ್ತು ಕಾವೇರುವುದು ಸ್ವಾಭಾವಿಕ. ಇದು ಎಲ್ಲರಿಗೂ ಗೊತ್ತಿದೆ. ಪೋಲೀಸಿನವರು ಅಲ್ಲಿಗೆ ಹೋಗುವುದರೊಳಗೆ ಅಲ್ಲಿ ಗಲಾಟೆ ನಡೆದುಹೋಗಿತ್ತು. ಆ ಬಗ್ಗೆ ಎರಡು ಕೇಸ್‌ಗಳು ರಿಜಿಸ್ಟರ್ ಆಗಿದೆ ಯೆಂಬುದನ್ನು ಮಾತ್ರ ಹೇಳುತ್ತೇನೆ. ವಿರೋಧ ಪಕ್ಷದವರು ಸಭೆ ನಡೆಸಿದರೆ ಪೋಲೀಸಿನವರ ಪ್ರೊಟೆಕ್ಷನ್ ಕೊಡಬಾರದೆಂಬ ದೃಷ್ಟಿ ನನಗೆ ಇಲ್ಲ. ಶ್ರೀಮತಿ ತಾರಕೇಶ್ವರಿಷಿಷ್ಣ ಅವರು ಮೈಸೂರಿನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಿದ್ದಾಗ ಕೆಲವರು ಕಲ್ಲುಗಳನ್ನು ಎಸೆದರು. ಆದ್ದರಿಂದ ಕೆಲವು ಪೋಲೀಸ್ ಅಧಿಕಾರಿಗಳಿಗೂ ಕೂಡ ಗಾಯಗಳಾಗಿವೆ. ಎಲ್ಲಿ ಏನಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ಮೊದಲೇ ಎಚ್ಚರಿಕೆ ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಕೂಡ ಎಲ್ಲೆಲ್ಲಿ ಸಾಧ್ಯವಾಗುತ್ತದೋ ಅಲ್ಲೆಲ್ಲಾ ಮುಂಜಾಗ್ರತೆ ಕ್ರಮವನ್ನು ಪೋಲೀಸ್ ಅಧಿಕಾರಿಗಳು ಕೈಕೊಳ್ಳುತ್ತಾರೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ:— ಮಂಡ್ಯದಲ್ಲಿ ಪೋಲೀಸರು ಮುನ್ನೆಚ್ಚರಿಕೆ ಕ್ರಮವನ್ನು ಏತಕ್ಕೆ ಕೈಕೊಳ್ಳಲಿಲ್ಲ?

ಶ್ರೀ ವೀರೇಂದ್ರ ಪಾಟೀಲ್: — ಅಲ್ಲಿ ಕೇವಲ ೫-೧೦ ನಿಮಿಷಗಳಲ್ಲಿ ಗಲಾಟೆ ನಡೆದುಹೋಗಿತ್ತು. ಆ ಬಗ್ಗೆ ಎರಡು ಕೇಸ್‌ಗಳು ರಿಜಿಸ್ಟರ್ ಆಗಿವೆ. ಪೋಲೀಸರು ಕಣ್ಣು ಮುಚ್ಚಿ ಕುಳಿತಿದ್ದಾರೆಂದು ನಾನು ಹೇಳುವುದಿಲ್ಲ. ಆದರೂ ಕೆಲವು ಸಲ ಮುಂದೆ ಏನಾಗುತ್ತದೆ ಎಂಬುದನ್ನು ತಿಳಿಯುವುದು ಕಷ್ಟವಾಗುತ್ತದೆ. ಪೋಲೀಸರಿಗೆ ವಸತಿ ಸೌಕರ್ಯ ಒದಗಿಸುತ್ತಿರುವ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ವಸತಿ ಸೌಕರ್ಯ ಒದಗಿಸಿಕೊಡುವುದರಲ್ಲಿ ನಾವು ಎರಡನೆಯ ರಾಜ್ಯಕ್ಕಿಂತ ಮುಂದೆ ಇದ್ದೇವೆ. ಈಗಾಗಲೇ ೬೭ಪರ್‌ಸೆಂಟ್‌ವರೆಗೆ ವಸತಿ ಸೌಕರ್ಯ ಒದಗಿಸಿದ್ದೇವೆ. ಇದಕ್ಕಾಗಿ ಬಡ್ಜೆಟ್‌ನಲ್ಲಿ ಪ್ರತಿವರ್ಷವೂ ೭೦-೭೫ ಲಕ್ಷ ರೂಪಾಯಿಗಳನ್ನು ಒದಗಿಸುತ್ತಿದ್ದೇವೆ. ಇನ್ನು ಐದಾರು ವರ್ಷಗಳಲ್ಲಿ ಪ್ರತಿಯೊಬ್ಬ ಪೋಲೀಸ್ ಕಾನ್ಸ್‌ಟೇಬಲ್‌ಗೂ ಕೂಡ ವಸತಿ ಸೌಕರ್ಯ ಒದಗಿಸಿಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಶ್ರೀಮಾನ್ ಸಿದ್ಧವೀರಪ್ಪನವರು ವಿಜಿಲೆನ್ಸ್ ಕಮಿಷನ್‌ಗೆ ಹೆಚ್ಚು ಅಧಿಕಾರ ಕೊಡಬೇಕೆಂದು ಹೇಳಿದಾರೆ. ಈಗ ಶಿಕ್ಷೆ ಕೊಡುವ ಅಧಿಕಾರ ಅವರಿಗೆ ಇಲ್ಲ. ಏನಿದ್ದರೂ ಅವರು ವಿಚಾರಣೆ ನಡೆಸಿ ಏನು ಶಿಕ್ಷೆ ಕೊಡಬೇಕು ಎಂಬ ಬಗ್ಗೆ ರೆಕಮೆಂಡೇಷನ್ ಮಾಡುವ ಅಧಿಕಾರ ಮಾತ್ರ ಅವರಿಗೆ ಇದೆ.

ಶ್ರೀ ಎಚ್. ಸಿದ್ಧವೀರಪ್ಪ:— ನಾನು ಹೇಳಿದ್ದು ಇನ್ನೂ ಹೆಚ್ಚಿನ ಪವರ್‌ನ್ನು ಅವರಿಗೆ ಕೊಡಬೇಕು ಎಂಬುದಾಗಿ.

ಶ್ರೀ ವೀರೇಂದ್ರ ಪಾಟೀಲ್:— ಶಿಕ್ಷೆ ಕೊಡುವಂತಹ ಪವರ್‌ನ್ನು ಸಹ ಅವರಿಗೆ ಕೊಡುವುದಕ್ಕಾಗುವುದಿಲ್ಲ. ಆ ರೀತಿಯ ಒಂದು ಲಘು ನಿರ್ಣಯ ಮಾಡುವುದಕ್ಕಾಗುವುದಿಲ್ಲ. ಕೆಲವು ನೌಕರರ ಸಂಬಂಧದಲ್ಲಿ ವಿಜಿಲೆನ್ಸ್ ಕಮಿಷನ್‌ನವರು ಎರಡು ಇನ್‌ಕ್ರಿಮೆಂಟ್, ೧೦ ಇನ್‌ಕ್ರಿಮೆಂಟ್‌ಗಳನ್ನು ಸಾ ಪ್ ಮಾಡಬೇಕೆಂದು

ರೆಕಮೆಂಡೇಷನ್ ಮಾಡಿದರೆ ಅದನ್ನು ಸಂಬಂಧಪಟ್ಟ ಇಲಾಖೆಯವರು ಜಾರಿಗೆ ತಂದಿದ್ದಾರೆ ಅದರಲ್ಲಿ ಯಾವ ರಿಯಾಯಿತಿಯನ್ನೂ ತೋರಿಸಿಲ್ಲ. ವಿಜಿಲೆನ್ಸ್ ಕಮಿಷನ್‌ನವರು ಏನಾದರೂ ಕೆಲವೊಂದು ಕೇಸ್‌ಗಳಲ್ಲಿ ಹೆಚ್ಚಿನ ಶಿಕ್ಷೆ ವಿಧಿಸಬೇಕೆಂದು ರೆಕಮೆಂಡೇಷನ್ ಮಾಡಿದ್ದರೆ ಅದು ಕ್ಯಾಬಿನೆಟ್ ಕೇಸ್ ಆಗುತ್ತದೆ. ಅಲ್ಲಿ ನಾವು ತೀರ್ಮಾನ ಕೈಕೊಳ್ಳುತ್ತೇವೆ ಕೆಲವು ಸಂದರ್ಭಗಳಲ್ಲಿ ವಿಜಿಲೆನ್ಸ್ ಕಮಿಷನ್‌ನವರು ರೆಕಮೆಂಡ್ ಮಾಡಿದ್ದಕ್ಕಿಂತ ಹೆಚ್ಚಿನ ಶಿಕ್ಷೆ ಕೊಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಯಾವ ಅಧಿಕಾರಿಗಳ ಬಗ್ಗೆ ಕರಪ್‌ಷನ್ ಚಾರ್ಜಸ್ ಪ್ರೂವ್ ಆಗಿರುತ್ತದೋ ಅಂತಹವರನ್ನು ಕಂಪಲ್‌ಸರಿಯಾಗಿ ರಿಟೈರ್‌ಮೆಂಟ್ ಮಾಡಬೇಕೆಂದು ಮೊನ್ನೆ ಮೊನ್ನೆ ಕ್ಯಾಬಿನೆಟ್‌ನಲ್ಲಿ ನಿರ್ಣಯ ಕೈಕೊಂಡಿದ್ದೇವೆ. ತಪ್ಪಿತಸ್ಥರು ಯಾರೇ ಆಗಿರಲಿ, ಅವರ ಬಗ್ಗೆ ಸಹಾನುಭೂತಿ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಎಕ್ಸ್‌ಟೆನ್‌ಷನ್ ಕೊಡುವ ಬಗ್ಗೆ, ರೀ-ಎಂಪ್ಲಾಯ್‌ಮೆಂಟ್ ಕೊಡುವ ಬಗ್ಗೆ ಆ ಕೇಸ್ ಕ್ಯಾಬಿನೆಟ್ ಮುಂದೆ ಬರಬೇಕಾಗುತ್ತದೆ. ನನ್ನ ಮನಸ್ಸಿಗೆ ಬಂದಂತೆ ನಾನು ರೀ-ಎಂಪ್ಲಾಯ್‌ಮೆಂಟ್ ಕೊಡುವ ಪ್ರಶ್ನೆ ಇಲ್ಲ, ಮಹಮದಾಲಿಯವರು ಅವರ ಮನಸ್ಸಿಗೆ ಬಂದಂತೆ ಅವರು ರೀ-ಎಂಪ್ಲಾಯ್‌ಮೆಂಟ್ ಕೊಡುವ ಪ್ರಶ್ನೆ ಇಲ್ಲ. ಅಂತಹ ಪ್ರಶ್ನೆಗಳು ಇದ್ದಾಗ ಅದು ಕ್ಯಾಬಿನೆಟ್ ಮುಂದೆ ಬರಬೇಕಾಗುತ್ತದೆ. ನಿಜ ಹೇಳಬೇಕೆಂದರೆ ಟೆಕ್ನಿಕಲ್ ಪೋಸ್ಟ್‌ಗೆ ಯಾರು ಸಿಗುವುದಿಲ್ಲವೋ ಅಂತಹ ಸಮಯದಲ್ಲಿ ಅವಶ್ಯಕತೆ ಇದ್ದರೆ ಮಾತ್ರ ರೀ-ಎಂಪ್ಲಾಯ್‌ಮೆಂಟ್ ಕೊಡುತ್ತಿದ್ದೇವೆಯೇ ಹೊರತು ಎಕ್ಸ್‌ಟೆನ್‌ಷನ್ ಕೊಡುತ್ತಿಲ್ಲ. ಶೇಕಡ ಒಂದರಷ್ಟು ಕೂಡ ಎಕ್ಸ್‌ಟೆನ್‌ಷನ್ ಕೊಡುತ್ತಿಲ್ಲ. ಸೆಲೆಕ್ಟೆಡ್ ಕೇಸ್‌ನಲ್ಲಿ ಕೊಟ್ಟಿದ್ದರೆ ಕೊಟ್ಟಿರಬಹುದು ಆಪ್ಟೆ. ರಿ-ಎಂಪ್ಲಾಯ್‌ಮೆಂಟ್ ಕೂಡ ಅವಶ್ಯಕತೆ ನೋಡಿ ಕೊಂಡು ಕೊಡುತ್ತಿದ್ದೇವೆ. ಇಂತಹ ವಿಷಯದಲ್ಲಿ ಯಾವ ತರಹ ಫೇವರಿಟಿಸಮ್‌ನ್ನು ತೋರಿಸುತ್ತಿಲ್ಲ.

SRI H. SIDDAVEERAPPA:— I gave you som einstances of the Forest Department where you have given extension of servicе for thrce years in one case. In another case also you are now going to give extension for three years.

ಶ್ರೀ ವೀರೇಂದ್ರ ಪಾಟೀಲ್:— ಆ ಬಗ್ಗೆ ಹೇಳುವುದಕ್ಕೆ ನನಗೆ ಕಾಲಾವಕಾಶ ಇಲ್ಲ ಇದ್ದರೆ ವಿವರವಾಗಿ ಹೇಳುತ್ತಿದ್ದೆ. ಅವರು ಹೇಳುತ್ತಿರುವುದು ಎಕ್ಸ್‌ಟೆನ್‌ಷನ್ ಕೊಟ್ಟಿದ್ದಾರೆ ಎಂಬುದಾಗಿ. ಅರಣ್ಯ ಇಲಾಖೆಯಲ್ಲಿ ನಾವು ಕೆಲವು ಅಧಿಕಾರಿಗಳಿಗೆ ಎಕ್ಸ್‌ಟೆನ್‌ಷನ್ ಕೊಟ್ಟಿದ್ದೇವೆ.

ಇಂಡಿಯನ್ ಫಾರೆಸ್ಟ್ ಸರ್ವೀಸಿಗೆ ಸೆಲೆಕ್ಟ್ ಆಗಿದ್ದಂತಹವರು ಸೆಲೆಕ್ಷನ್ ಕಮಿಟಿಯಲ್ಲಿ ಒಬ್ಬ ಮೆಂಬರಾಗಿದ್ದರು. ಎಂದರೆ ಚೀಫ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ ಆವರು ಆ ಕಮಿಟಿಯಲ್ಲಿ ಒಬ್ಬ ಸದಸ್ಯರಾಗಿದ್ದಾರೆ. ಆದ್ದರಿಂದ ಟೆಕ್ನಿಕಲ್ ಗ್ರೌಂಡ್ ಮೇಲೆ ಹೈಕೋರ್ಟಿನವರು ಆ ಲಿಸ್ಟನ್ನು ಕ್ವಾಷ್ ಮಾಡಿದರು. ಈಗ ಕೇಂದ್ರ ಸರ್ಕಾರದವರು ಈ ಬಗ್ಗೆ ಸುಪ್ರೀಮ್ ಕೋರ್ಟಿಗೆ ಅಪೀಲು ಹೋಗುವುದಕ್ಕೆ ವಿಚಾರ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಆ ಲಿಸ್ಟ್ ಹೈಕೋರ್ಟಿನಲ್ಲಿ ಕ್ವಾಷ್ ಆಗದಿದ್ದರೆ ಆ ಲಿಸ್ಟಿನಲ್ಲಿರುವವರೆಲ್ಲರೂ ಕಂಟಿನ್ಯೂ ಆಗುತ್ತಿದ್ದರು. ಆದರೆ ಅದು ಹೈಕೋರ್ಟಿನಲ್ಲಿ ಕ್ವಾಷ್ ಆದುದಕ್ಕೆ ನಾವು ಜವಾಬ್ದಾರರಲ್ಲ.

SRI H. SIDDAVEERAPPA :- In February 1970 they have received a letter from the Central Government stating that they must apply the State Service Rules only in that case of these three. They have not disclosed that fact.

ಶ್ರೀ ವೀರೇಂದ್ರಪಾಟೀಲ್:- ಬಹುಶ: ಮಾನ್ಯ ಸದಸ್ಯರು ಇದನ್ನು ಹೇಳಬಾರದಾಗಿತ್ತು ಅನಿಸುತ್ತದೆ. ಅವರ ಅಭಿಪ್ರಾಯದ ಪ್ರಕಾರ ಇಂಡಿಯಾ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಏನೇನು ಆದೇಶಗಳು ಪತ್ರಗಳು ಬರುತ್ತವೆಯೋ ಅದರ ಕಾಪಿಗಳು ಇವರಿಗೆ ಎಂಡಾರ್ಸ್ ಆಗುತ್ತವೆ ಎಂದು ಕಾಣುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ:— ಅದರ ಕಾಪಿಗಳು ನಮಗೆ ನಿಮ್ಮ ಆಫೀಸಿನಿಂದಲೇ ಬರಂತ್ತವೆ.

ಶ್ರೀ ವೀರೇಂದ್ರಪಾಟೀಲ್.— ನಮ್ಮ ಆಫೀಸಿನವರು ನಿಮಗೆ ಏಜೆಂಟರಾಗಿದ್ದಾರೆ ಎಂದು ಅರ್ಥವಾಗುತ್ತದೆ ಒಬ್ಬರು ಅಧಿಕಾರದಲ್ಲಿರುವಾಗ ಸರ್ಕಾರಿ ಸಿಬ್ಬಂದಿಯವರು ಇನ್ನೊಬ್ಬರಿಗೆ ವಿಧೇಯರಾಗಿರುವುದು ಗಂಭೀರವಾದ ವಿಷಯ.

ಶ್ರೀ ಎಚ್. ಸಿದ್ದವೀರಪ್ಪ:– ಅದು ಅಧಿಕಾರಿಗಳದು ತಪ್ಪು ಎಂದು ಅವರನ್ನು ದೂರುವುದಕ್ಕೆ ಹೋಗ ಬೇಡಿ. ಆ ವಿಷಯಗಳನ್ನೆಲ್ಲಾ ತಿಳಿಯುವ ಶಕ್ತಿ ನಮಗೆ ಇದೆ.

ಶ್ರೀ ವೀರೇಂದ್ರ ಪಾಟೀಲ್:-ಇನ್ನು ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟಿನ ಬಗ್ಗೆ ಹೇಳಬೇಕಾಗಿದ್ದರೆ, ಸ್ಟೇಟ್ ರೀ ಆರ್ಗನೈಜೇಷನ್ ಆದಮೇಲೆ ನಮ್ಮ ರಾಜ್ಯದಲ್ಲಿ ಏನು ಪರಿಸ್ಥಿತಿ ಉಂಟಾಗಿದೆ ಅದು ಅನೇಕ ಕಡೆಗಳಲ್ಲಿ ಇರುವುದಿಲ್ಲ. ಮಹಾರಾಷ್ಟ್ರದಲ್ಲಾಗಲೀ ಆಂಧ್ರದಲ್ಲಾಗಲೀ ನಮ್ಮ ರಾಜ್ಯದ ಪರಿಸ್ಥಿತಿ ಇಲ್ಲ. ನಮ್ಮ ರಾಜ್ಯಕ್ಕೆ ೫ ಭಾಗಗಳು ಬಂದಿದೆ. ಇಲ್ಲಿ ಇಂಟರ್ ಸ್ಟೇಟ್ ಸೀನಿಯಾರಿಟಿ ಪ್ರಶ್ನೆ ಬಹಳ ದೊಡ್ಡ ಕಷ್ಟವಾಗಿದೆ. ಆದರೂ ಸಹ ಇವ್ವತ್ತು ಈ ಕೆಲಸ ಬಹಳ ಮಟ್ಟಿಗೆ ಆಗಿದೆ ಈಗ ಏನಾಗಿದೆ ಎಂದರೆ ಆಫೀಸರ ಸೀನಿಯಾರಿಟಿ ಬಗ್ಗೆ After observing the necessary formalities the final Inter-State Seniority list has so far been published for 2580 Gazetted Officers and 32837 Non-Gazetted Officers leaving a balance of only 278 Gazetted Officers and 3362 Non Gazetted Officers. Thus, more than 90 percent of the work in respect of both Non-Gazetted and Gazetted Officers has been completed. ಇನ್ನು ೧೦ ಪರ್ಸೆಂಟ್ ಮಾತ್ರ ಉಳಿದುಕೊಂಡಿದೆ ಇದಕ್ಕೆ ಸರ್ಕಾರದವರು ಕಾರಣ ಎಂದು ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಏನಾಗುತ್ತದೆ ಎಂದರೆ ಅಧಿಕಾರಿಗಳು ಮೇಲಿಂದ ಮೇಲೆ ಸೀನಿಯಾರಿಟಿಯ ಬಗ್ಗೆ ಕೋರ್ಟಿಗೆ ಹೋಗುತ್ತಾರೆ, ಸ್ಟೇ ಬರುತ್ತದೆ. ಆಗ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ:– ಸರಿಯಾಗಿ ಮಾಡಿದರೆ ಕೋರ್ಟಿಗೆ ಏತಕ್ಕೆ ಹೋಗುತ್ತಾರೆ ?

ಶ್ರೀ ವೀರೇಂದ್ರಪಾಟೀಲ್:– ಅದನ್ನು ಸರಿಯಾಗಿ ಮಾಡುವುದು ಎಂದರೆ ಅದನ್ನು ನಾವು ಯಾರೂ ಮಾಡುವುದಿಲ್ಲ. ಅದನ್ನು ಕೇಂದ್ರ ಸರ್ಕಾರದವರು ಮಾಡುತ್ತಾರೆ ನಮ್ಮಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನ್ ಚೇರ್ಮನ್ ಅವರು ಸ್ಟೇಟ್ ಜಡ್ಜ್‌ಷಿಪ್ ಕಮಿಟಿಯಲ್ಲಿ ಇದ್ದಾರೆ. ಅವರು ಅದರಲ್ಲಿ ಭಾಗವಹಿಸುತ್ತಾರೆ. ಅದರಲ್ಲಿ ಸರ್ಕಾರದ ನೇರವಾದ ಹಸ್ತಕ್ಷೇಪ ಇರುವುದಿಲ್ಲ. ಸೀನಿಯಾರಿಟಿ ಲಿಸ್ಟ್ ಫೈನಲೈಜ್ ಮಾಡುವುದರಲ್ಲಿ ೯೦ ಪರ್ಸೆಂಟ್ ಕೆಲಸ ಆಗಿದೆ. ಇದರಲ್ಲಿ ೧೦ ಪರ್ಸೆಂಟ್ ಕೆಲಸ ಮಾತ್ರ ಉಳಿದಿದೆ. ಇದಕ್ಕೆ ಕಾರಣ ಏನು ಎಂಬುದನ್ನು ನಾನು ಈಗಾಗಲೇ ತಮಗೆ ತಿಳಿಸಿದ್ದೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ಡಿವಿಜನಲ್ ಕಮಿಷನರ ಹುದ್ದೆಯನ್ನು ಅಬಾಲಿಷ್ ಮಾಡ ಬೇಕೆಂದು ಹೇಳಿದ್ದಾರೆ, ಈ ಡಿವಿಜನಲ್ ಕಮಿಷನರ ಹುದ್ದೆಗಳನ್ನು ರದ್ದು ಮಾಡುವ ಯೋಚನೆ ಸರ್ಕಾರಕ್ಕೆ ಇಲ್ಲ. ಆ ಪ್ರಪೋಜಲ್ ಸರ್ಕಾರದ ಮುಂದೆ ಇಲ್ಲ. ಡಿವಿಜನ್ ಲೆವೆಲ್‌ನಲ್ಲಿ ಎಲ್ಲಾ ಇಲಾಖೆಗಳ ಕೆಲಸ ಕಾರ್ಯಗಳಿಗೂ ಸಂಬಂಧಪಟ್ಟ ಹಾಗೆ ಎಂದರೆ ಎಜುಕೇಷನ್, ಪಿ. ಡಬ್ಲ್ಯೂ, ಡಿ. ರೆವಿನ್ಯೂ, ಫಾರೆಸ್ಟ್ ಇತ್ಯಾದಿ ಇಲಾಖೆಗಳ ನಡುವೆ ಹೊಂದಾಣಿಕೆಯನ್ನುಂಟು ಮಾಡಲು ಡಿವಿಜನಲ್ ಕಮಿಷನರ ಹುದ್ದೆ ಇರುವುದು ಅಗತ್ಯ.

ಶ್ರೀ ಎಚ್. ಸಿದ್ದವೀರಪ್ಪ:– ಸ್ವಾಮಿ ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಚರ್ಚೆ ನಡೆದಂತಹ ಕಾಲದಲ್ಲಿ ಹಾಜರು ಇರಲಿಲ್ಲ. ಈಗ ಎರಡು ದಿವಸಗಳಿಂದಲೂ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಆದರೆ ಮುಖ್ಯ ಮಂತ್ರಿಗಳು ಒಂದು ದಿವಸವೂ ಸರಿಯಾಗಿ ಇಲ್ಲಿ ಕುಳಿತುಕೊಂಡು ಈ ಸಭೆಯಲ್ಲಿ ಮಾನ್ಯ ಸದಸ್ಯರು ಏನು ಹೇಳುತ್ತಾರೆ ಎಂಬುದನ್ನು ಕೇಳಲಿಲ್ಲ. ಇದು ಇವರು ಈ ಸಭೆಗೆ ತೋರಿಸಿದ ಗೌರವ. ಯಾರೋ ಬರೆದು ಕೊಟ್ಟದ್ದನ್ನು ತಂದು ಇಲ್ಲಿ ಓದುತ್ತಿದ್ದಾರೆ. ಈ ಸಭೆಯ ಅಭಿಪ್ರಾಯ ಏನಿದೆ, ಏತಕ್ಕೋಸ್ಕರ ಇವರು ಹೇಳುತ್ತಾರೆ, ಇವರು ಏನು ಹೇಳುತ್ತಾರೆ ಎಂಬುದನ್ನು ಕೇಳತಕ್ಕಂಥ ಹೊಣೆ ಇವರಿಗೆ ಇಲ್ಲ. ಆದ್ದರಿಂದ ನ್ಯಾಯವಾಗಿ ಇವರು ಈ ಸಭೆಯ ಸದಸ್ಯರು ಏನು ಹೇಳುತ್ತಾರೆ ಎಂಬುದನ್ನು ಇಲ್ಲಿ ಕುಳಿತುಕೊಂಡು ಕೇಳಬೇಕು. ಆದ್ದರಿಂದ ಇನ್ನು ಮೇಲೆ ಯಾವ ಮಂತ್ರಿಗಳೇ ಆಗಲಿ ಅವರ ಡಿಪಾರ್ಟ್‌ಮೆಂಟಿನ ಬೇಡಿಕೆ ಈ ಸಭೆಯ ಮುಂದೆ ಬಂದಾಗ ಅವರು ಇಲ್ಲಿ ಕುಳಿತುಕೊಂಡು ಮಾನ್ಯ ಸದಸ್ಯರು ಏನು ಹೇಳುತ್ತಾರೆ ಎಂಬುದನ್ನು ಕೇಳಬೇಕು ಎಂದು ಒಂದು ರೂಲಿಂಗ್ ಅನ್ನು ತಾವು ಕೊಡಬೇಕು.

MR. SPEAKER.– It is very proper that the Minister concerned should be present in the House and take note of the comments made by members in the House. I hope the Goverament will take note of this point. It is only a question of propriety and therefore there is no point of order involved in it,

ಶ್ರೀ ವೀರೇಂದ್ರ ಪಾಟೀಲ್.– ಕೊನೆಯಲ್ಲಿ ಇನ್ನು ಒಂದೆರಡು ವಿಷಯಗಳನ್ನು ಮಾತ್ರ ಹೇಳಬೇಕಾಗಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರು ನನಗೆ ಇನ್ನು ೫ ನಿಮಿಷ ಕಾಲಾವಕಾಶವನ್ನು ಕೊಡಬೇಕು.

ಅಧ್ಯಕ್ಷರು.– ಆಗುವುದಿಲ್ಲ ೬ ಗಂಟೆಗೆ ಸರಿಯಾಗಿ ಮುಗಿಸಬೇಕು.

ಶ್ರೀ ವೀರೇಂದ್ರಪಾಟೀಲ್.– ನಾನು ಈ ಸಭೆಯಲ್ಲಿ ಇದ್ದು ಮಾನ್ಯ ಸದಸ್ಯರು ಹೇಳುವುದನ್ನು ಕೇಳಲಿಲ್ಲ. ಯಾರೋ ಬರೆದುಕೊಟ್ಟಿದನ್ನು ತಂದು ನಾನು ಹೇಳುತ್ತಿದ್ದೇನೆ ಎಂದು ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದರು. ಅದು ಸರಿಯಲ್ಲ. ಮಾನ್ಯ ಸದಸ್ಯರು ಈ ಸಭೆಯಲ್ಲಿ ಪ್ರಸ್ತಾಪಿಸಿದ ಅನೇಕ ವಿಚಾರಗಳನ್ನು ನಾನು ಹೇಳಿದ್ದೇನೆ. ಮಾನ್ಯ ಸದಸ್ಯರು ಹೇಳಿದಂತಹ ನೋಟ್ಸ್ ಈಗ ನನ್ನ ಹತ್ತಿರ ಇದೆ. ಸಾಕಷ್ಟು ಸಮಯವಿಲ್ಲದ್ದರಿಂದ ಮಾನ್ಯ ಸದಸ್ಯರು ಪ್ರಸ್ತಾಪಿಸಿದ ಪ್ರತಿಯೊಂದು ವಿಚಾರವನ್ನೂ ನಾನು ಹೇಳುವುದಕ್ಕೆ ಆಗಲಿಲ್ಲ. ಶ್ರೀಮಾನ್ ಹುಚ್ಚಮಾಸ್ತಿಗೌಡರು ಅವರ ಭಾಷಣದಲ್ಲಿ ನನ್ನ ಮೇಲೆ ಒಂದು ಛಾರ್ಜ್ ಮಾಡಿದ್ದಾರೆ. ಅದು ಏನೆಂದರೆ ಮುಖ್ಯಮಂತ್ರಿಗಳು ಪುಣೆಯ ಒಂದು ಕೈಗಾರಿಕೋದ್ಯಮದಲ್ಲಿ ಭಾಗಸ್ಥರಾಗಿದ್ದಾರೆ. ಇವರಿಗೆ ೩೫೦ ಎಂದು ಹಣ ಎಲ್ಲಿಂದ ಬಂತು ಎಂದು ಹೇಳಿದ್ದಾರೆ.....

SRI H. SIDDAVEERAPPA – I request the Chair to apply the guill tine correctly to the very second, and the Chief Minister may give his personal explanation tomorrow.

ಶ್ರೀ ವೀರೇಂದ್ರಪಾಟೀಲ್.– ನನಗೆ ಇನ್ನು ೫ ನಿಮಿಷ ಹೆಚ್ಚು ಕಾಲಾವಕಾಶವನ್ನು ಮಾನ್ಯ ಅಧ್ಯಕ್ಷರು ಕೊಡಬೇಕು.

ಶ್ರೀ ವಿ. ಎಲ್. ಶಿವಪ್ಪ.– ಹಾಗಾದರೆ ನಮಗೂ ವಿವರಣೆ ಕೇಳಲು ಅವಕಾಶವನ್ನು ಕೊಡಬೇಕು.

MR. SPEAKER.– ಇಲ್ಲ, ಆಗುವುದಿಲ್ಲ. The question is–

"That the respective sums not exceeding those mentioned in Demands Nos 10,12 and 13 be granted to the Government to defray the charges which will come in course of payment for the financial year ending 31st day of March 1971."

(The motion was adopted.)

(As directed by the chair the motee for Demeds for an grants adopted by the chair are reproduced below.

Demand No. 10.– General Administration.

19. General Administration.

"That a sum not exceeding Rs. 5,13,15,000 be granted to the Government to defray the charges which will come in course of payment during the financial year for the period ending 31st day of March 1971, in respect of General Administration."

Demand No. 12.- Jails.

22 Jails.

"That a sum not exceeding Rs. 86,24,000 be granted to the Government to defray the charges which will come in course of payment during the financial year for the period ending 31st day of March 1971, in respect of Jails."

Demand No. 13.- Police.

23. Police.

"That a sum not exceeding Rs. 9,58,60,000 be granted to the Government to defray the charges which will come in course of payment during the financial year for the period ending 31st day of March 1971, in respect of Police."

MR. SPEAKER.- The Houes will now rise and meet tomorrow at 8-30 A.M. on 14th March 1970.

The House adjourned at Six of the clock to meet again at Thiry Minutes past Eight of the clock on saturday the 14th March, 1970

WD 14692—GPB—520—17-8-1970